ಭಾನುವಾರ, ಜೂನ್ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 154 | ಪುಟ 18

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಪರಿಸರ ದಿನದ ನೆವದಲ್ಲಿ
ಎ.ಸಿ.ಲೋಕದಲ್ಲೊಂದು ಸುತ್ತು...



ವಿಶ್ವ ಬ್ಯಾಂಕ್ ಅಧ್ಯಕ್ಷರಾಗಿ ಅಜಯ್ ಬಂಗಾ ಅಧಿಕಾರ ಸ್ವೀಕಾರ 6

ಬಾಡಿಗೆದಾರರಿಗೂ ಯೋಜನೆ ಲಾಭ ಸಿಗಲಿದೆ –ಸಚಿವ ಕೆ.ಜೆ.ಜಾರ್ಜ್

'15 ಸಾವಿರ ಕಾನ್‌ಸ್ಟೆಬಲ್ ನೇಮಕ' 4A

ಶೇ 96 ಗ್ರಾಹಕರಿಗೆ 'ಗೃಹಜ್ಯೋತಿ' ಲಾಭ 4

ಅರಣ್ಯ ಸಂಪನ್ಮೂಲಕ್ಕೆ ಬ್ರ್ಯಾಂಡ್ ಭಾಗ್ಯ: ದಟ್ಟ ಅಡವಿಯೊಳಗೆ ಉದ್ಯೋಗ ಸೃಷ್ಟಿ

ಹುಲಿ ನಾಡಿನಲ್ಲಿ ವಿಶ್ವಾಸ

• ಗಣಪತಿ ಹೆಗಡೆ

ಒಳನೋಟ

ಕಾತೇಲಿ ಕನಸು ನನಸು

ಪ್ರತಿಕ್ರಿಯಿಸಿ: 9606038256

feedback@prajavani.co.in

ಕಾರವಾರ: 'ಕಾಡು ಹೊರಜಗತ್ತಿಗೆ ಸುಂದರವಷ್ಟೆ. ಇಲ್ಲಿ ಜೀವನ ಕಟ್ಟಿಕೊಂಡವರ ಬವಣೆ ನಮಗಷ್ಟೆ ಗೊತ್ತು. ಸೀಮಿತ ಚೌಕಟ್ಟಿನೊಳಗೆ ದಿನದೂಡುವ ನಮ್ಮ ಆಸೆಗಳೆಲ್ಲವೂ ಬರಿ ಕನಸಷ್ಟೆ ಎಂದು ಭಾವಿಸಿದ್ದೆವು. ಅದಕ್ಕೀಗ ರೆಕ್ಕೆ ಮೂಡುತ್ತಿದೆ...'

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಕುಂಬಾರವಾಡಾದ ಯುವಕ ಮಹಾಬಳೇಶ್ವರ ಮುಖದಲ್ಲಿ ಮಂದಹಾಸ ಬೀರುತ್ತ ಹೀಗೆ ಮಾತು ಆರಂಭಿಸಿದರು. ಕಾಳಿ ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಗೆ ಒಳಪಡುವ ಕಾತೇಲಿ ಗ್ರಾಮ ಪಂಚಾಯ್ತಿಯ ಹಿಂದಿನ ಚಿತ್ರಣ, ಭವಿಷ್ಯದಲ್ಲಿ ಎದುರಾಗಲಿರುವ ಬದಲಾವಣೆಯ ಬಗ್ಗೆ ಅವರ ಮಾತುಗಳಲ್ಲಿ ಭರವಸೆಯ ಪದಗಳೇ ತುಂಬಿಕೊಂಡಿದ್ದವು.

'ಹಿಂದೆಲ್ಲ ಅರಣ್ಯ ಇಲಾಖೆಯ ಅಧಿಕಾರಿಗಳು ಊರಿಗೆ ಬರುತ್ತಿದ್ದಂತೆ ನಮಗೆ ಭಯ ಉಂಟಾಗುತ್ತಿತ್ತು. ಯಾವುದೋ ಕಟ್ಟುಪಾಡಿನ ಆದೇಶ ಹಿಡಿದುಬಂದಿದ್ದಾರೆ ಎಂದು ಆತಂಕಗೊಳ್ಳುತ್ತಿದ್ದೆವು. ಸೌದೆ ತರಲು, ಮನೆ ದುರಸ್ತಿ ಮಾಡಿಕೊಳ್ಳಲು ಅವರು ವಿಧಿಸುತ್ತಿದ್ದ ಕಟ್ಟುಪಾಡು, ಜೀವನ ನಿರ್ವಹಣೆಗೆ ಕಾಡಿನಿಂದ ಸಂಗ್ರಹಿಸಿ ತರುತ್ತಿದ್ದ ಜೇನು ಸಂಗ್ರಹಣೆಗೂ ಉಂಟಾಗುತ್ತಿದ್ದ ಅಡ್ಡಿ... ಇವೆಲ್ಲದರಿಂದ ಅರಣ್ಯ ಇಲಾಖೆ ಅಧಿಕಾರಿಗಳನ್ನು ಕಂಡಾಗಲೆಲ್ಲ ಊರು ತೊರೆದು ಹೋಗಬೇಕೆನ್ನಿಸುತ್ತಿತ್ತು...ಆದರೆ ಈಗ ಅಂತಹ ಸ್ಥಿತಿ ಇಲ್ಲ....' ಎನ್ನುತ್ತ ಕೆಲ ಹೊತ್ತು ಮೌನಕ್ಕೆ ಜಾರಿದರು.

> **'ಸ್ವಯಂ' ಯಶಸ್ವಿಯಾಗುವ ಸಂಪೂರ್ಣ ವಿಶ್ವಾಸವಿದ್ದು ಅದರಲ್ಲಿ ಜಾರಿಗೆ ತರಲಾಗುತ್ತಿರುವ ಎಲ್ಲ ಕಾರ್ಯಕ್ರಮಗಳನ್ನು ಶಾಶ್ವತ ಯೋಜನೆಯಾಗಿ ಮುಂದುವರೆಸುತ್ತೇವೆ**
> **ಕೆ.ವಿ.ವಸಂತ ರೆಡ್ಡಿ,** ಕೆನರಾ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ



ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಕುಂಬಾರವಾಡಾ ಗ್ರಾಮ.

ಮತ್ತೆ ಮಾತು ಆರಂಭಿಸಿದ ಅವರು ಹೇಳಿದ ಪ್ರತಿ ಶಬ್ದಗಳಲ್ಲಿ 'ಹುಲಿ ಓಡಾಡುವ ಕಾಡಿನ ನಡುವೆ ನೆಲೆ ನಿಂತ ಜನರಲ್ಲಿ ಹೊಸ 'ವಿಶ್ವಾಸ' ಮೂಡುತ್ತಿದೆ ಎಂದೆನ್ನಿಸತೊಡಗಿತು. ಆದರೂ ನಂಬಿಕೆ ಬಾರದೇ ಗ್ರಾಮದ ಇನ್ನೂ ಐದಾರು ಜನರನ್ನು ಮಾತನಾಡಿಸಿದಾಗ ಅವರು ಹೇಳಿದ್ದೂ ಕಾತೇಲಿ (ಕುಂಬಾರವಾಡಾ) ಗ್ರಾಮ ಪಂಚಾಯ್ತಿಯಲ್ಲಿ ನಡೆಯುತ್ತಿರುವ ಬದಲಾವಣೆಗಳ ಬಗ್ಗೆಯೇ.

'ಕಾಡಿನಿಂದ ಜೇನು ಕಿತ್ತು ತರುವ ಬದಲು ಜೇನು ಕೃಷಿ ಪಾಠವನ್ನು ಜನರಿಗೆ ಹೇಳಿಕೊಡಲಾಗುತ್ತಿದೆ. ತೆಂಗಿನ ನಾರು ಬಳಸಿ ಸಿದ್ಧ ಉತ್ಪನ್ನ ತಯಾರಿಸುವ ತರಬೇತಿ, ಮಣ್ಣಿನ ಮಡಿಕೆ ತಯಾರಿಕೆಯ ತರಬೇತಿಗೆ ಜನರನ್ನು ಅಣಿಗೊಳಿಸಲಾಗುತ್ತಿದೆ. ಇವೆಲ್ಲದರ ಬಗ್ಗೆ ಪ್ರತಿ ವಾರಕ್ಕೊಮ್ಮೆ ಅರಣ್ಯ ಇಲಾಖೆ ಅಧಿಕಾರಿಗಳು ಊರಿಗೆ ಭೇಟಿ ನೀಡಿ ಮಾಹಿತಿ ಒದಗಿಸುತ್ತಿದ್ದಾರೆ. ಇದರ ಜೊತೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ಘಟಕ ಈಗಾಗಲೇ ತಲೆಯೆತ್ತಿದೆ' ಎಂಬ ಭರವಸೆಯ ಮಾತುಗಳನ್ನು ಆಡಿದ್ದು ಗ್ರಾಮಸ್ಥ ನಿತಿನ್ ಶೆಟ್ಟಿ.

5ನೇ ಪುಟ ನೋಡಿ

'ಅನಂತ' ಪ್ರತಿಭೆಗೆ 'ಸಿನಿ ಸಮ್ಮಾನ'

ಪ್ರಜಾವಾಣಿ@75ರ ಸಂಭ್ರಮದಲ್ಲಿ ಕನ್ನಡ ಚಿತ್ರ ತಾರೆಯರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದ ಸಿನಿ ತಾರೆಯರ ದಂಡೇ ಅಲ್ಲಿ ನೆರೆದಿತ್ತು. ವರ್ಣ ರಂಜಿತ ಅದ್ದೂರಿ ವೇದಿಕೆಯಲ್ಲಿ ಚಂದನವನದ ಪ್ರತಿಭೆಗಳು ಪ್ರಜ್ವಲಿಸಿದರು. ಮನೋಜ್ಞ ಅಭಿನಯದ ಮೂಲಕ ವಿಶ್ವಮಟ್ಟದಲ್ಲಿ ಛಾಪು ಮೂಡಿಸಿರುವ ಕನ್ನಡ ಚಿತ್ರರಂಗದ ಹೊಳೆವ ನಕ್ಷತ್ರ ಅನಂತನಾಗ್ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಪ್ರಜಾವಾಣಿ@75ರ ಸಂಭ್ರಮದ ಅಂಗವಾಗಿ ಇಲ್ಲಿನ ಪ್ರೆಸ್ಟೀಜ್ ಶ್ರೀಹರಿಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಕೇಂದ್ರದಲ್ಲಿ ನಡೆದ ಚೊಚ್ಚಲ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭ ಬಹು ದಿನಗಳ ಕುತೂಹಲಕ್ಕೆ ತೆರೆ ಎಳೆಯಿತು. ಬದುಕಿನ ಅಮೃತ ವರ್ಷ ಆಚರಿಸಿಕೊಂಡಿರುವ ಕನ್ನಡದ ಬಹುಮುಖ ಪ್ರತಿಭೆ ಅನಂತನಾಗ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ನೀಡಿ ಗೌರವಿಸಿದರು. ಈ ಕ್ಷಣಕ್ಕೆ ಚಿತ್ರರಂಗ, ಸಾಹಿತ್ಯ, ರಾಜಕೀಯ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಸಾಕ್ಷಿಯಾದರು.

ಅನಂತನಾಗ್ ಅವರನ್ನು ಗುಣಗಾನ ಮಾಡಿದ ಸಿದ್ದರಾಮಯ್ಯ, ಅವರನ್ನು ಅಪ್ಪಿ ಆಲಿಂಗಿಸಿದರು. ಈ ವೇಳೆ ಅನಂತನಾಗ್ ಅವರು ಭಾವುಕರಾದರು. 'ಅನಂತ' ಪ್ರತಿಭೆಗೆ ನೆರೆದಿದ್ದ ಪ್ರೇಕ್ಷಕರು ಕರತಾಡನದ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡ ಅನಂತನಾಗ್, 'ಇದು ಪ್ರಜಾವಾಣಿಯ ಜತೆಗಿನ ಹಳೆಯ ಋಣ ಅನಿಸುತ್ತದೆ. ಮುಂಬೈನಲ್ಲಿ ರಂಗಭೂಮಿ ನಟನಾಗಿ ಅಭಿನಯ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಬೆಂಗಳೂರಿಗೆ ಬಂದು, ಪ್ರಜಾವಾಣಿ ಕಚೇರಿಗೆ ಬರುವಂತೆ ದೂರವಾಣಿ ಕರೆ ಬಂದಿತು. ಅಲ್ಲಿ ವೈಎನ್. ಕೃಷ್ಣಮೂರ್ತಿ ಸುದ್ದಿ ಸಂಪಾದಕರಾಗಿದ್ದರು. ಅವರನ್ನು ಭೇಟಿ ಮಾಡಿದೆ. ಕೆ.ಎನ್. ಗುರುಸ್ವಾಮಿ, ಕೆ.ಎ. ನೆಟ್ಟಕಲ್ಲಪ್ಪ ಅವರ ದರ್ಶನ ಪಡೆದೆ. ರಾಮಚಂದ್ರ ರಾಯರು ಸಂಪಾದಕರಾಗಿದ್ದರು. ಅಲ್ಲಿ ಜಿ.ವಿ. ಅಯ್ಯರ್, ವೈಎನ್‌ಕೆ ಹಾಗೂ ಗಿರೀಶ ಕಾರ್ನಾಡ ಅವರನ್ನು ಭೇಟಿ ಮಾಡುವಂತೆ ಸೂಚಿಸಿ, ನೀನು ಒಂದು ಸಿನಿಮಾ ಮಾಡಬೇಕು ಅಂದರು. ಮೊದಲ ಚಿತ್ರ 'ಸಂಕಲ್ಪ'ದ ಅವಕಾಶ ದೊರೆತದ್ದು ಅಲ್ಲಿಯೇ' ಎಂದು ಸ್ಮರಿಸಿಕೊಂಡರು.

'ಪ್ರಜಾವಾಣಿಗೆ 75 ಆದಾಗ ನನಗೂ 75 ಆಗಿದೆ. ಇದು ಸಂತಸವನ್ನುಂಟು ಮಾಡಿದೆ. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ರಾಜ್ಯ ಸರ್ಕಾರದಿಂದ 'ಜೀವಮಾನದ ಸಾಧನೆ' ಪ್ರಶಸ್ತಿ ಸಿಕ್ಕಿತ್ತು. ಈಗ ಅವರ ಕೈಯಿಂದಲೇ ಮತ್ತೊಂದು ಬಾರಿ 'ಜೀವಮಾನ ಸಾಧನೆ' ಪ್ರಶಸ್ತಿ ಸಿಕ್ಕಿದೆ' ಎಂದು ಸಂತೋಷ ವ್ಯಕ್ತಪಡಿಸಿದರು.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪ್ರಸ್ತುತ ಪ್ರಾಯೋಜಕತ್ವ ವಹಿಸಿದ ಕಾರ್ಯಕ್ರಮ ಇದಾಗಿತ್ತು.



ಬೆಂಗಳೂರಿನಲ್ಲಿ ಶನಿವಾರ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಟ ಅನಂತನಾಗ್ ಅವರಿಗೆ 'ಜೀವಮಾನ ಸಾಧನೆ' ಪುರಸ್ಕಾರ ನೀಡಿ ಗೌರವಿಸಿದರು. ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಕೆ.ಎನ್. ಶಾಂತ ಕುಮಾರ್ ಹಾಗೂ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

'ನನ್ನ ಮೇಲೆ ದೆವ್ವ ಬರುತ್ತದೆ'

ನಿರೂಪಕ ರಮೇಶ್ ಅರವಿಂದ್ ಅವರು ಸಿದ್ದರಾಮಯ್ಯ ಅವರಿಗೆ 'ನಾ ನಿನ್ನ ಬಿಡಲಾರೆ' ಚಿತ್ರವನ್ನು ನೋಡಿದ್ದೀರಾ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಿ.ಎಂ, ಅವರ ಹಲವು ಚಿತ್ರ ನೋಡಿದ್ದೇನೆ. ಅವು ಈಗ ನೆನಪಿಲ್ಲ. 'ನಾ ನಿನ್ನ ಮರೆಯಲಾರೆ' ನೋಡಿದ್ದೇನೆ ಅಂದರು. ಅದಕ್ಕೆ ಪ್ರತಿಕ್ರಿಯಿಸಿದ ಅನಂತ್, 'ಅದು ರಾಜ್‌ಕುಮಾರ್ ಅವರ ಚಿತ್ರ. ನಾನು ಮಾಡಿದ ಚಿತ್ರದಲ್ಲಿ ನನ್ನ ಮೈ ಮೇಲೆ ದೆವ್ವ ಬರುತ್ತದೆ' ಎಂದರು. ಇದು ಸಭಿಕರು ನಗೆಗಡಲಲ್ಲಿ ತೇಲುವಂತೆ ಮಾಡಿತು.



ಇನ್ನಷ್ಟು ಸುದ್ದಿಗಳು 4

'ಗ್ಯಾರಂಟಿ' ಮಾರ್ಗಸೂಚಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿನ ಐದು ಗ್ಯಾರಂಟಿಗಳ ಪೈಕಿ, 'ಯುವ ನಿಧಿ ಯೋಜನೆ'ಯಡಿ ನಿರುದ್ಯೋಗ ಭತ್ಯೆ ಮತ್ತು ಅನ್ನಭಾಗ್ಯ ಯೋಜನೆಯಡಿ ಅಂತ್ಯೋದಯ ಹಾಗೂ ಆದ್ಯತಾ (ಬಿಪಿಎಲ್) ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ ತಲಾ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲು ಶನಿವಾರ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗಳು ಎರಡೂ ಯೋಜನೆಗಳ ಅನುಷ್ಠಾನಕ್ಕೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಿವೆ. ಶುಕ್ರವಾರ ನಡೆದ ಸಂಪುಟ ಸಭೆಯ ನಿರ್ಣಯದಂತೆ ಈ ಆದೇಶಗಳನ್ನು ಹೊರಡಿಸಲಾಗಿದೆ.

ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳನ್ನು 2023ರಲ್ಲಿ ಪೂರೈಸುವವರಿಗೆ 'ಯುವ ನಿಧಿ' ಯೋಜನೆಯಡಿ ಅನುಕ್ರಮವಾಗಿ ತಿಂಗಳಿಗೆ ₹ 3,000 ಮತ್ತು ₹ 1,500 ನಿರುದ್ಯೋಗ ಭತ್ಯೆ ನೀಡಲಾಗುತ್ತದೆ. ಅನ್ನಭಾಗ್ಯ ಯೋಜನೆಯಡಿ ಅಂತ್ಯೋದಯ ಹಾಗೂ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಎಲ್ಲ ಸದಸ್ಯರಿಗೆ ಜುಲೈ ತಿಂಗಳಿನಿಂದ ತಲಾ 10 ಕೆ.ಜಿ. ಅಕ್ಕಿ ವಿತರಿಸಲಾಗುತ್ತದೆ.

4A ಪುಟ ನೋಡಿ

ಸಾವಿರಕ್ಕೂ ಹೆಚ್ಚು ಮಂದಿಗೆ ಗಾಯ • ಆಸ್ಪತ್ರೆಯಲ್ಲಿ ಮುಗಿಲು ಮುಟ್ಟಿದ ಆಕ್ರಂದನ • ಸ್ಥಳಕ್ಕೆ ಭೇಟಿ ನೀಡಿದ ಪ್ರಧಾನಿ

ರೈಲು ದುರಂತ: ಮೃತರ ಸಂಖ್ಯೆ 288ಕ್ಕೆ

ಬಾಲಸೋರ್/ಭುವನೇಶ್ವರ (ಪಿಟಿಐ): ಬಾಲಸೋರ್ ಜಿಲ್ಲೆಯ ಬಹನಾಗಾ ಬಜಾರ್ ನಿಲ್ದಾಣದ ಸಮೀಪ ಶುಕ್ರವಾರ ರಾತ್ರಿ ಸಂಭವಿಸಿದ ಮೂರು ರೈಲುಗಳನ್ನು ಒಳಗೊಂಡ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 288ಕ್ಕೆ ಏರಿಕೆಯಾಗಿದೆ. ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಬಾಲಸೋರ್ ಜಿಲ್ಲಾ ಆಸ್ಪತ್ರೆ ಹಾಗೂ ಇತರ ಆಸ್ಪತ್ರೆಗಳಲ್ಲಿ ಗಾಯಾಳುಗಳನ್ನು ದಾಖಲಿಸಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ.

'ಗಾಯಗೊಂಡವರನ್ನು ರಕ್ಷಿಸುವ ಕಾರ್ಯ ಪೂರ್ಣಗೊಂಡಿದೆ' ಎಂದು ಆಗ್ನೇಯ ರೈಲ್ವೆ ವಕ್ತಾರ ಆದಿತ್ಯ ಚೌಧರಿ ಹೇಳಿದ್ದಾರೆ.



ಅಪಘಾತ ನಡೆದ ಬಾಲಸೋರ್ ಜಿಲ್ಲೆಯ ಬಹನಾಗಾ ಬಜಾರ್ ನಿಲ್ದಾಣದ ಸಮೀಪ ರೈಲು ಬೋಗಿಗಗಳು ಬೆಂಕಿಪೊಟ್ಟಣದಂತೆ ಉರುಳಿಬಿದ್ದಿದ್ದವು. ಅಡಿಯಲ್ಲಿ ಸಿಲುಕಿಕೊಂಡವರನ್ನು ರಕ್ಷಿಸಲು ಶನಿವಾರ ಕಾರ್ಯಾಚರಣೆ ನಡೆಯಿತು –ಪಿಟಿಐ ಚಿತ್ರ



'ಆಗ್ನೇಯ ರೈಲ್ವೆಯ ರೈಲ್ವೆ ಸುರಕ್ಷತಾ ಆಯುಕ್ತ (ಆಗ್ನೇಯ ವೃತ್ತ) ಎ.ಎಂ. ಚೌಧರಿ ನೇತೃತ್ವದ ಸಮಿತಿಯಿಂದ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ' ಎಂದು ಭಾರತೀಯ ರೈಲ್ವೆ ತಿಳಿಸಿದೆ.

ಬೆಂಗಳೂರು– ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್, ಕೋರೊಮಂಡಲ್ ಎಕ್ಸ್‌ಪ್ರೆಸ್ ಮತ್ತು ಸರಕು ಸಾಗಣೆ ರೈಲುಗಳ ಮಧ್ಯೆ ಅಪಘಾತ ಸಂಭವಿಸಿತ್ತು. ಅಪಘಾತದಲ್ಲಾದ ಸಾವು–ನೋವಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ರಾಜ್ಯದಲ್ಲಿ ಶನಿವಾರ ಶೋಕಾಚರಣೆ ಘೋಷಿಸಿದ್ದರು. 'ರಕ್ಷಣಾ ಕಾರ್ಯದಲ್ಲಿ ಎನ್‌ಡಿಆರ್‌ಎಫ್, ಒಡಿಶಾ ವಿಪತ್ತು ಕ್ಷಿಪ್ರ ಕಾರ್ಯಪಡೆ (ಒಡಿಆರ್‌ಎಎಫ್), ಅಗ್ನಿಶಾಮಕ ದಳ ಸಿಬ್ಬಂದಿ ತೊಡಗಿದ್ದು, ರೈಲು ಬೋಗಿಗಳಡಿ ಸಿಲುಕಿರುವವರನ್ನು ರಕ್ಷಿಸುವ ಹಾಗೂ ಮೃತದೇಹಗಳನ್ನು ಹೊರಗೆ ತೆಗೆಯುವ ಕಾರ್ಯ ಶನಿವಾರದವರೆಗೆ ನಡೆಯಿತು' ಎಂದು ಒಡಿಶಾ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ಕೆ. ಜೇನಾ ತಿಳಿಸಿದ್ದಾರೆ.

ರಕ್ಷಣಾ ಕಾರ್ಯದ ಈ ಪರಿ

200 ಆಂಬುಲೆನ್ಸ್‌ಗಳು

50 ಬಸ್‌ಗಳು

45 ಸಂಚಾರಿ ಆರೋಗ್ಯ ಘಟಕಗಳು

1,200 ಸಿಬ್ಬಂದಿ

7ನೇ ಪುಟ ನೋಡಿ

ಅವಘಡ: ಕನ್ನಡಿಗರ ಮಾಹಿತಿಗೆ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ಅಪಘಾತದಲ್ಲಿ ಗಾಯಗೊಂಡವರು ಮತ್ತು ತೊಂದರೆಗೆ ಸಿಲುಕಿರುವವರಲ್ಲಿ ಇರುವ ಕನ್ನಡಿಗರನ್ನು ರಕ್ಷಿಸಿ ಕರೆತರಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಘಟನಾ ಸ್ಥಳಕ್ಕೆ ತೆರಳಿರುವ ತಂಡವು ಮಾಹಿತಿ ಸಿಗದೆ ಇಕ್ಕಟ್ಟಿಗೆ ಸಿಲುಕಿದೆ.

ಮೃತರಲ್ಲಿ ಕನ್ನಡಿಗರಿದ್ದರೆ ಗುರುತಿಸಿ, ಮೃತದೇಹಗಳನ್ನು ತರುವುದು, ಗಾಯಾಳುಗಳು ಹಾಗೂ ಅಪಘಾತದ ಸ್ಥಳದಲ್ಲಿ ಸಿಲುಕಿರುವ ಪ್ರಯಾಣಿಕರಲ್ಲಿರುವ ರಾಜ್ಯದವರನ್ನು ಕರೆತರಲು ಲಾಡ್ ನೇತೃತ್ವದ ತಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಿಸಿದ್ದಾರೆ. ತಂಡವು ಶನಿವಾರ ಸಂಜೆಯೇ ಬಾಲಸೋರ್ ತಲುಪಿದೆ. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಕೂಡ ಈ ತಂಡದಲ್ಲಿದ್ದಾರೆ.

'ಶನಿವಾರ ಸಂಜೆಯೇ ಬಾಲಸೋರ್ ತಲುಪಿದ್ದೇವೆ. ಘಟನಾ ಸ್ಥಳದಲ್ಲಿ ಹೆಚ್ಚು ಮಾಹಿತಿ ದೊರಕಿಲ್ಲ. ಎರಡು ಆಸ್ಪತ್ರೆಗಳಿಗೆ ಭೇಟಿ ನೀಡಿ ಗಾಯಾಳುಗಳ ಕುರಿತು ಮಾಹಿತಿ ಪಡೆದಿದ್ದೇವೆ. ಈವರೆಗೆ ಕರ್ನಾಟಕದ ಯಾರೂ ಪತ್ತೆಯಾಗಿಲ್ಲ. ಕನ್ನಡಿಗರಿದ್ದರೆ ಗುರುತಿಸಿ ಸುರಕ್ಷಿತವಾಗಿ ಕರೆತರುವ ಪ್ರಯತ್ನ ಮುಂದುವರಿಯಲಿದೆ' ಎಂದು ಸಂತೋಷ್ ಲಾಡ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಿರಂತರ ಪ್ರಯತ್ನದ ಬಳಿಕ ಒಡಿಶಾ ಸರ್ಕಾರವು ಗಾಯಾಳುಗಳ ಪಟ್ಟಿಯೊಂದನ್ನು ಹಂಚಿಕೊಂಡಿದೆ. ಅದರಲ್ಲಿ ಪ್ರಯಾಣಿಕರು ಯಾವ ರಾಜ್ಯದವರೆಂಬ ಮಾಹಿತಿ ಇಲ್ಲ. ಹೀಗಾಗಿ, ಕರ್ನಾಟಕದವರನ್ನು ಗುರುತಿಸುವುದು ಕಷ್ಟವಾಗಿದೆ. ಬೆಂಗಳೂರಿನಲ್ಲಿ ರಾಜ್ಯ ಸರ್ಕಾರ ಆರಂಭಿಸಿರುವ ಸಹಾಯವಾಣಿಗೂ ಯಾವುದೇ ಕರೆ ಬಂದಿಲ್ಲ' ಎಂದು ಮನೋಜ್ ಮಾಹಿತಿ ನೀಡಿದರು.

ಪ್ರಯಾಣಿಕರಿಗೆ ಮುಖ್ಯಮಂತ್ರಿ ಕರೆ: ಮೈಸೂರಿನ 30 ಮಂದಿ ಪ್ರಯಾಣಿಕರು ಬಾಲಸೋರ್‌ನಲ್ಲಿ ಸಿಲುಕಿರುವ ಕುರಿತು ಮುಖ್ಯಮಂತ್ರಿಯವರಿಗೆ ಮಾಹಿತಿ ದೊರಕಿತು. ಶನಿವಾರ ಸಂಜೆ ದೂರವಾಣಿ ಮೂಲಕ ಪ್ರಯಾಣಿಕರ ಜೊತೆಗೆ ಮಾತನಾಡಿದ ಮುಖ್ಯಮಂತ್ರಿ ಧೈರ್ಯ ತುಂಬಿದರು. ವಾಪಸ್ ರಾಜ್ಯಕ್ಕೆ ಬರಲು ಅಗತ್ಯ ನೆರವು ಒದಗಿಸುವ ಭರವಸೆ ನೀಡಿದರು.

ಸಹಾಯವಾಣಿ

ರಾಜ್ಯ ತುರ್ತು ನಿರ್ವಹಣಾ ಕೇಂದ್ರದಲ್ಲಿ ಸಹಾಯವಾಣಿ ಆರಂಭಿಸಲಾಗಿದೆ.
ದೂರವಾಣಿ ಸಂಖ್ಯೆ: 1010, 080-22253707 ಅಥವಾ 080- 22340676

ಒಳ ಪುಟ

ಹೆಚ್ಚು ಹೂಡಿಕೆ ಆಕರ್ಷಿಸಿದ ಭಾರತ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸ್ಥಳೀಯ ನದಿಗೆ ತ್ಯಾಜ್ಯವನ್ನು ಶುದ್ಧೀಕರಿಸದೆಯೇ ಹರಿಬಿಟ್ಟ ಪ್ರಕರಣ

ಪತಂಜಲಿ ಘಟಕ ಮುಚ್ಚಲು ಶಿಫಾರಸು

ಪ್ರಜಾವಾಣಿ ವಾರ್ತೆ

ಮಂಗಳೂರು: ಗುರುಪುರ (ಫಲ್ಗುಣಿ) ನದಿಯನ್ನು ಸೇರುವ ನೈಸರ್ಗಿಕ ನಾಲೆಗೆ ಕೈಗಾರಿಕಾ ಘಟಕದ ಕಲುಷಿತ ನೀರನ್ನು ಶುದ್ಧೀಕರಿಸದೆಯೇ ಬಿಟ್ಟ ಬೈಕಂಪಾಡಿಯ ಮೆ. ಪತಂಜಲಿ ಫುಡ್ಸ್ ಲಿಮಿಟೆಡ್ (ಹಿಂದಿನ ಹೆಸರು ರುಚಿ ಸೋಯಾ ಇಂಡಸ್ಟ್ರೀಸ್) ಕಂಪನಿಯ ಅಡುಗೆ ಎಣ್ಣೆ ತಯಾರಿಕಾ ಘಟಕವನ್ನು ಮುಚ್ಚಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಪ್ರಾದೇಶಿಕ ಕಚೇರಿಯು ಮಂಡಳಿಯ ಸದಸ್ಯ ಕಾರ್ಯದರ್ಶಿಗೆ ಶಿಫಾರಸು ಮಾಡಿದೆ.

ಅಡುಗೆ ಎಣ್ಣೆ ಉತ್ಪಾದಿಸುವ ಈ ಕಂಪನಿಯು 1974ರ ಜಲ ಕಾಯ್ದೆಯನ್ನು ಉಲ್ಲಂಘಿಸಿದ್ದು, ಅದರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಕ್ಕೆ ಆಡಳಿತಾತ್ಮಕ ಅನುಮತಿ ನೀಡುವಂತೆ ಕೆಎಸ್‌ಪಿಸಿಬಿಯ ಇಲ್ಲಿನ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿಯು, ಮಂಡಳಿಯ ಸದಸ್ಯ ಕಾರ್ಯದರ್ಶಿಗೆ ಮೇ 31ರಂದು ಬರೆದ ಪತ್ರದಲ್ಲಿ ಕೋರಿದ್ದಾರೆ.

'ಪತಂಜಲಿ ಫುಡ್ಸ್ ಘಟಕದಿಂದ ಸ್ಥಳೀಯ ನಾಲೆಗೆ ಹರಿಯಬಿಟ್ಟಿದ್ದ ನೀರಿನಲ್ಲಿ ಮಿತಿಗಿಂತ ಜಾಸ್ತಿ ಪ್ರಮಾಣದಲ್ಲಿ ಕೈಗಾರಿಕಾ ತ್ಯಾಜ್ಯ ಇರುವುದು ಏಪ್ರಿಲ್ 6ರಂದು ಸ್ಥಳ ಪರಿಶೀಲನೆ ನಡೆಸಿದಾಗ ಕಂಡು ಬಂದಿತ್ತು. ಘಟಕಕ್ಕೆ ನೋಟಿಸ್ ನೀಡಿದ್ದೆವು' ಎಂದು ಕೆಎಸ್‌ಪಿಸಿಬಿ ಹೇಳಿದೆ.



ಮಂಗಳೂರು ಸಮೀಪದ ಬೈಕಂಪಾಡಿಯ ಪತಂಜಲಿ ಫುಡ್ಸ್‌ನ ಅಡುಗೆ ಎಣ್ಣೆ ತಯಾರಿಕಾ ಘಟಕದ ಬಳಿ ನೈಸರ್ಗಿಕ ನಾಲೆಯ ನೀರು ಕಪ್ಪುಬಣ್ಣಕ್ಕೆ ತಿರುಗಿದೆ

> **ತಾಳೆ ಎಣ್ಣೆಯ ಘನ ಪದಾರ್ಥವನ್ನು ನೈಸರ್ಗಿಕ ನಾಲೆಗೆ ಹರಿಯಬಿಟ್ಟಿದ್ದಕ್ಕೆ ಪತಂಜಲಿ ಫುಡ್ಸ್ ಘಟಕವನ್ನು ಮುಚ್ಚುವಂತೆ ಶಿಫಾರಸು ಮಾಡಿದ್ದೇವೆ**
> **ವಿಜಯಾ ಹೆಗಡೆ,** ಹಿರಿಯ ಪರಿಸರ ಅಧಿಕಾರಿ, ಕೆಎಸ್‌ಪಿಸಿಬಿ ಮಂಗಳೂರು

ಮುಚ್ಚಲು ಒತ್ತಾಯ

ಜಲ ಮಾಲಿನ್ಯಕ್ಕೆ ಕಾರಣವಾಗಿರುವ ಮೆ. ಪತಂಜಲಿ ಫುಡ್ಸ್ ಲಿಮಿಟೆಡ್ ಕಂಪನಿಯ ಅಡುಗೆ ಎಣ್ಣೆ ತಯಾರಿಕಾ ಘಟಕವನ್ನು ಮುಚ್ಚುವಂತೆ ಒತ್ತಾಯಿಸಿ ಸ್ಥಳೀಯರು ಘಟಕದ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

'ಕಂಪನಿಯು ಜಲ ಮಾಲಿನ್ಯ ಉಂಟುಮಾಡಿರುವ ಬಗ್ಗೆ ಕೆಎಸ್‌ಪಿಸಿಬಿಗೆ ಸಾಕ್ಷ್ಯಗಳು ಸಿಕ್ಕಿವೆ. ಜಿಲ್ಲಾಮಟ್ಟದ ಅಧಿಕಾರಿಗಳು ಶಿಫಾರಸು ಮಾಡಿದ ಮೇಲೂ ಪತಂಜಲಿಯ ಘಟಕವನ್ನು ಮುಚ್ಚಲು ಎಷ್ಟು ಸಮಯ ಬೇಕು' ಎಂದು ನಾಗರಿಕ ಹೋರಾಟ ಸಮಿತಿಯ ಮುನೀರ್ ಕಾಟಿಪಳ್ಳ ಪ್ರಶ್ನಿಸಿದರು.

6ನೇ ಪುಟ ನೋಡಿ

ಹಸುವನ್ನು ಯಾಕೆ ಕಡಿಯಬಾರದು: ಸಚಿವ ವೆಂಕಟೇಶ್

'ಗೋಹತ್ಯೆ: ಕಾಯ್ದೆ ತಿದ್ದುಪಡಿಗೆ ಚರ್ಚೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಗೋಹತ್ಯೆ ನಿಷೇಧ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ಚರ್ಚೆ ನಡೆಸಲಾಗುವುದು' ಎಂದು ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ. ವೆಂಕಟೇಶ್ ತಿಳಿಸಿದರು.


ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗ ಜಾರಿಯಲ್ಲಿರುವ ಗೋಹತ್ಯೆ ನಿಷೇಧ ಕಾಯ್ದೆಯಲ್ಲಿ ಕೋಣ ಮತ್ತು ಎಮ್ಮೆಗಳ ವಧೆಗೆ ಅವಕಾಶವಿದೆ. ಆದರೆ, ಹಸುವನ್ನು ಕಡಿಯಲು ಅವಕಾಶ ಇಲ್ಲ. ಹಸುವನ್ನು ಯಾಕೆ ಕಡಿಯಬಾರದು? ಈ ಕಾಯ್ದೆಯಿಂದಾಗಿ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ಸ್ವತಃ ನಾನು ಹಸುವನ್ನು ಸಾಕಿದ್ದೇನೆ. ಒಂದು ಹಸು ಸತ್ತು ಹೋದಾಗ ಅದನ್ನು ಮಣ್ಣು ಮಾಡಲು ಕಷ್ಟಪಡಬೇಕಾಯಿತು' ಎಂದರು.

'ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಸೂಕ್ತ ತೀರ್ಮಾನ ಮಾಡುತ್ತೇವೆ' ಎಂದು ಹೇಳಿದರು.

'ರೇಷ್ಮೆ ಬೆಲೆ ಭಾರಿ ಕುಸಿತವಾಗಿರುವ ವಿಷಯವನ್ನು ರೈತರು ನನ್ನ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ವಿಭಾಗದ ಮೂಲಕ ರೇಷ್ಮೆ ಖರೀದಿಗೆ ಆದೇಶ ನೀಡಲಾಗಿದ್ದು, ಈಗಾಗಲೇ ಖರೀದಿ ಆರಂಭವಾಗಿದೆ. ಸರ್ಕಾರ ಖರೀದಿ ಆರಂಭಿಸಿದ ನಂತರ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾಗುವ ನಿರೀಕ್ಷೆ ಇದೆ' ಎಂದರು.

ಸಚಿವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ ಸಿಂಹ, 'ಗೋಹತ್ಯೆ ನಿಷೇಧ ಹಿಂಪಡೆಯುವ ಮುನ್ನ ಕಾಂಗ್ರೆಸ್‌ನವರು ಗೋವಿನ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ಏನಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಲಿ' ಎಂದರು.

9 ಸಾವಿರ ಸಿಬ್ಬಂದಿ ಕೊರತೆ



'ಪಶುಸಂಗೋಪನೆ ಬಹಳ ದೊಡ್ಡ ಇಲಾಖೆ. ಆದರೆ ಕೆಲಸ ಮಾಡಲು ಸಿಬ್ಬಂದಿಯ ಕೊರತೆ ಇದೆ. ಇಲಾಖೆಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ 18,000. ಆದರೆ, ಹಾಲಿ ಇರುವ ಸಿಬ್ಬಂದಿ ಸಂಖ್ಯೆ 9 ಸಾವಿರ ಮಾತ್ರ' ಎಂದು ಸಚಿವ ವೆಂಕಟೇಶ್ ತಿಳಿಸಿದರು.

'ರಾಜ್ಯದಲ್ಲಿ 4,234 ಪಶು ಆಸ್ಪತ್ರೆಗಳಿದ್ದು, 1,600 ವೈದ್ಯರ ಕೊರತೆ ಇದೆ. 400 ವೈದ್ಯರ ನೇಮಕಾತಿಗೆ ಪರೀಕ್ಷೆ ನಡೆಸುವಂತೆ ರಾಜ್ಯ ಲೋಕಸೇವಾ ಆಯೋಗಕ್ಕೆ ಸರ್ಕಾರ ಆದೇಶಿಸಿದೆ' ಎಂದರು.

'ಅಮೂಲ್ ಹಾಲು ರಾಜ್ಯಕ್ಕೆ ಬಂದಿಲ್ಲ, ಬಂದಾಗ ನೋಡುವ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅಂಧ ಶಿಕ್ಷಕನ ಕೊಲೆ

ಅಜ್ಜಂಪುರ: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ, ಮಲೆಬೆನ್ನೂರು ಮೂಲದ ಮಾಲತೇಶ ಜೋಶಿ (54) ಅವರನ್ನು ದುಷ್ಕರ್ಮಿಗಳು ಕೊಲೆಮಾಡಿದ್ದು, ಅವರ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ನಡೆಸಿರಬಹುದೆಂದು ಅಂದಾಜಿಸಲಾಗಿದೆ.

ಡ್ರಗ್ಸ್ ಮಾರಾಟ: ಪುನರ್ವಸತಿ ಕೇಂದ್ರದ ಉದ್ಯೋಗಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿಯ ಕಾಲೇಜೊಂದರ ಬಳಿ ಡ್ರಗ್ಸ್ ಮಾರುತ್ತಿದ್ದ ಸುಹಾಸ್ ಎಸ್. (26) ಎಂಬುವವರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶ್ರೀನಿವಾಸ್‌ನಗರದ ನಂದಿನಿ ಡೇರಿ ಬಳಿಯ ನಿವಾಸಿ ಸುಹಾಸ್, ಕಾಲೇಜು ಬಳಿ ಸುತ್ತಾಡುತ್ತಿದ್ದ. ಆತನ ಬಗ್ಗೆ ಅನುಮಾನಗೊಂಡು ತಪಾಸಣೆ ನಡೆಸಿದಾಗ, ಡ್ರಗ್ಸ್ ಪತ್ತೆಯಾಯಿತು. ಈತನಿಂದ ₹1.50 ಲಕ್ಷ ಮೌಲ್ಯದ 11 ಗ್ರಾಂ ತೂಕದ ಎಂಡಿಎಂಎ ಹಾಗೂ 3 ಗ್ರಾಂ ತೂಕದ ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಂಗೇರಿಯಲ್ಲಿರುವ ಮದ್ಯ-ಮಾದಕ ವಸ್ತು ವ್ಯಸನ ಮುಕ್ತ ಪುನರ್ವಸತಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವುದಾಗಿ ಆರೋಪಿ ಹೇಳುತ್ತಿದ್ದಾನೆ. ಆದರೆ, ಆತ ತಿಳಿಸಿರುವ ವಿಳಾಸದಲ್ಲಿ ಯಾವುದೇ ಕೇಂದ್ರವಿಲ್ಲ. ಈ ಬಗ್ಗೆ ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ತಿಳಿಸಿವೆ.

ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ: 'ಪೆಡ್ಲರ್‌ಗಳ ಜೊತೆ ಒಡನಾಟ ಹೊಂದಿದ್ದ ಆರೋಪಿ, ಅವರಿಂದ ಡ್ರಗ್ಸ್ ಖರೀದಿಸುತ್ತಿದ್ದ. ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಿ, ಹಣ ಸಂಪಾದಿಸುತ್ತಿದ್ದ. ಸುಹಾಸ್ ಸಹ ಮಾದಕ ವಸ್ತು ವ್ಯಸನಿ ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೇ 31ರಂದು ಮಧ್ಯಾಹ್ನ ಕಾಲೇಜು ಬಳಿ ಬಂದಿದ್ದ ಆರೋಪಿ, ಗ್ರಾಹಕರಿಗಾಗಿ ಕಾಯುತ್ತಿದ್ದ. ಈ ಬಗ್ಗೆ ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿದ ಸಿಬ್ಬಂದಿ ಕಂಡು ಪರಾರಿಯಾಗಲು ಯತ್ನಿಸಿದ್ದ. ಆತನನ್ನು ಬೆನ್ನಟ್ಟಿ ಹಿಡಿದು ಜೇಬು ಪರಿಶೀಲಿಸಿದಾಗ, ಡ್ರಗ್ಸ್ ಪೊಟ್ಟಣಗಳು ಪತ್ತೆಯಾದವು' ಎಂದು ಮೂಲಗಳು ತಿಳಿಸಿವೆ.

96 ಸಿಲಿಂಡರ್ ಜಪ್ತಿ

ಬೆಂಗಳೂರು: ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಬಳಸಿಕೊಂಡು ಅಕ್ರಮವಾಗಿ ರಿಫಿಲ್ಲಿಂಗ್ ಮಾಡುತ್ತಿದ್ದ ಮಳಿಗೆ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, 96 ಸಿಲಿಂಡರ್ ಜಪ್ತಿ ಮಾಡಿದ್ದಾರೆ.

'ಮಡಿವಾಳ ಠಾಣೆ ವ್ಯಾಪ್ತಿಯ ಸುಭಾಷನಗರದಲ್ಲಿರುವ ವಿ.ಆರ್.ಎಂ. ಎಂಟರ್‌ಪ್ರೈಸಸ್ ಮಳಿಗೆ ಮೇಲೆ ದಾಳಿ ಮಾಡಲಾಗಿದ್ದು, ಮಾಲೀಕ ಧನರಾಜ್ ತಲೆಮರೆಸಿಕೊಂಡಿದ್ದಾರೆ. ಕೃತ್ಯದ ವಿರುದ್ಧ ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ವಿಧಾನಸೌಧ ಆವರಣದಲ್ಲಿ ಆರೋಗ್ಯ ಇಲಾಖೆ ಆಯೋಜಿಸಿದ್ದ ಸೈಕಲ್ ಜಾಥಾದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮೊದಲ ಪತ್ನಿ ಜೊತೆ ಜೀವನ ನಡೆಸಲು 2ನೇ ಪತ್ನಿ ಹತ್ಯೆ • ಮರಣೋತ್ತರ ಪರೀಕ್ಷೆಯಿಂದ ಸುಳಿವು

ಕತ್ತು ಹಿಸುಕಿ ಕೊಂದು ಕಥೆ ಕಟ್ಟಿದ್ದ ಪತಿ

ಪ್ರಜಾವಾಣಿ ವಾರ್ತೆ



ಶರತ್‌ಕುಮಾರ್

ಬೆಂಗಳೂರು: ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ಪ್ರಿಯಾ (19) ಎಂಬುವವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಶರತ್‌ಕುಮಾರ್‌ನನ್ನು (29) ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಮೋಹನ್ ನಗರದಲ್ಲಿ ವಾಸವಿದ್ದ ಪ್ರಿಯಾ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಸಹಜ ಸಾವೆಂದು ಪತಿ ಶರತ್‌ಕುಮಾರ್ ಕಥೆ ಕಟ್ಟಿದ್ದ. ಮೃತದೇಹದ ಮರಣೋತ್ತರ ಪರೀಕ್ಷೆ ವರದಿಯಿಂದ ಕೊಲೆ ಸುಳಿವು ಸಿಗುತ್ತಿದ್ದಂತೆ ಶರತ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ. ಸದ್ಯ

ಅಪರಾಧ ಸುದ್ದಿ

ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಪ್ರಿಯಾ ಸಾವಿನ ಸಂಬಂಧ ದೂರು ನೀಡಿದ್ದ ತಾಯಿ ಉಷಾ, ಶರತ್ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ, ಆರಂಭದಲ್ಲಿ ಪುರಾವೆಗಳು ಸಿಕ್ಕಿರಲಿಲ್ಲ. ತನಿಖೆ ಕೈಗೊಂಡಾಗ, ಹಲವು ಪುರಾವೆಗಳು ಪತ್ತೆಯಾದವು' ಎಂದು ತಿಳಿಸಿದರು.

ಪ್ರೀತಿಸಿ ಮದುವೆ: 'ಸಂಜಯ್‌ಗಾಂಧಿ ನಗರದ ಪ್ರಿಯಾ, ಆರ್.ಎಂ.ಸಿ. ಯಾರ್ಡ್ ಬಳಿಯ ಶಾಪಿಂಗ್ ಮಾಲ್‌ವೊಂದರಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಅದೇ ಸ್ಥಳದಲ್ಲಿ ಶರತ್ ಕೆಲಸ ಮಾಡುತ್ತಿದ್ದ. ಇಬ್ಬರಿಗೂ ಪರಸ್ಪರ ಪರಿಚಯವಾಗಿ ಪ್ರೀತಿಸಲಾರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರಿಯಾ ಮನೆಯವರಿಗೆ ಪ್ರೀತಿಯ ವಿಷಯ ಗೊತ್ತಾಗಿತ್ತು. ಪ್ರಿಯಾ ಅವರನ್ನು ಶರತ್ ಜೊತೆ ಮದುವೆ ಮಾಡಿಕೊಟ್ಟಿದ್ದರು. ನಂತರ, ಮೋಹನ್ ನಗರದಲ್ಲಿ ದಂಪತಿ ವಾಸವಿದ್ದರು. ಒಟ್ಟಿಗೆ ಕೆಲಸಕ್ಕೆ ಹೋಗಿ ಬರುತ್ತಿದ್ದರು' ಎಂದರು.

ಮೊದಲ ಮದುವೆ ವಿಷಯ ಮುಚ್ಚಿಟ್ಟಿದ್ದ: 'ಮೊದಲ ಮದುವೆಯಾಗಿದ್ದ ಶರತ್‌ಗೆ ಪತ್ನಿ ಹಾಗೂ ಮೂವರು ಮಕ್ಕಳಿದ್ದಾರೆ. ಮದುವೆಗೂ ಮುನ್ನ ಪ್ರಿಯಾಗೆ ವಿಷಯ ಗೊತ್ತಾಗಿರಲಿಲ್ಲ. ಇತ್ತೀಚೆಗಷ್ಟೇ ಪತಿಯ ಮೊದಲ ಮದುವೆ ವಿಷಯ ತಿಳಿದಿತ್ತು'.

'ಶರತ್, ಮೊದಲ ಪತ್ನಿ ಹಾಗೂ ಮಕ್ಕಳನ್ನು ಬೆಂಗಳೂರಿನ ಬಿ.ಕೆ.ನಗರದ ಬಾಡಿಗೆ ಮನೆಯಲ್ಲಿ ಇರಿಸಿದ್ದ. ಆಗಾಗ, ಅವರ ಬಳಿ ಹೋಗಿ ಬರುತ್ತಿದ್ದ. ಇದಕ್ಕೆ ಪ್ರಿಯಾ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು. ಹೀಗಾಗಿ, ದಂಪತಿ ನಡುವೆ ನಿತ್ಯವೂ ಜಗಳ ಶುರುವಾಗಿತ್ತು' ಎಂದರು.

ಮೊದಲ ಪತ್ನಿ, ಮಕ್ಕಳಿಗಾಗಿ ಕೊಲೆ: 'ಪ್ರಿಯಾ ನಿತ್ಯವೂ ಜಗಳ ಮಾಡುತ್ತಿದ್ದರಿಂದ ಶರತ್ ಸಿಟ್ಟಾಗಿದ್ದ. ಪ್ರಿಯಾಳನ್ನು ಕೊಲೆ ಮಾಡಿದರೆ, ಮೊದಲ ಪತ್ನಿ ಹಾಗೂ ಮಕ್ಕಳ ಜೊತೆ ಜೀವನ ನಡೆಸಬಹುದೆಂದು ತಿಳಿದು ಕೃತ್ಯಕ್ಕೆ ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ಜೂನ್ 1ರಂದು ಪ್ರಿಯಾ ಜೊತೆ ಜಗಳ ತೆಗೆದಿದ್ದ ಶರತ್, ಹಲ್ಲೆ ಮಾಡಿದ್ದ. ನಂತರ, ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದ. ಹಾಸಿಗೆ ಮೇಲೆ ಮೃತದೇಹವಿಟ್ಟು ಮನೆಯಿಂದ ಹೊರಟು ಹೋಗಿದ್ದ. ಕೆಲ ಹೊತ್ತಿನ ನಂತರ, ಮೊದಲ ಪತ್ನಿ ಸಮೇತ ಮನೆಗೆ ವಾಪಸು ಬಂದಿದ್ದ. 'ಸುಸ್ತಾಗಿ ಮಲಗಿದ್ದ ನನ್ನ ಪತ್ನಿ ಉಸಿರಾಡುತ್ತಿಲ್ಲ' ಎಂದು ಹೇಳಿ ಸ್ಥಳೀಯರನ್ನು ಸೇರಿಸಿದ್ದ.'

'ವಿಷಯ ತಿಳಿದು ಪ್ರಿಯಾ ಪೋಷಕರು, ಮನೆಗೆ ಬಂದಿದ್ದರು. ಅವರ ಬಳಿಯೂ ಗೋಳಾಡಿದ್ದ ಶರತ್, 'ಅಡುಗೆ ಮಾಡಿದ್ದ ಪ್ರಿಯಾ ಸುಸ್ತಾಗಿರುವುದಾಗಿ ಹೇಳಿ ಮಲಗಿದ್ದಳು. ನಾನು ಮಾರುಕಟ್ಟೆಗೆ ಹೋಗಿದ್ದೆ. ವಾಪಸು ಬರುವಷ್ಟರಲ್ಲಿ ಪ್ರಿಯಾ ಉಸಿರಾಡುತ್ತಿರಲಿಲ್ಲ. ಗಾಬರಿಯಾಗಿ, ಮೊದಲ ಪತ್ನಿಯನ್ನು ಕರೆತಂದೆ' ಎಂದು ಕಥೆ ಕಟ್ಟಿದ್ದ. ಮಾತು ನಂಬದ ಪೋಷಕರು, ಆತನ ಮೇಲೆಯೇ ಅನುಮಾನ ವ್ಯಕ್ತಪಡಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದರು. ಮನೆಯಲ್ಲಿಯೇ ಪ್ರಿಯಾ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದರು. 'ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ' ಎಂಬುದು ಮರಣೋತ್ತರ ಪರೀಕ್ಷೆ ವರದಿಯಿಂದ ಗೊತ್ತಾಗಿತ್ತು. ಇದೇ ಮಾಹಿತಿ ಕೊಲೆ ಪ್ರಕರಣ ಭೇದಿಸಲು ಸಾಧ್ಯವಾಯಿತು' ಎಂದು ಹೇಳಿದರು.

ಪತ್ನಿ ಅನುಮಾನಾಸ್ಪದ ಸಾವು: ಪಿಎಸ್‌ಐ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಶಿಲ್ಪಾ (29) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಆರೋಪದಡಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಆಗಿರುವ ಪತಿ ರಮೇಶ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಚಿಂತಾಮಣಿ ತಾಲ್ಲೂಕಿನ ಶಿಲ್ಪಾ, ಬೇಗೂರು ಠಾಣೆಯ ಪ್ರೊಬೇಷನರಿ ಪಿಎಸ್‌ಐ ರಮೇಶ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ನೇಣು ಬಿಗಿದ ಸ್ಥಿತಿಯಲ್ಲಿ ಶನಿವಾರ ಬೆಳಿಗ್ಗೆ ಶಿಲ್ಪಾ ಮೃತದೇಹ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

> **ಶಿಲ್ಪಾ ಸಾವಿಗೆ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಪಿಎಸ್‌ಐ ರಮೇಶ್ ವಿಚಾರಣೆ ನಡೆಸಲಾಗುತ್ತಿದೆ**
> **ಸಿ.ಕೆ. ಬಾಬಾ,** ಆಗ್ನೇಯ ವಿಭಾಗದ ಡಿಸಿಪಿ

'ಶಿಲ್ಪಾ ಅವರನ್ನು ಪತಿ ರಮೇಶ್ ಕೊಲೆ ಮಾಡಿದ್ದಾರೆ. ನೇಣು ಬಿಗಿದು, ಆತ್ಮಹತ್ಯೆ ನಾಟಕವಾಡುತ್ತಿದ್ದಾರೆ' ಎಂದು ಆರೋಪಿಸಿ ಪೋಷಕರು ದೂರು ನೀಡಿದ್ದಾರೆ. ಪಿಎಸ್‌ಐ ವಿರುದ್ಧ ಕೊಲೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿವೆ.

ಬಿ.ಇಡಿ ಕಾಲೇಜು ಸ್ನೇಹಿತರು: 'ಶಿಲ್ಪಾ ಹಾಗೂ ರಮೇಶ್ ಬಿ.ಇಡಿ ಕಾಲೇಜು ಸ್ನೇಹಿತರು. ಪರಸ್ಪರ ಪ್ರೀತಿಸುತ್ತಿದ್ದರು. ವಿದ್ಯಾಭ್ಯಾಸದ ನಂತರ ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು'. 'ರಮೇಶ್ ಅವರು ಪಿಎಸ್‌ಐ ಹುದ್ದೆಗೆ ನೇಮಕವಾಗಿದ್ದರು. ಶಿಲ್ಪಾ ಅವರನ್ನು ದೂರ ಮಾಡಲು ಯತ್ನಿಸಿದ್ದ ರಮೇಶ್, ಕಿರುಕುಳ ನೀಡುತ್ತಿದ್ದರು. ಅದನ್ನು ಪ್ರಶ್ನಿಸಿದ್ದ ಶಿಲ್ಪಾ, ಠಾಣೆಗೆ ಹೋಗಿ ಗಲಾಟೆ ಮಾಡಿದ್ದರು. ಇದಾದ ನಂತರ, ಶಿಲ್ಪಾ-ರಮೇಶ್ ನೋಂದಣಾಧಿಕಾರಿ ಕಚೇರಿಯಲ್ಲಿ ವಿವಾಹವಾಗಿದ್ದರು.'

'ರಮೇಶ್, ಇತ್ತೀಚೆಗೆ ಪ್ರತ್ಯೇಕವಾಗಿ ವಾಸವಿದ್ದರು. ಶಿಲ್ಪಾ ಅವರು ಶುಕ್ರವಾರ ರಾತ್ರಿ ಸಂಬಂಧಿಕರಿಗೆ ಕರೆ ಮಾಡಿ, ಖಾತೆಗೆ ಹಣ ಹಾಕಿಸಿಕೊಂಡಿದ್ದರು. ಶನಿವಾರ ಬೆಳಿಗ್ಗೆ ಮನೆ ಬಾಗಿಲು ತೆರೆದಿರಲಿಲ್ಲ. ಮನೆ ಮಾಲೀಕರು, ಪಿಎಸ್‌ಐ ರಮೇಶ್‌ಗೆ ಮಾಹಿತಿ ನೀಡಿದ್ದರು. ರಮೇಶ್ ಮನೆಗೆ ಹೋಗಿ ನೋಡಿದಾಗ, ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಕಂಡಿತ್ತು' ಎಂದು ಹೇಳಿವೆ.

ಬಂಗಾಳ ದಂಪತಿಗೆ ಜಾಮೀನು

ಬೆಂಗಳೂರು: ಅಕ್ರಮ ವಾಸ ಪ್ರಕರಣದಲ್ಲಿ 301 ದಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದ ಫಲಶ್ ಅಧಿಕಾರಿ ಹಾಗೂ ಶುಕ್ಲಾ ದಂಪತಿಗೆ ಜಾಮೀನು ಮಂಜೂರಾಗಿದ್ದು, ಗುರುವಾರ ತಮ್ಮೂರಿನತ್ತ ಪ್ರಯಾಣ ಬೆಳೆಸಿದರು.

'ಪಶ್ಚಿಮ ಬಂಗಾಳದ ದಂಪತಿ, ಕೆಲಸ ಹುಡುಕಿಕೊಂಡು 2022ರ ಜುಲೈನಲ್ಲಿ ಬೆಂಗಳೂರಿಗೆ ಬಂದಿದ್ದರು. 'ಅಕ್ರಮವಾಗಿ ವಾಸವಿರುವ ಬಾಂಗ್ಲಾ ಪ್ರಜೆಗಳು' ಎಂಬ ಆರೋಪ ಹೊರಿಸಿ ದಂಪತಿಯನ್ನು ಪೊಲೀಸರು ಬಂಧಿಸಿದ್ದರು. ಅಂದಿನಿಂದ 301 ದಿನ ದಂಪತಿ ಜೈಲಿನಲ್ಲಿದ್ದರು' ಎಂದು ವೈಟ್‌ಫೀಲ್ಡ್ ವಿಭಾಗದ ಮೂಲಗಳು ಹೇಳಿವೆ.

'ನಾವು ಬಾಂಗ್ಲಾ ಪ್ರಜೆಗಳಲ್ಲ. ನಮ್ಮೂರು ಪಶ್ಚಿಮ ಬಂಗಾಳವೆಂದು ದಂಪತಿ ಹೇಳಿದ್ದರು. ಆದರೆ, ಅವರ ಹೇಳಿಕೆಯನ್ನು ಪೊಲೀಸರು ಪರಿಗಣಿಸಿರಲಿಲ್ಲ. ಪ್ರಕರಣದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು. ಇದರ ನಡುವೆಯೇ ಪೊಲೀಸರು, ಅಲ್ಲಿಯ ಅಧಿಕಾರಿಗಳನ್ನು ಸಂಪರ್ಕಿಸಿ ದಂಪತಿ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರು'.

'ದಾಖಲೆಗಳ ಸಮೇತ ದಂಪತಿ ಜಾಮೀನು ಅರ್ಜಿ ಸಲ್ಲಿಸಿದ್ದರು ನ್ಯಾಯಾಲಯ, ಏಪ್ರಿಲ್ 28ರಂದು ಜಾಮೀನು ಮಂಜೂರು ಮಾಡಿತ್ತು. ಸ್ಥಳೀಯರ ಸಹಿ ಇಲ್ಲದ ಕಾರಣ ಬಿಡುಗಡೆ ಸಾಧ್ಯವಾಗಿರಲಿಲ್ಲ. ಎಂದು ಹೇಳಿವೆ.

ನಗರದಲ್ಲಿ ಇಂದು

ವಾಕಥಾನ್, ಅತಿಥಿಗಳು: ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ. ರಾಮಮೂರ್ತಿ. ಆಯೋಜನೆ: ಬಿಶಿಪ್ ಆರ್ಯ ವೈಶ್ಯ ನೆಟ್‌ವರ್ಕ್ ಅಸೋಸಿಯೇಷನ್. ಸ್ಥಳ: ಎಂಇಎಸ್ ಮೈದಾನ, ಜಯನಗರ. ಸಮಯ: ಬೆಳಿಗ್ಗೆ 6ರಿಂದ 10ರ ತನಕ.

ಬಸವ ಜಯಂತಿ ಆಚರಣೆ, ಗಣ್ಯರು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ಅಧ್ಯಕ್ಷತೆ: ಪ್ರೇಮಾ ಹತ್ತಿ, ಬಸವ ಸಂದೇಶ: ಜಿ.ಬಿ. ಹಳ್ಯಾಳ್, ವಚನಗಾಯನ: ರಶ್ಮಿ ರೇಣು ಮತ್ತು ಸಂಗಡಿಗರು, ಆಯೋಜನೆ: ಬಸವ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಕುಮಾರ ಪಾರ್ಕ್ ಪೂರ್ವ, ಸಮಯ: ಬೆಳಿಗ್ಗೆ 9.30

ಬನಶಂಕರಿ ಅಮ್ಮನವರ ಪುನರಷ್ಟಬಂಧ ಸಂಪ್ರೋಕ್ಷಣಾ ಕುಂಭಾಭಿಷೇಕ ಮಹೋತ್ಸವ: ಬೆಳಿಗ್ಗೆ 7.30ಕ್ಕೆ ಶತಚಂಡಿಕಾ ಯಾಗ, ಬೆಳಿಗ್ಗೆ 11ಕ್ಕೆ ಪೂರ್ಣಾಹುತಿ, ಬೆಳಿಗ್ಗೆ 11.15ಕ್ಕೆ ಕುಂಭಾಭಿಷೇಕ ಸ್ಥಳ: ಬನಶಂಕರಿ ದೇವಸ್ಥಾನ, ಎಸ್. ಕರಿಯಪ್ಪ ರಸ್ತೆ

ಭಕ್ತಿ ಭಾವಾನಂದ ಅಖಂಡ ಭಜನೆ, ಆಯೋಜನೆ: ಸತ್ಯಸಾಯಿ ಸೇವಾ ಸಂಘ, ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಸಮಯ: ಬೆಳಿಗ್ಗೆ 9

ಕಲೆ ಹಾಗೂ ಛಾಯಾಚಿತ್ರ ಪ್ರದರ್ಶನ: ಚಿತ್ರಕಲಾ ಪರಿಷತ್ ಗ್ಯಾಲರಿ-1. ಬೆಳಿಗ್ಗೆ 10ರಿಂದ ಸಂಜೆ 7.30.

ನಿಧಿಶ್ರೀ ಡಿ. ಭರತನಾಟ್ಯ ರಂಗಪ್ರವೇಶ, ಉದ್ಘಾಟನೆ: ಗಭೇಶ್ ಭಟ್ಟ ಹೋಬಳಿ, ಅತಿಥಿಗಳು: ಸಿದ್ಧರಾಮ ಸಿಂಧೆ, ವೈ.ಕೆ. ಸಂಧ್ಯಾ ಶರ್ಮ, ಚಿತ್ರಲೇಖ ಎಸ್., ಆಯೋಜನೆ: ಸರ್ವೇಶ್ವರ ನೃತ್ಯ ಕಲಾ ಮಂದಿರ ಮೈಸೂರು, ಸ್ಥಳ: ಎಡಿಎ ರಂಗಮಂದಿರ, ಸಮಯ: ಬೆಳಿಗ್ಗೆ 10

ಪದ್ಮರಾಜ ದಂಡಾವತಿ ಅವರ 'ಮಾಧ್ಯಮ ಭಾಷಾ ದೀಪಿಕೆ' ಕೃತಿ ಲೋಕಾರ್ಪಣೆ, ಬಿಡುಗಡೆ: ಮಲ್ಲೇಪುರಂ ವೆಂಕಟೇಶ್, ಅತಿಥಿ: ಉಷಾರಾಣಿ, ಅಧ್ಯಕ್ಷತೆ: ಮನು ಬಳಿಗಾರ್, ಪ್ರಥಮ ಪ್ರತಿ ಸ್ವೀಕಾರ: ಕೆ.ಎನ್.ಶಾಂತಕುಮಾರ್, ಆಯೋಜನೆ: ಮಾಧ್ಯಮ ಚಿಂತನ ವೇದಿಕೆ, ಸ್ಥಳ: ಬಿಎಂಶ್ರೀ ಸಭಾಂಗಣ, ಬಿಎಂಶ್ರೀ ಪ್ರತಿಷ್ಠಾನ, ಮೂರನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಸಮಯ: ಬೆಳಿಗ್ಗೆ 10.30

ಸದ್ಯೋಜಾತ ಭಟ್ಟ ಅವರ 'ವಾಚಕ್ನವೀ' ಕೃತಿ ಅನಾವರಣ, ನೇತೃತ್ವ: ಸ್ವಾಮಿ ನಿರ್ಭಯಾನಂದ ಸರಸ್ವತಿ, ಅಧ್ಯಕ್ಷತೆ: ಮಹೇಂದ್ರ ಡಿ., ಆಯೋಜನೆ: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಸಮನ್ವಿತಾ ಬೆಂಗಳೂರು, ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಕೆರೆಗುಂಟೆ ವೃತ್ತ, ಮಲ್ಲತ್ತಹಳ್ಳಿ, ಸಮಯ: ಬೆಳಿಗ್ಗೆ 10.30

ವಿಶ್ವ ಪರಿಸರ ದಿನಾಚರಣೆ, ಉಪನ್ಯಾಸ, ಕವಿಗೋಷ್ಠಿ, ಅತಿಥಿಗಳು: ಎನ್. ವಿ.ರಮೇಶ್, ಕೆ.ವಿ.ಲಕ್ಷ್ಮಣಮೂರ್ತಿ, ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ವಿ. ಲಕ್ಷ್ಮಣಮೂರ್ತಿ, ಪಿ. ನಾಗರಾಜ (ರಾಧಾತನಯ), ಸಿ.ಎನ್. ಉಮೇಶ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಪ್ರತಿಭಾ ಹೊಂಗಿರಣ ವೇದಿಕೆ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಸಮಯ: ಬೆಳಿಗ್ಗೆ 10.30

ಬಹುವಚನ ಸಾಹಿತ್ಯ ವಿಮರ್ಶೆ ಪತ್ರಿಕೆ ಬಿಡುಗಡೆ, ಅತಿಥಿಗಳು: ಬಸವರಾಜ ಕಲ್ಗುಡಿ, ಸವಿತಾ ನಾಗಭೂಷಣ, ಎಸ್. ಸಿರಾಜ್ ಅಹಮದ್, ಸಂದೀಪ ನಾಯಕ, ಬಿಡುಗಡೆ: ಶಾ.ಮಂ. ಕೃಷ್ಣರಾವ್, ಕಾವ್ಯ ವಾಚನ: ವಿಲ್ಸನ್ ಕಟೀಲ್, ಸ್ಥಳ: ನಾಣಿ ಅಂಗಳ, ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ ಎರಡನೇ ಹಂತ, ಸಮಯ: ಬೆಳಿಗ್ಗೆ 10.30

'ಮಾಸದ ಮಂಥನ-51'ರಲ್ಲಿ 'ನಾನೂ ಸಹಭಾಗಿ' ವಿಚಾರ ಸಂಕಿರಣ, ಸಂವಾದ: ಅನಿರುದ್ಧ್, ಆಯೋಜನೆ: ಮಾಸದ ಮಂಥನ, ಸ್ಥಳ: ನಂ.17, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಸಮಯ: ಬೆಳಿಗ್ಗೆ 11

ವಸುಮತಿ ಉಡುಪ ಅವರ 'ಅಂತಪುರ', 'ನಿಲುಕಲೊಲ್ಲದ ಬದುಕು', ಪ್ರೇಮಕುಮಾರ್ ಹರಿಯಬ್ಬೆ ಅವರ 'ನಾಟಕೀಯ', ಚಂದ್ರಕಾಂತ ಪೋಕಳೆ ಅವರ 'ಬಿಡಾರ' ಕೃತಿಗಳ ಲೋಕಾರ್ಪಣೆ, ಬಿಡುಗಡೆ: ಪಿ.ಶೇಷಾದ್ರಿ, ಅತಿಥಿಗಳು: ರಘುನಾಥ ಚ.ಹ., ಎನ್. ಎಸ್.ಶ್ರೀಧರಮೂರ್ತಿ, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬ್ರಹ್ಮ ಕನ್ನಡಿಗ, ನೇರಪ್ರಸಾರ: ಬುಕ್‌ಬ್ರಹ್ಮ, ಸಮಯ: ಬೆಳಿಗ್ಗೆ: 11

ಪರಿವರ್ತನಾ ಸಮಾವೇಶ, ಡಾ.ಎಂ. ವೆಂಕಟಸ್ವಾಮಿ ಅವರ 69ನೇ ಜನ್ಮದಿನಾಚರಣೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ: ಅತಿಥಿಗಳು: ಗದ್ದರ್, ಡಾ.ಎಂ.ವೆಂಕಟಸ್ವಾಮಿ, ಡಾ.ಎಲ್. ಹನುಮಂತಯ್ಯ, ಎನ್.ಆರ್. ಶಿವರಾಂ, ಡಾ.ರಾಜಪ್ಪ ದಳವಾಯಿ, ಬಿ.ಟಿ. ಲಲಿತಾನಾಯ್ಕ, ಪಾವಗಡ ಶ್ರೀರಾಮ್, ಡಾ.ಸಿದ್ದರಾಜು, ಡಾ.ಎಚ್. ಆರ್.ಸುರೇಂದ್ರ, ಲೋಲಾಕ್ಷ, ಪುರುಷೋತ್ತಮ್ ದಾಸ್. ಆಯೋಜನೆ: ಸಮತಾ ಸೈನಿಕ ದಳ. ಸ್ಥಳ: ಟೌನ್ ಹಾಲ್ ಸಭಾಂಗಣ, ಬೆಳಿಗ್ಗೆ 11.30ಕ್ಕೆ.

ಮಹಾರಾಜ ಕಲಾಸಾಮ್ರಾಜ್ಯ ಸೇವಾ ಟ್ರಸ್ಟ್ ಉದ್ಘಾಟನೆ, ಅತಿಥಿಗಳು: ಅಭಿಲಾಶ್ ದ್ವಾರಕೀಶ್, ಕನ್ನಡ ಶಫಿ, ಆದಿತ್ಯ ಸನ್ನಿ, ಸವಿತಾ ಗಣಪತಿ, ಸುನಿಲ್, ರಾಜೇಶ್, ದಿನೇಶ್, ಕಮಲ್ ಕಣ್ಣನ್, ವೇಣುಗೋಪಾಲಾಚಾರ್, ವಿಶ್ವನಾಥಾಚಾರ್ಯ, ಪಾಲಾಕ್ಷ, ಆಯೋಜನೆ: ಮಹಾರಾಜ ಕಲಾ ಸಾಮ್ರಾಜ್ಯ ಸೇವಾ ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಅಕ್ಕಮಹಾದೇವಿ ಸಭಾಂಗಣ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, : ಮಧ್ಯಾಹ್ನ 3

ಹಾರ್ಮೋನಿಕ ವೈಭವ ಮತ್ತು ರಾಗಮಾಲೀಕ ಪ್ರಶಸ್ತಿ ಪ್ರದಾನ, ಅತಿಥಿಗಳು: ಪ್ರವೀಣ್ ಡಿ. ರಾವ್, ರೂಪಾ ಶ್ರೀಧರ್, ಸುಕನ್ಯ ರಾಮಗೋಪಾಲ್, ವಿಶ್ವನಾಥ ನಾಕೋಡ್, ರಾಗಮಾಲಿಕ ಪ್ರಶಸ್ತಿ: ಕೂಮಿ ಸಮ್ ಕಸದ್, ಮದನ ಕುಮಾರ್ ಶರ್ಮ, ಆಯೋಜನೆ: ಹಮ್ ಆ್ಯಂಡ್ ಅನದ ಫೌಂಡೇಶನ್, ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರಂ, ಸಮಯ: ಮಧ್ಯಾಹ್ನ 3.30

ಕಂಚಿ ಕಾಮಕೋಟಿ ಪೀಠದ ಶಂಕರ ವಿಜಯೇಂದ್ರ ಶಂಕರಾಚಾರ್ಯ ಸ್ವಾಮೀಜಿಗೆ ಸ್ವಾಗತ, ಸಾರ್ವಜನಿಕ ದರ್ಶನ, ಬೆಳಿಗ್ಗೆ 6ರಿಂದ ಮಲ್ಲೇಶ್ವರಂ ಕಂಚಿ ಕಾಮಕೋಟಿ ಪೀಠಂ 11ನೇ ಕ್ರಾಸ್, 5ನೇ ಮೇನ್ ಮತ್ತು ಸಂಜೆ 5ರಿಂದ ವಾಸವಿ ದೇವಸ್ಥಾನ ಮಲ್ಲೇಶ್ವರಂ 8ನೇ ಕ್ರಾಸ್‌ನಲ್ಲಿ ಮೆರವಣಿಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ, ಉದ್ಘಾಟನೆ: ಸಿ.ಕೆ. ರಾಮೇಗೌಡ, ಉಪನ್ಯಾಸ: ಆರ್. ಕಾವಲಮ್ಮ, ಅತಿಥಿ: ಎಸ್.ಆರ್. ಪ್ರಸನ್ನ ಕುಮಾರ್, ಅಧ್ಯಕ್ಷತೆ: ಎಂ. ಪ್ರಕಾಶ ಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 5

ಹುಣ್ಣಿಮೆ ಹಾಡಿನ 174ನೇ ಸಂಚಿಕೆ, ಅತಿಥಿ: ಬೇಲೂರು ರಘುನಂದನ್, ಅಧ್ಯಕ್ಷತೆ: ಬಿ.ಕೆ.ಶಿವರಾಂ, 'ನಾದಮಯ ಈ ಲೋಕವೆಲ್ಲಾ' ಕಾರ್ಯಕ್ರಮ ನಡೆಸುವವರು: ತುಮಕೂರು ಮಂಜು ಮತ್ತು ತಂಡ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ದೇವಾಲಯದ ಬಯಲು ರಂಗಮಂದಿರ, ಸಂಜೆ 6.30

> **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ, ಉದ್ಘಾಟನೆ:** ನ್ಯಾ.ಬಿ.ವೀರಪ್ಪ, ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ: ಕೆ.ಸತ್ಯನಾರಾಯಣ. ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ತಿನ ಮಂದಿರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಸಮಯ: ಸಂಜೆ 5

> **ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ, nagaradalli_indu@prajavani.co.in**



ನಗರದ ಸ್ವಾತಂತ್ರ್ಯ ಉದ್ಯಾನದ ಪ್ರತಿಭಟನಾ ಸ್ಥಳಕ್ಕೆ ಶನಿವಾರ ಸಚಿವ ಎಚ್.ಸಿ.ಮಹದೇವಪ್ಪ ಅವರು ಭೇಟಿ ನೀಡಿದರು

'ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಶನಿವಾರ ಸಚಿವ ಎಚ್.ಸಿ.ಮಹದೇವಪ್ಪ ಭೇಟಿ ನೀಡಿ, ಅಹವಾಲು ಆಲಿಸಿದರು.

'ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡುತ್ತೇವೆ. ಪಕ್ಷದ ಚುನಾವಣೆಯ ಪ್ರಣಾಳಿಕೆಯಲ್ಲೂ ಈ ವಿಚಾರವನ್ನು ಪ್ರಸ್ತಾಪಿಸಲಾಗಿದೆ' ಎಂದು ಸಚಿವರು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ಗಮನಕ್ಕೆ ತಂದು ಕ್ರಮ ಕೈಗೊಳ್ಳುತ್ತೇವೆ. ಶೀಘ್ರದಲ್ಲೇ ನಿಮ್ಮ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ' ಎಂದು ಹೇಳಿದರು.

'1978ರ ಕಾಯ್ದೆ ಅಡಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಲ್ಲಿಸುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಪರರ ಪಾಲಾಗುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಆಗ್ರಹಿಸಿ 153 ದಿನದಿಂದ ಪ್ರತಿಭಟನೆ ನಡೆಯುತ್ತಿದೆ.

ಪ್ರತಿಭಟನಾ ಸ್ಥಳದಲ್ಲಿ ಮಂಜುನಾಥ್, ಅಣ್ಣಯ್ಯ ಹೆಣ್ಣೂರು, ಶ್ರೀನಿವಾಸ್, ಬಸವರಾಜ ಕೌತಳ್, ಹೆಬ್ಬಾಳ್ ವೆಂಕಟೇಶ್, ರಾಮಣ್ಣ, ಬಿ.ಎಂ. ವೆಂಕಟೇಶ್, ಮುನಿಸ್ವಾಮಪ್ಪ, ಅಂಬಣ್ಣ, ವೇಣು ಮೌರ್ಯ, ಸಾಗರ್, ಇಂದೂದರ ಹೊನ್ನಾಪುರ, ಕೋಡಿಗೆಹಳ್ಳಿ ನಾಗರಾಜು, ಶಿವರಾಜ್, ನಾಗಾರ್ಜುನ್ ವೆಂಕಟೇಶ್ ಇದ್ದರು.

ಬೆಸ್ಕಾಂ: ಬೆಂಗಳೂರು ಬಳಿಕ ಗ್ರಾಮೀಣ ವಲಯಕ್ಕೂ ವಿಸ್ತರಣೆಗೆ ಸಿದ್ಧತೆ

'ಡಿಜಿಟಲ್ ಮೀಟರ್' ಅಳವಡಿಕೆಗೆ ವೇಗ

● ಆದಿತ್ಯ ಕೆ.ಎ.

ಬೆಂಗಳೂರು: ವಿದ್ಯುತ್ ಸೋರಿಕೆ ತಡೆ ಹಾಗೂ ಗ್ರಾಹಕರು ಬಳಸಿದ ವಿದ್ಯುತ್ ಮಾಹಿತಿಯನ್ನು ನಿಖರವಾಗಿ ಅಳೆಯಲು 'ಡಿಜಿಟಲ್ ಮೀಟರ್' ಅಳವಡಿಕೆ ಮಾಡುತ್ತಿರುವ ಬೆಸ್ಕಾಂ, ಬೆಂಗಳೂರಿನಲ್ಲಿ ಇದುವರೆಗೆ 13.97 ಲಕ್ಷ ಮೀಟರ್ ಅಳವಡಿಸಿದೆ.

ಬೆಂಗಳೂರಿನಲ್ಲಿ 'ಡಿಜಿಟಲ್ ಮೀಟರ್' ಅಳವಡಿಕೆ ಮುಕ್ತಾಯವಾದ ಕೂಡಲೇ ಬೆಸ್ಕಾಂ ವ್ಯಾಪ್ತಿಯ ಗ್ರಾಮೀಣ ವಲಯದಲ್ಲೂ ಈ ಮೀಟರ್ ಅಳವಡಿಕೆ ಯೋಜನೆ ಜಾರಿಗೆ ತರಲು ಸಿದ್ಧತೆ ನಡೆಸಿದೆ. ಸರ್ಕಾರದಿಂದ ಅನುಮತಿ ಪಡೆಯಲಾಗುವುದು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷದ ಜುಲೈನಿಂದ ಡಿಜಿಟಲ್ ಮೀಟರ್ ಉಚಿತವಾಗಿ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ನಗರದ ನಾಲ್ಕೂ ವಿಭಾಗಗಳಲ್ಲೂ ಬಾಕಿಯಿರುವ ಮೀಟರ್ ಅಳವಡಿಕೆ ಕಾರ್ಯವನ್ನು ಅವಧಿಗೂ ಮುನ್ನವೇ ಮುಕ್ತಾಯಗೊಳಿಸುವ ಲೆಕ್ಕಾಚಾರದಲ್ಲಿ ಬೆಸ್ಕಾಂ ಇದೆ. ಕೆಲಸವನ್ನೂ ಚುರುಕುಗೊಳಿಸಿದೆ.

ಪ್ರಜಾವಾಣಿ ವಿಶೇಷ



ಡಿಜಿಟಲ್ ಮೀಟರ್ ಅಳವಡಿಸುತ್ತಿರುವ ಸಿಬ್ಬಂದಿ.

ನಗರದಲ್ಲಿ ಒಟ್ಟು 58,77,000 ಎಲ್.ಟಿ ವಿದ್ಯುತ್ ಮಾಪಕಗಳಿವೆ. ಕಳೆದ ವರ್ಷ ನಡೆಸಿದ್ದ ಸಮೀಕ್ಷೆಯಂತೆ 17,90,882 'ಎಲೆಕ್ಟ್ರೊ ಮೆಕಾನಿಕಲ್' ಮೀಟರ್‌ಗಳಿದ್ದವು. ನಿಖರವಾಗಿ ಮೀಟರ್ ರೀಡಿಂಗ್ ತಿಳಿಯಲು ಅವುಗಳನ್ನು ಡಿಜಿಟಲ್ ಮಾಪಕಗಳನ್ನಾಗಿ ಪರಿವರ್ತಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು.

ಬೆಂಗಳೂರು ವೃತ್ತ	ಗುರಿ	ಪ್ರಸ್ತುತ ಅಳವಡಿಕೆ	ಬಾಕಿ
ಪೂರ್ವ	4,14,063	3,25,498	88,565
ಪಶ್ಚಿಮ	3,25,650	2,85,580	40,070
ಉತ್ತರ	4,87,930	3,68,507	1,19,423
ದಕ್ಷಿಣ	5,63,239	4,17,619	1,45,620
ಒಟ್ಟು	17,90,882	13,97,204	3,93,678

'ಸದ್ಯದಲ್ಲೇ ಟೆಂಡರ್'



ಬೆಸ್ಕಾಂ ವ್ಯಾಪ್ತಿಗೆ 8 ಜಿಲ್ಲೆಗಳು ಸೇರುತ್ತವೆ. ಬೆಂಗಳೂರು ಗ್ರಾಮಾಂತರ ಮತ್ತು ಚಿತ್ರದುರ್ಗ–ದಾವಣಗೆರೆ ಪ್ರದೇಶ ವಲಯದಲ್ಲಿ ಡಿಜಿಟಲ್ ಮೀಟರ್ ಅಳವಡಿಕೆಗೆ ಬೋರ್ಡ್ ಸಭೆಯಲ್ಲಿ ಅನುಮತಿ ಪಡೆದು ಸದ್ಯದಲ್ಲೇ ಟೆಂಡರ್ ಆಹ್ವಾನಿಸಲಾಗುವುದು. ಇದಕ್ಕೆ ಸಿದ್ಧತೆ ನಡೆದಿದೆ.

ಮಹಾಂತೇಶ್ ಬೀಳಗಿ, ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

ಮೇ 24ರ ವೇಳೆಗೆ 13,97,204 'ಡಿಜಿಟಲ್ ಮೀಟರ್' ಅಳವಡಿಕೆ ಕೆಲಸ ಪೂರ್ಣವಾಗಿದೆ. ಕೆಲವೇ ತಿಂಗಳಲ್ಲಿ ಬಾಕಿಯಿರುವ 3,93,678 ಡಿಜಿಟಲ್ ಮೀಟರ್ ಅಳವಡಿಕೆ ಪೂರ್ಣಗೊಳಿಸುತ್ತೇವೆ ಎಂದು ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಡಿಜಿಟಲ್ ಮೀಟರ್ ಅಳವಡಿಕೆಯಿಂದ ವಿದ್ಯುತ್ ಶುಲ್ಕದಲ್ಲಿ ಹಿಂದೆ ಉಂಟಾಗುತ್ತಿದ್ದ ಪ್ರಮಾದಗಳು ತಪ್ಪಲಿವೆ. ಗ್ರಾಹಕರು ಬಳಸುವ ಸಣ್ಣ ಪ್ರಮಾಣದ ವಿದ್ಯುತ್ ಕೂಡ ಲೆಕ್ಕಕ್ಕೆ ಸಿಗಲಿದೆ. ವಿದ್ಯುತ್ ಬಿಲ್‌ನಲ್ಲಿ ಹಿಂದಿಗಿಂತ ಸ್ವಲ್ಪ ಹೆಚ್ಚಳ ಕಂಡು ಬಂದಿದೆ. ಹಿಂದಿನ ಮೀಟರ್‌ಗಳಿಂದ ಹಣ ಸೋರಿಕೆ ಆಗುತ್ತಿತ್ತು. ಕೆಲವೊಮ್ಮೆ ಮೀಟರ್ ಬಗ್ಗೆಯೂ ದೂರು ಬರುತ್ತಿದ್ದವು. ಆ ದೂರು ನಿವಾರಿಸಲು ಹೊಸ ವ್ಯವಸ್ಥೆ ಜಾರಿಗೆ ತರಲಾಗಿದೆ.

'ಡಿಜಿಟಲ್ ಮೀಟರ್‌ನಿಂದ ಎರಡು ವರ್ಷಗಳ ತನಕ ಬಳಸಿರುವ ವಿದ್ಯುತ್ ಬಳಕೆ ಹಾಗೂ ಪಾವತಿಸಿರುವ ಶುಲ್ಕದ ಮೊತ್ತವೂ ಸಿಗಲಿದೆ. ಅಲ್ಲದೇ ರಾಜ್ಯ ಸರ್ಕಾರವು ಜಾರಿಗೆ ತರುತ್ತಿರುವ ವಿದ್ಯುತ್ ಉಚಿತ ಯೋಜನೆಗೆ ಹಿಂದಿನ ಮೀಟರ್ ಅಳೆಯುವ ಲೆಕ್ಕಾಚಾರಕ್ಕೂ ನೆರವಾಗಲಿವೆ' ಎಂದು ಸಿಬ್ಬಂದಿ ಹೇಳುತ್ತಾರೆ.

10 ವರ್ಷಗಳ ಹಿಂದೆ ಅಳವಡಿಸಿದ್ದ 'ಎಲೆಕ್ಟ್ರೋ ಮೆಕಾನಿಕಲ್ ಮೀಟರ್' ಅನ್ನು ಡಿಜಿಟಲ್ ಮೀಟರ್‌ಗೆ ಬದಲಾವಣೆ ಮಾಡಲಾಗುತ್ತಿದೆ. ಇದಕ್ಕೆ ₹ 139 ಕೋಟಿ ವೆಚ್ಚ ಮಾಡಲಾಗುತ್ತಿದೆ. ನಗರ ವ್ಯಾಪ್ತಿಯಲ್ಲಿ ಎರಡು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ. ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗೆ ₹ 934 ಹಾಗೂ ತ್ರಿ–ಫೇಸ್ ಮೀಟರ್‌ಗೆ ₹2,312 ವೆಚ್ಚವನ್ನು ಬೆಸ್ಕಾಂ ಭರಿಸುತ್ತಿದೆ.

'ಸಂವಿಧಾನ ಅಲುಗಾಡಿಸಲು ಸಾಧ್ಯವಿಲ್ಲ'

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಬದಲಾವಣೆ ಮಾಡುತ್ತೇವೆಂದು ಕೆಲವರು ಬೊಬ್ಬೆ ಹಾಕುತ್ತಿದ್ದಾರೆ. ಯಾರಿಂದಲೂ ಸಂವಿಧಾನ ಅಲುಗಾಡಿಸಲು ಸಾಧ್ಯವಿಲ್ಲ. ಅದನ್ನು ಮುಟ್ಟಿದರೆ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮವೇ ನಡೆಯಲಿದೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಎಚ್ಚರಿಸಿದರು.

ನಗರದಲ್ಲಿ ಶನಿವಾರ ಡಾ.ಬಿ.ಆರ್. ಅಂಬೇಡ್ಕರ್ ಪ್ರಕಾಶನ ಹಾಗೂ ಜಾಣಗೆರೆ ಪತ್ರಿಕೆ ಪ್ರಕಾಶನ ಆಯೋಜಿಸಿದ್ದ ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

'ಅಂಬೇಡ್ಕರ್ ಅವರು ಪ್ರಬಲ ರಾಜಕೀಯ ಗ್ರಂಥವಾದ ಸಂವಿಧಾನ ಕೊಟ್ಟಿದ್ದಾರೆ. ಅವರು ತಮ್ಮ ಮುತ್ಸದ್ದಿತನದ ರಾಜಕೀಯ ಶಕ್ತಿಯನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕ ಮಾಡಿದ್ದಾರೆ. ಯಾರಿಂದಲೂ ಸಂವಿಧಾನ ಬದಲಾವಣೆ ಸಾಧ್ಯವೇ ಇಲ್ಲ. ಅವರು ಬೊಬ್ಬೆ ಹಾಕುತ್ತಲೇ ಇರಲಿ' ಎಂದು ಹೇಳಿದರು.

'ದಲಿತ ಸಂಘರ್ಷ ಸಮಿತಿ, ಎಡಪಕ್ಷಗಳನ್ನು ಹೊರತುಪಡಿಸಿ ಎಲ್ಲ ರಾಜಕೀಯ ಪಕ್ಷಗಳ ಮುಖವಾಡ ಒಂದೇ ಆಗಿದೆ. ರಾಜಕೀಯ ಪಕ್ಷಗಳು ಮಾತ್ರ ಬಂಡವಾಳಶಾಹಿಗಳಿಗೆ ಮಾತ್ರ ಚುನಾವಣೆಯಲ್ಲಿ ಟಿಕೆಟ್ ನೀಡುತ್ತಿವೆ. ದೇಶದ ಸುಭಿಕ್ಷೆ ಯಾರಿಗೂ ಬೇಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ದಿವಂಗತ ಗೋಪಾಲ ದೇವನಹಳ್ಳಿ ಅವರ 'ದಲಿತ ಚಿಂತನ ಲೋಕ' ಕೃತಿ ಕುರಿತು ಮಾತನಾಡಿದ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್, 'ಸಂವಿಧಾನದಲ್ಲಿರುವ ಎಲ್ಲ ಆಶಯಗಳು ಇಂದಿಗೂ ಜಾರಿಗೊಂಡಿಲ್ಲ. ಅಂಬೇಡ್ಕರ್ ಅವರ ಮೇಲೆ ಭಾವನಾತ್ಮಕ ಅಭಿಮಾನ ಹೊಂದಿರುವವರು ಕೋಟ್ಯಂತರ ಮಂದಿ ಇದ್ದಾರೆ. ಆದರೆ, ಅವರ ಬಗ್ಗೆ ಅಧ್ಯಯನ ಮಾಡಿ ಚಿಂತನೆಗಳನ್ನು ಪ್ರತಿಪಾದನೆ ಮಾಡುವವರ ಸಂಖ್ಯೆ ಕಡಿಮೆಯಿದೆ' ಎಂದು ಹೇಳಿದರು.

ಲೇಖಕ ಜಾಣಗೆರೆ ವೆಂಕಟರಾಮಯ್ಯ ಮಾತನಾಡಿ, 'ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸದೇ ಇದ್ದರೆ ಸಮಾಜವು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಸಂವಿಧಾನವನ್ನು ಮುಟ್ಟಲು ಬಿಡುವುದಿಲ್ಲ' ಎಂದು ಎಚ್ಚರಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಚಿಂತಕ ಪ್ರೊ.ಎಲ್.ಎನ್.ಮುಕುಂದರಾಜ್, ಲೇಖಕ ಪ್ರೊ.ಎನ್.ಚಿನ್ನಸ್ವಾಮಿ ಸೋಸಲೆ, ಕೆ.ಚಂದ್ರಶೇಖರ್ ಇದ್ದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರು (ಎಡದಿಂದ ನಾಲ್ಕನೆಯವರು) ಮೂರು ಕೃತಿಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಕೆ.ಚಂದ್ರಶೇಖರ್, ಚಿಂತಕ ಪ್ರೊ.ಎನ್. ಚಿನ್ನಸ್ವಾಮಿ ಸೋಸಲೆ, ಚಿಂತಕ ಬಂಜಗೆರೆ ಜಯಪ್ರಕಾಶ್, ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಚಿಂತಕ ಪ್ರೊ.ಎಲ್.ಎನ್. ಮುಕುಂದರಾಜ್, ಜಾಣಗೆರೆ ವೆಂಕಟರಾಮಯ್ಯ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- **ಲೇಖಕ:** ಗೋಪಾಲ ದೇವನಹಳ್ಳಿ
- **ಕೃತಿ:** ದಲಿತ ಚಿಂತನ ಲೋಕ
- **ಬೆಲೆ:** ₹ 500

- **ಲೇಖಕ:** ಜಾಣಗೆರೆ ವೆಂಕಟರಾಮಯ್ಯ
- **ಕೃತಿ:** ಜಾಣಗೆರೆ: 50 ಕತೆಗಳು
- **ಬೆಲೆ:** ₹ 500

- **ಲೇಖಕ:** ಕೆ.ಚಂದ್ರಶೇಖರ್
- **ಕೃತಿ:** ಅಂತರಾಳ (ಸಂಪಾದಕೀಯ ಬರಹಗಳ ಸಂಕಲನ)
- **ಬೆಲೆ:** ₹ 250 (ಮೂರು ಕೃತಿಗಳೂ ಡಾ.ಬಿ.ಆರ್. ಅಂಬೇಡ್ಕರ್ ಪ್ರಕಾಶನ)

ಅಂಬೇಡ್ಕರ್ ಜಯಂತಿ ಆಚರಣೆ: ಯುವಕನ ಕೊಲೆ

ಮುಂಬೈ (ಪಿಟಿಐ): ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸಿದ್ದಕ್ಕಾಗಿ 24 ವರ್ಷದ ದಲಿತ ಯುವಕನನ್ನು ಕೊಲೆ ಮಾಡಿದ ಆರೋಪದ ಮೇಲೆ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಏಳು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಮೂರು ದಿನಗಳ ಹಿಂದೆ ಬೊಂಧರ್ ಹವೇಲಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಮೃತನನ್ನು ಅಕ್ಷಯ್ ಭಾಲೇರಾವ್ ಎಂದು ಗುರುತಿಸಲಾಗಿದೆ ಎಂದು ಹೇಳಿದ್ದಾರೆ.

ಗ್ರಾಮದಲ್ಲಿ ಗುರುವಾರ ಮೇಲ್ಜಾತಿ ಸಮುದಾಯದವರೊಬ್ಬರ ಮದುವೆ ನಡೆಯುತ್ತಿತ್ತು. ಆ ವೇಳೆ ಅಕ್ಷಯ್ ತನ್ನ ಸಹೋದರ ಆಕಾಶ್‌ನೊಂದಿಗೆ ಹೊರಟಿದ್ದರು. ಮದುವೆಯಲ್ಲಿ ಪಾಲ್ಗೊಂಡಿದ್ದ ಆರೋಪಿಗಳು, ಅಕ್ಷಯ್, ಆಕಾಶ್ ಅವರನ್ನು ನೋಡಿದ್ದಾರೆ. ಅಂಬೇಡ್ಕರ್ ಜಯಂತಿ ಆಚರಿಸಿದ್ದಕ್ಕಾಗಿ ಅವರೊಂದಿಗೆ ಜಗಳವಾಡಿದ್ದಾರೆ. ಅಕ್ಷಯ್‌ಗೆ ಕತ್ತಿಯಿಂದ ಇರಿದಿದ್ದಾರೆ' ಎಂದು ಹೇಳಿದರು.

ಸಾವರ್ಕರ್ ಕಾರ್ಯಕ್ರಮಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಸಾವರ್ಕರ್ ಪ್ರತಿಷ್ಠಾನವು ಸಾವರ್ಕರ್ ಜಯಂತಿ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಪೊಲೀಸರು ತಡೆ ಒಡ್ಡಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ನಂತರ ಅಧಿಕಾರಿಗಳ ಅನುಮತಿಯೊಂದಿಗೆ ಕಾರ್ಯಕ್ರಮ ಮುಂದುವರಿಯಿತು.

ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಸಂಜೆ 5ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಅದಕ್ಕೆ ಮುನ್ನ ಮಧ್ಯಾಹ್ನ 3ರಿಂದ 5ರವರೆಗೆ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು. ಅದರಂತೆ ಸಂಘಟಕರು ಮುಕ್ತ ವಿಶ್ವವಿದ್ಯಾಲಯ ಆವರಣಕ್ಕೆ ಬಂದಾಗ ಪ್ರವೇಶಿಸಿದಂತೆ ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿ ತಡೆದರು.

'ಕಾರ್ಯಕ್ರಮಕ್ಕೆ ಅನುಮತಿ ಪಡೆಯದ ಕಾರಣ ಒಳಗೆ ಬಿಡುವುದಿಲ್ಲ' ಎಂದರು. ಸಂಘಟಕರು ತಾವು ಅನುಮತಿ ಪಡೆದಿರುವುದಾಗಿ ವಾದಿಸಿದರು. ಈ ಗೊಂದಲ ಮುಂದುವರಿದ್ದರಿಂದ ಮಕ್ಕಳು ವಿ.ವಿ. ಗೇಟ್‌ನ ಮುಂಭಾಗ ರಸ್ತೆಯಲ್ಲೇ ಚಿತ್ರ ಬರೆದರು.

ಬಳಿಕ ವಿ.ವಿ. ಅಧಿಕಾರಿಗಳು ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿದ್ದು, ಮಧ್ಯಾಹ್ನ 3.45ರ ಸುಮಾರಿಗೆ ಆಯೋಜಕರು ಹಾಗೂ ಮಕ್ಕಳನ್ನು ಸಭಾಂಗಣದ ಒಳ ಬಿಡಲಾಯಿತು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಸಂಸದ ಪ್ರತಾಪ ಸಿಂಹ, 'ಸಾವರ್ಕರ್ ಜಯಂತಿ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರವೇ ಪೊಲೀಸರು ಹಾಗೂ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅಡ್ಡಿಪಡಿಸಿದೆ' ಎಂದು ದೂರಿದರು.

'ಆಯೋಜಕರು ಶುಲ್ಕ ಕಟ್ಟಿ, ಸಭಾಂಗಣ ಕಾಯ್ದಿರಿಸಿದ್ದರು. ಆದರೆ, ಸರ್ಕಾರದ ಕಡೆಯಿಂದ ಒತ್ತಡ ಬಂದ ಕಾರಣ ಅಧಿಕಾರಿಗಳು ಅನುಮತಿ ನೀಡದೇ ಕಾರ್ಯಕ್ರಮ ರದ್ದು ಮಾಡುವ ಪ್ರಯತ್ನ ನಡೆಸಿದರು. ನಾವೆಲ್ಲ ಪ್ರತಿಭಟನೆ ಎಚ್ಚರಿಕೆ ನೀಡಿದ್ದರಿಂದ ಮತ್ತೆ ಅನುಮತಿ ನೀಡಿದ್ದಾರೆ. ಕಾಂಗ್ರೆಸ್ ಈ ರೀತಿಯ ನೀಚ ಮನಸ್ಥಿತಿ ಬಿಡಬೇಕು' ಎಂದು ಹೇಳಿದರು.

ಪ್ರಶಸ್ತಿ ಪ್ರದಾನ: ಸಂಜೆ ನಡೆದ ಕಾರ್ಯಕ್ರಮದಲ್ಲಿ ಇತಿಹಾಸಕಾರ ವಿಕ್ರಂ ಸಂಪತ್ ಅವರಿಗೆ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ 'ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ' ಪ್ರದಾನ ಮಾಡಿದರು. ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಹಾಗೂ ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಯಶಸ್ವಿನಿ ಇದ್ದರು.

ಇಂದಿನಿಂದ ಜೀವನಶೈಲಿ ಶೈಕ್ಷಣಿಕ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಗ ಪರಿಜ್ಞಾನ ಪ್ರತಿಷ್ಠಾನ, ಶಾರದಾ ಆಯುರ್ವೇದ ಆಸ್ಪತ್ರೆ, ವಿಭು ಪ್ರತಿಷ್ಠಾನ ಹಾಗೂ ಪದ್ಮಶ್ರೀ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ನಗರದ ಕೊಮ್ಮಘಟ್ಟದ ಪೂರ್ಣಾಯು ಆಯುರ್ವೇದ ಕೇಂದ್ರದಲ್ಲಿ ಜೂನ್ 4 ಹಾಗೂ 5ರಂದು 'ನಿಸರ್ಗದ ಜೊತೆ ಒಂದು ದಿನ' ಎಂಬ ಪರಿಕಲ್ಪನೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಯೋಜಿಸಲಾಗಿದೆ.

4ರಂದು ಬೆಳಿಗ್ಗೆ 10ಕ್ಕೆ ಆಯುರ್ವೇದ, ಯೋಗ, ವೇದಾಂತ ಆಧಾರಿತ ಜೀವನಶೈಲಿ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಭು ಪ್ರತಿಷ್ಠಾನದ ಸಂಸ್ಥಾಪಕ ಶಿವಪ್ರಕಾಶಾನಂದ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದು, 'ಯಶಸ್ವಿ ಜೀವನಕ್ಕೆ ಮೌಲ್ಯ ಹಾಗೂ ಕರ್ತವ್ಯದ ಮಹತ್ವ' ಕುರಿತು ಉಪನ್ಯಾಸ ನೀಡಲಿದ್ದಾರೆ.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ.ಅಹಲ್ಯಾ ಶರ್ಮಾ ಪರಿಸರದ ಜೊತೆ ಸಾಮರಸ್ಯದ ಬದುಕಿನಿಂದ ಆನಂದದಾಯಕ ಜೀವನ ವಿಷಯ ಕುರಿತು ಮಾತನಾಡಲಿದ್ದಾರೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ. ಪದ್ಮಶ್ರೀ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ಟ್ರಸ್ಟಿ ಟಿ.ಕೆ. ನಾರಾಯಣಪ್ಪ ಪಾಲ್ಗೊಳ್ಳಲಿದ್ದಾರೆ. ಜೂನ್ 5ರಂದು ಔಷಧೀಯ ಸಸ್ಯಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಿಸಲಾಗುವುದು.

ನೋಂದಣಿಗೆ ಮೊಬೈಲ್: 94490 02020, 94807 09995 ಸಂಪರ್ಕಿಸಬಹುದು ಎಂದು ಸಂಘಟಕ ಎಚ್.ವಿ.ಸುಬ್ಬರಾವ್ ತಿಳಿಸಿದ್ದಾರೆ.

'ಕಾಂಗ್ರೆಸ್ ದೌರ್ಜನ್ಯ ಎದುರಿಸಲು ಸಹಾಯವಾಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರವು ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡು ನಡೆಸಬಹುದಾದ ದೌರ್ಜನ್ಯಗಳನ್ನು ಎದುರಿಸಲು ಬಿಜೆಪಿ ಕಾನೂನು ಪ್ರಕೋಷ್ಠದಿಂದ ಶೀಘ್ರದಲ್ಲೇ ಸಹಾಯವಾಣಿ ಆರಂಭಿಸಲಾಗುವುದು' ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರವು ನಮ್ಮ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸುವುದು, ಎಫ್‌ಐಆರ್ ದಾಖಲಿಸುವುದು, ದೌರ್ಜನ್ಯ ನಡೆಸುವುದಕ್ಕೆ ಮುಂದಾಗಿದೆ. ಅದನ್ನು ಎದುರಿಸುವ ಕುರಿತು ಬಿಜೆಪಿ ಕಾನೂನು ಪ್ರಕೋಷ್ಠದ ಸದಸ್ಯರಾಗಿರುವ ಎಲ್ಲ ವಕೀಲರ ಜತೆ ಸಭೆ ನಡೆಸಲಾಗಿದೆ. ಒಂದು ವಾರದೊಳಗೆ ಸಹಾಯವಾಣಿಗೆ ಚಾಲನೆ ನೀಡಲಾಗುವುದು. ದಿನದ 24 ಗಂಟೆಯೂ ನಿರಂತರವಾಗಿ ಕೆಲಸ ಮಾಡಲಿದೆ ಎಂದರು.

ಬಿಜೆಪಿ ರಾಜ್ಯ ಕಾನೂನು ಪ್ರಕೋಷ್ಠದ ಸಂಚಾಲಕ ಯೋಗೇಂದ್ರ ಹೂಡಾಘಟ್ಟ ಇದ್ದರು.



ರ್‍ಯಾಂಪ್ ವಾಕ್

ವಿಶ್ವ ಕ್ಯಾನ್ಸರ್ ಗುಣಮುಖರ ದಿನದ ಅಂಗವಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆ ಆಯೋಜಿಸಿದ್ದ ಕ್ಯಾನ್ಸರ್ ಸೇನಾನಿಗಳಿಗೆ ಗೌರವ ಸಮಾರಂಭದಲ್ಲಿ ನಟಿ ಪ್ರೇಮಾ ಅವರು ಕ್ಯಾನ್ಸರ್‌ನಿಂದ ಗುಣಮುಖರಾದವರ ಜತೆಗೆ ರ್‍ಯಾಂಪ್ ವಾಕ್ ಮಾಡಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಆನೆ ದಾಳಿ: ತೋಟದ ಕಾವಲುಗಾರ ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ವಿರುಪಸಂದ್ರದಲ್ಲಿ ಶನಿವಾರ ಕಾಡಾನೆ ದಾಳಿಗೆ ಮಾವಿನ ತೋಟದ ಕಾವಲುಗಾರ ವೀರಭದ್ರಯ್ಯ(52) ಎಂಬುವವರು ಮೃತಪಟ್ಟಿದ್ದಾರೆ. ಕನಕಪುರದವರಾದ ವೀರಭದ್ರಯ್ಯ ಅವರು, ಲೋಕೇಶ್ ಎಂಬುವರ ಮಾವಿನ ತೋಟದಲ್ಲಿ ಮೂರ್ನಾಲ್ಕು ತಿಂಗಳಿಂದ ಕಾವಲುಗಾರರಾಗಿದ್ದರು.

ನಸುಕಿನಲ್ಲಿ ತೋಟಕ್ಕೆ ಬಂದಿರುವ ಕಾಡಾನೆ ವೀರಭದ್ರಯ್ಯ ಅವರ ಮೇಲೆ ದಾಳಿ ಮಾಡಿದೆ. ತಲೆ ಮೇಲೆ ಕಾಲಿಟ್ಟು ಕೊಂದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.ಘಟನೆಯನ್ನು ಖಂಡಿಸಿರುವ ಸ್ಥಳೀಯರು, ಕಾಡಾನೆಗಳ ಹಾವಳಿ ತಡೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಹಾಗೂ ಮೃತ ವೀರಭದ್ರಯ್ಯ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ಕನಕಪುರ ತಾಲ್ಲೂಕಿನ ಕಬ್ಬಾಳು ಗ್ರಾಮದಲ್ಲಿ ಆನೆ ದಾಳಿಗೆ ರೈತರೊಬ್ಬರು ಮೃತಪಟ್ಟಿದ್ದರು.

ಎಸ್‌ಬಿಐನಿಂದ 'ಪ್ರಾಜೆಕ್ಟ್ ಕುಬೇರ್' ಆರಂಭ

ಬೆಂಗಳೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರು ವೃತ್ತದ ವತಿಯಿಂದ 'ಪ್ರಾಜೆಕ್ಟ್ ಕುಬೇರ್' ಆರಂಭಿಸಲಾಗಿದೆ.

ಈ ಯೋಜನೆಯಡಿ ನಾಲ್ಕು ವ್ಯವಹಾರ ಬ್ಯಾಂಕಿಂಗ್ ಹಬ್ ಹಾಗೂ ಒಂದು ಕಾರ್ಪೊರೇಟ್ ಪ್ಯಾಕೇಜ್ ಹಬ್ ಕಾರ್ಯನಿರ್ವಹಿಸಲಿದ್ದು, ಗ್ರಾಹಕರಿಗೆ ಹಲವು ಸೌಲಭ್ಯಗಳನ್ನು ನೀಡಲಿವೆ.

ಎಸ್‌ಬಿಐ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ನಂದ್‌ಕಿಶೋರ್ ಅವರು ಈ ಹಬ್‌ಗಳಿಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಎಸ್‌ಬಿಐ ಆಡಳಿತ ಕಟ್ಟಡದಲ್ಲಿ ಜೂನ್ 2ರಂದು ಚಾಲನೆ ನೀಡಿದರು. ಪ್ರಧಾನ ವ್ಯವಸ್ಥಾಪಕ (ನೆಟ್‌ವರ್ಕ್ 2) ಸಂದೀಪ್ ಭಟ್ನಾಗರ್, ಪ್ರಧಾನ ವ್ಯವಸ್ಥಾಪಕರಾದ ರಿಮ್‌ಝಿಮ್ ಛಬ್ರಾ, ಮುರಳಿ ಕೃಷ್ಣ ಇದ್ದರು.

ವ್ಯವಹಾರ ಬ್ಯಾಂಕಿಂಗ್ ಹಬ್‌ಗಳು ಕಾರ್ಪೊರೇಟ್ ಗ್ರಾಹಕರಿಗೆ ಖಾತೆ ತೆರೆಯುವುದರಿಂದ ಹಿಡಿದು ಎಸ್‌ಬಿಐನ ಡಿಜಿಟಲ್ ಸೌಲಭ್ಯಗಳನ್ನು ಒದಗಿಸಲಿವೆ.

ಕಾರ್ಪೊರೇಟ್ ಸ್ಯಾಲರಿ ಪ್ಯಾಕೇಜ್‌ನಡಿ ಎಸ್‌ಬಿಐ ತನ್ನ ಗ್ರಾಹಕರಿಗೆ ವಿಸ್ತಾರ ಶ್ರೇಣಿಯ ಕೊಡುಗೆಗಳನ್ನು ವೇತನ ಖಾತೆಗೆ ನೀಡಲಿದೆ. ಈ ಹಬ್ ಯುವ ವೃತ್ತಿಪರರನ್ನು ಒಳಗೊಂಡಿದ್ದು, ವೇತನ ಖಾತೆ ಹೊಂದಿದವರಿಗೆ ಮೀಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂವರಿಗಾಗಿ ಡಿಸಿಎಂ ಹುದ್ದೆ ಒಪ್ಪಿಕೊಂಡೆ: ಡಿ.ಕೆ. ಶಿವಕುಮಾರ್

'ಸಿ.ಎಂ ಹುದ್ದೆ: ಮುಂದೆ ಒಳ್ಳೆ ದಿನ ಬರಲಿವೆ'

ಪ್ರಜಾವಾಣಿ ವಾರ್ತೆ

ರಾಮನಗರ: 'ನನ್ನನ್ನು ಮುಖ್ಯಮಂತ್ರಿ ಮಾಡಬೇಕು ಅಂತ ನೀವು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಿದ್ರಿ. ಹೈಕಮಾಂಡ್ ಉಪ ಮುಖ್ಯಮಂತ್ರಿ ಜವಾಬ್ದಾರಿ ನೀಡಿತು. ಇದರಿಂದ ಯಾರೂ ನಿರಾಶರಾಗಬೇಕಿಲ್ಲ. ಮುಂದೆ ಒಳ್ಳೆಯ ದಿನಗಳು ಬರಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕನಕಪುರ ತಾಲ್ಲೂಕಿನ ಕಲ್ಲಹಳ್ಳಿ, ಹಾರೋಹಳ್ಳಿ ಸೇರಿದಂತೆ ವಿವಿಧೆಡೆ ಶನಿವಾರ ಹಮ್ಮಿಕೊಂಡಿದ್ದ ಮತದಾರರು, ಕಾರ್ಯಕರ್ತರಿಗೆ ಕೃತಜ್ಞತೆ ಹಾಗೂ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ದಬ್ಬಾಳಿಕೆ ಬೇಡ'

'ಚುನಾವಣೆಯಲ್ಲಿ ನಾವು ಗೆದ್ದಿದ್ದೇವೆ ಎಂದು ಇತರ ಪಕ್ಷಗಳ ಮೇಲೆ ದಬ್ಬಾಳಿಕೆ ಮಾಡಬೇಡಿ. ಯಾರ ಜೊತೆಯೂ ಜೋರಾಗಿ ಮಾತನಾಡಬೇಡಿ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಜೆಡಿಎಸ್ ಹಾಗೂ ಬಿಜೆಪಿಯವರನ್ನು ಅಣಕಿಸಬಾರದು. ಚುನಾವಣೆ ಸಂದರ್ಭದಲ್ಲೇ ಎಲ್ಲವೂ ಮುಗಿಯಿತು. ಇನ್ನು ಮುಂದೆ ಶಾಂತಿಯಿಂದ ವರ್ತಿಸಬೇಕು. ನಿಮ್ಮ ನಡುವೆ ಭಿನ್ನಾಭಿಪ್ರಾಯ ತರುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಬೇರೆ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಬೇಕು' ಎಂದು ಕಾರ್ಯಕರ್ತರಿಗೆ ಶಿವಕುಮಾರ್ ಕಿವಿಮಾತು ಹೇಳಿದರು.

'ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಂತಹ ಹಿರಿಯರು ಹೇಳಿದ ಕಿವಿಮಾತು ಕೇಳಿ ಈ ಜವಾಬ್ದಾರಿ ಒಪ್ಪಿಕೊಂಡೆ' ಎಂದರು.

'ಪಕ್ಷ ನನಗೆ ಮೋಸ ಮಾಡುವುದಿಲ್ಲ. ಸರಿಯಾದ ಸಮಯದಲ್ಲಿ ಎಐಸಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ. ಮುಂದೆ ಮುಖ್ಯಮಂತ್ರಿ ಸ್ಥಾನ ನೀಡೇ ನೀಡುತ್ತದೆ. ನಿಮ್ಮ ನಿರೀಕ್ಷೆ ಎಂದಿಗೂ ಹುಸಿಯಾಗುವುದಿಲ್ಲ. ಅದಕ್ಕಾಗಿ, ನಾವು ಶಾಂತಿ ಮತ್ತು ಶ್ರದ್ಧೆಯಿಂದ ಕೆಲಸ ಮಾಡಬೇಕಿದೆ' ಎಂದು ಹೇಳಿದರು.

'ಮುಂದಿನ ದಿನಗಳಲ್ಲಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಯಲಿದ್ದು, ಅದಕ್ಕೆ ಈಗಿನಿಂದಲೇ ಸಿದ್ಧರಾಗಬೇಕು' ಎಂದು ಸಲಹೆ ನೀಡಿದರು.

ಉಪ ಮುಖ್ಯಮಂತ್ರಿ ಆದ ಬಳಿಕ ಮೊದಲ ಸಲ ತವರು ಕ್ಷೇತ್ರಕ್ಕೆ ಬಂದ ಶಿವಕುಮಾರ್ ಅವರನ್ನು ಪಕ್ಷದ ಸ್ಥಳೀಯ ಮುಖಂಡರು, ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿ, ಸನ್ಮಾನಿಸಿದರು. ಸೇಬು, ಕ್ಯಾಪ್ಸಿಕಂ ಹಾಗೂ ಹೂವಿನ ಬೃಹತ್ ಹಾರ ಹಾಕಿ ಸ್ವಾಗತಿಸಿದರು.ಕಬ್ಬಾಳು ಗ್ರಾಮದಲ್ಲಿ ತಮ್ಮ ಕುಲದೇವತೆ ಕಬ್ಬಾಳಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಶಿವಕುಮಾರ್, 101 ಈಡುಗಾಯಿ ಒಡೆದು ಹರಕೆ ತೀರಿಸಿದರು.




ಪ್ರಶಸ್ತಿ ಪುರಸ್ಕೃತ ತಾರೆಯರು



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಭಾವನಾ ರಾವ್ ಮತ್ತು ತಂಡದಿಂದ ನೃತ್ಯ ಪ್ರದರ್ಶನ —ಪ್ರಜಾವಾಣಿ ಚಿತ್ರ



ಕಾರ್ಯಕ್ರಮದಲ್ಲಿ ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಸಲ್ಲಿಸಲಾಯಿತು



ವರ್ಷದ ಅತ್ಯುತ್ತಮ ಚಿತ್ರ
ಕಾಂತಾರ

ಅತ್ಯುತ್ತಮ ನಟ
ನಟ ದಿವಂಗತ ಸಂಚಾರಿ ವಿಜಯ್ (ಚಿತ್ರ:ತಲೆದಂಡ)


ಅತ್ಯುತ್ತಮ ನಟಿ
ಗಾನವಿ ಲಕ್ಷ್ಮಣ್ (ಚಿತ್ರ:ವೇದ)

ಅತ್ಯುತ್ತಮ ಪೋಷಕ ನಟ
ಕಿಶೋರ್ ಕುಮಾರ್ ಜಿ. (ಚಿತ್ರ:ಕಾಂತಾರ)

ಅತ್ಯುತ್ತಮ ಪೋಷಕ ನಟಿ
ಉಮಾಶ್ರೀ (ಚಿತ್ರ:ವೇದ)

ಅತ್ಯುತ್ತಮ ನಿರ್ದೇಶನ
ರಿಷಬ್ ಶೆಟ್ಟಿ (ಚಿತ್ರ: ಕಾಂತಾರ)

ಅತ್ಯುತ್ತಮ ಚೊಚ್ಚಲ ನಿರ್ದೇಶನ
ಕಿರಣ್‌ರಾಜ್ ಕೆ. (ಚಿತ್ರ: 777 ಚಾರ್ಲಿ)




ಅತ್ಯುತ್ತಮ ಚಿತ್ರಕಥೆ
ಕಿರಣ್‌ರಾಜ್ ಕೆ. (777 ಚಾರ್ಲಿ)

ಅತ್ಯುತ್ತಮ ಹಿನ್ನೆಲೆ ಗಾಯಕ
ಸಿದ್ ಶ್ರೀರಾಮ್ (ಹಾಡು: ಜಗವೇ ನೀನು ಗೆಳತಿಯೇ, ಚಿತ್ರ: ಲವ್ 360)

ಅತ್ಯುತ್ತಮ ಹಿನ್ನೆಲೆ ಗಾಯಕಿ
ಮಂಗ್ಲಿ (ಹಾಡು: ಗಿಲ್ಲಕ್ಕೊ ಶಿವ, ಚಿತ್ರ: ವೇದ)

ಅತ್ಯುತ್ತಮ ನೃತ್ಯ ನಿರ್ದೇಶನ
ರಾಜ್ ಬಿ.ಶೆಟ್ಟಿ (ಹಾಡು: ವರಾಹರೂಪಂ, ಚಿತ್ರ: ಕಾಂತಾರ)

ಅತ್ಯುತ್ತಮ ಸಂಕಲನ
ಪ್ರತೀಕ್ ಶೆಟ್ಟಿ ಮತ್ತು ಪ್ರಕಾಶ್ ಕೆ.ಎಂ. (ಚಿತ್ರ: ಕಾಂತಾರ)
ಉಜ್ವಲ್ ಕುಲಕರ್ಣಿ (ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)



ಅತ್ಯುತ್ತಮ ಸಂಗೀತ ನಿರ್ದೇಶನ
ಬಿ.ಅಜನೀಶ್ ಲೋಕನಾಥ್ (ಚಿತ್ರ: ಕಾಂತಾರ)

ಅತ್ಯುತ್ತಮ ಛಾಯಾಚಿತ್ರಗ್ರಹಣ
ಭುವನ್ ಗೌಡ (ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)

ಅತ್ಯುತ್ತಮ ಗೀತ ಸಾಹಿತ್ಯ
ಕೆ.ಕಲ್ಯಾಣ್ (ಹಾಡು: ಮೇಘರಾಜನ ರಾಗ, ಚಿತ್ರ: ಮಾನ್ಸೂನ್ ರಾಗ)
ವಿ.ನಾಗೇಂದ್ರ ಪ್ರಸಾದ್ (ಹಾಡು: ಗಿಲ್ಲಕ್ಕೊ ಶಿವ, ಚಿತ್ರ: ವೇದ)

ಜನಮೆಚ್ಚಿದ ವಿಭಾಗದ ಪ್ರಶಸ್ತಿಗಳ ವಿಜೇತರು

ಜನಮೆಚ್ಚಿದ ಸಿನಿಮಾ
ಕಾಂತಾರ

ಜನಮೆಚ್ಚಿದ ನಟ
ಯಶ್ (ಚಿತ್ರ: ಕೆ.ಜಿ.ಎಫ್ ಚಾಪ್ಟರ್–2)

ಜನಮೆಚ್ಚಿದ ನಟಿ
ಅದಿತಿ ಪ್ರಭುದೇವ (ಚಿತ್ರ: Once upon a time in Jamaligudda)

ಜನಮೆಚ್ಚಿದ ಸಂಗೀತ
ಬಿ.ಅಜನೀಶ್ ಲೋಕನಾಥ್ (ಚಿತ್ರ: ಕಾಂತಾರ)

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು
- ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ: ತಲೆದಂಡ
- ಅತ್ಯುತ್ತಮ ನಿರ್ಮಾಣ ವಿನ್ಯಾಸ: ಕಾಂತಾರ
- ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್: 777 ಚಾರ್ಲಿ
- ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ: ಕಾಂತಾರ

ಬಾಡಿಗೆದಾರರಿಗೂ ಯೋಜನೆ ಲಾಭ ಸಿಗಲಿದೆ: ಸಚಿವ ಜಾರ್ಜ್

ಶೇ 96 ಗ್ರಾಹಕರಿಗೆ 'ಗೃಹಜ್ಯೋತಿ' ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2.14 ಕೋಟಿ ವಿದ್ಯುತ್ ಗ್ರಾಹಕರಿದ್ದು, ಈ ಪೈಕಿ ಶೇ 94ರಿಂದ 96ರಷ್ಟು ಗ್ರಾಹಕರಿಗೆ ಗೃಹಜ್ಯೋತಿ ಯೋಜನೆ ಲಾಭ ಸಿಗಲಿದೆ. ಯೋಜನೆಗೆ ವಾರ್ಷಿಕ ₹13 ಸಾವಿರ ಕೋಟಿ ಬೇಕಾಗುತ್ತದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಶನಿವಾರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇಲ್ಲಿ ಬಾಡಿಗೆದಾರರು, ಮಾಲೀಕರು ಎನ್ನುವ ವಿಚಾರ ಬರುವುದಿಲ್ಲ. ಆರ್.ಆರ್. ನಂಬರ್ ಮೇಲೆ ಬಿಲ್ ತಯಾರಿ ಸುವುದರಿಂದ ಬಾಡಿಗೆದಾರರಿಗೂ ಯೋಜನೆಯ ಪ್ರಯೋಜನ ಸಿಗಲಿದೆ. ಇಲಾಖೆಗೆ ಸರ್ಕಾರ ಅನುದಾನ ನೀಡಲಿದೆ' ಎಂದರು.

'12 ತಿಂಗಳು ಎಷ್ಟು ಯೂನಿಟ್ ವಿದ್ಯುತ್ ಬಳಸಿದ್ದಾರೆಂದು ಲೆಕ್ಕ ತೆಗೆದುಕೊಂಡು, 200 ಯೂನಿಟ್‌ವರೆಗೆ ವಿನಾಯಿತಿ ಕೊಡಲು ತೀರ್ಮಾನಿಸಿದ್ದೇವೆ. 12 ತಿಂಗಳ ಸರಾಸರಿ ತೆಗೆದುಕೊಳ್ಳಲು ಕೂಡಾ ಕಾರಣವಿದೆ. ಬೇಸಿಗೆ ಕಾಲ, ಚಳಿಗಾಲದಲ್ಲಿ ಬಳಕೆಯಾಗುವ ವಿದ್ಯುತ್ ಪ್ರಮಾಣದಲ್ಲಿ ವ್ಯತ್ಯಾಸ ಇರುತ್ತದೆ. ಹೀಗಾಗಿ, ಗ್ರಾಹಕರು ಬಳಸುವ ವಿದ್ಯುತ್ ಮೇಲೆ ಶೇ 10ರಷ್ಟು ಹೆಚ್ಚು ಬಳಕೆಗೆ ಅವಕಾಶ ನೀಡಿದ್ದೇವೆ. 200 ಯೂನಿಟ್ ಬಳಿಕ ಎಷ್ಟು ಹೆಚ್ಚು ಬಳಕೆ ಮಾಡುತ್ತಾರೋ ಅದಕ್ಕೆ ಬಿಲ್ ಕಟ್ಟಬೇಕಾಗುತ್ತದೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, 'ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿದವರು ಯಾರು ಎಂಬುದು ಜನರಿಗೆ ಗೊತ್ತಿದೆ. ಅದೇ ಕಾರಣಕ್ಕೆ ಅವರು ಸರ್ಕಾರವನ್ನು ಬದಲಾವಣೆ ಮಾಡಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರಿಗೆ ಅನುಕೂಲ ಆಗಲಿದೆ' ಎಂದರು.

ಸೋಮವಾರ ಪ್ರಸ್ತಾವ ಸಲ್ಲಿಕೆ: ಆಹಾರ ಸಚಿವ ಕೆ.ಎಚ್.ಮುನಿಯಪ್ಪ, 'ಜುಲೈ 1ರಿಂದ 10 ಕೆ.ಜಿ ಅಕ್ಕಿ ಕೊಡುತ್ತೇವೆ. ಅಂತ್ಯೋದಯ ಕಾರ್ಡ್ ಹೊಂದಿದವರಿಗೂ ಹೆಚ್ಚುವರಿ ತಲಾ 10 ಕೆ.ಜಿ ಕೊಡುತ್ತೇವೆ. ಈ ಕುರಿತಂತೆ ಮುಖ್ಯಮಂತ್ರಿಗೆ ಸೋಮವಾರ ವಿವರವಾದ ಪ್ರಸ್ತಾವ ಸಲ್ಲಿಸುತ್ತೇವೆ' ಎಂದು ತಿಳಿಸಿದರು.

'ಯೋಜನೆ ತ್ಯಜಿಸಲೂ ಅವಕಾಶ'

'ಬಾಡಿಗೆ ಮನೆಯಲ್ಲಿ ಇರುವವರಿಗೂ ಗೃಹಜ್ಯೋತಿ ಯೋಜನೆಯ ಫಲ ಸಿಗಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು. '200 ಯೂನಿಟ್‌ವರೆಗೂ ಉಚಿತ ಎಂದು ಹೇಳಿದ್ದೆವು. ಅದರಂತೆ ನೀಡಿದ್ದೇವೆ. ಇಷ್ಟು ದಿನ ನೂರು ಯೂನಿಟ್ ಬಳಸುತ್ತಿದ್ದವರು. ಏಕಾಏಕಿ 200 ಯುನಿಟ್ ಬಳಸಿದರೆ ಅದಕ್ಕೆ ಅವಕಾಶವಿಲ್ಲ' ಎಂದು ತಿಳಿದರು.

'ಯೋಜನೆಯ ಫಲ ತ್ಯಜಿಸಲು ಅವಕಾಶ ಕಲ್ಪಿಸುವಿರಾ?' ಎಂಬ ಪ್ರಶ್ನೆಗೆ, 'ಯೋಜನೆಯ ಲಾಭ ಬೇಡವಾದವರು ತ್ಯಜಿಸಬಹುದು. ಅನೇಕ ಅಧಿಕಾರಿಗಳು, ಮಾಧ್ಯಮ ಮುಖ್ಯಸ್ಥರು, ಸರ್ಕಾರಿ ನೌಕರರು ಈ ಯೋಜನೆಯ ಫಲ ಬೇಡವೆಂದು ಪತ್ರ ಬರೆದರೆ, ಕೆಲವರು ಖುದ್ದಾಗಿ ಹೇಳಿದ್ದಾರೆ' ಎಂದರು. 'ಆ ಕಾರಣಕ್ಕೆ ಯೋಜನೆಗಳ ಫಲ ಪಡೆಯಲು ಅರ್ಜಿ ಕರೆಯಲಾಗಿದೆ. ಕೇಂದ್ರ ಅಡುಗೆ ಅನಿಲ ಸಬ್ಸಿಡಿ ತ್ಯಜಿಸಲು ಕರೆಕೊಟ್ಟಾಗ ಅನೇಕರು ಅದಕ್ಕೆ ಸ್ಪಂದಿಸಿದ್ದರು. ಹಾಗೇ ಇಲ್ಲಿಯೂ ಯೋಜನೆ ಲಾಭ ತ್ಯಜಿಸಬಹುದು' ಎಂದರು.

ಸಿನಿ ಸಮ್ಮಾನದಲ್ಲಿ ಸಂಭ್ರಮದ ಹೊಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗಮಗಿಸುವ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದ ವೇದಿಕೆ ಮೇಲೆ ನಿಂತಿದ್ದ ಗಣ್ಯರು 'ಪ್ರಜಾವಾಣಿ'ಯ ಚೊಚ್ಚಲ ಸಿನಿ ಸಮ್ಮಾನ್ ಪ್ರಶಸ್ತಿಗೆ ಆಯ್ಕೆಯಾದವರ ಹೆಸರು ಘೋಷಿಸುತ್ತಿದ್ದಂತೆ ಸಿನಿ ಪ್ರೇಮಿಗಳ ಚಪ್ಪಾಳೆ ಮುಗಿಲುಮುಟ್ಟಿತ್ತು.

ಶನಿವಾರ ಸಂಜೆ 6.50ಕ್ಕೆ ಸಮಾರಂಭ ಆರಂಭವಾಯಿತು. ನಟ ರಮೇಶ್ ಅರವಿಂದ್ ಅವರು ಪ್ರಶಸ್ತಿ ಪ್ರದಾನ ಮಾಡುವ ಗಣ್ಯರನ್ನು ವೇದಿಕೆಗೆ ಆಹ್ವಾನಿಸಿದರು. ಸಹ ನಿರೂಪಕಿ ಅನುಶ್ರೀ ಸಾಥ್ ನೀಡಿದರು.

ಸಾಹಿತಿ ಚಂದ್ರಶೇಖರ ಕಂಬಾರ, ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಟಿ.ಎನ್. ಸೀತಾರಾಮ್, ನಟಿ ಪೂಜಾ ಗಾಂಧಿ, ಗಾಯಕಿ ಎಂ.ಡಿ. ಪಲ್ಲವಿ, ಹಿರಿಯ ನಟಿ ಬಿ. ಜಯಶ್ರೀ ಮೊದಲಾದರು ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಹಲವು ನಟ, ನಟಿಯರು, ತಂತ್ರಜ್ಞರು, ಕಲಾವಿದರು ಸೇರಿದಂತೆ ಕನ್ನಡ ಚಿತ್ರರಂಗದ ನೂರಾರು ನಟ–ನಟಿಯರು ಬಣ್ಣಬಣ್ಣದ ಉಡುಪುಗಳನ್ನು ಧರಿಸಿ ಕಂಗೊಳಿಸಿದರು.

ಭಾವನಾ ರಾವ್ ಅವರ ತಂಡದ ಗೋವಿಂದ ಹಾಡಿನ ಮೂಲಕ ಸಿನಿ ಸಂಭ್ರಮಕ್ಕೆ ಚಾಲನೆ ಸಿಕ್ಕಿತು. ಪ್ರಶಸ್ತಿ ಪ್ರದಾನ ಮಾಡಲು ಬಂದ ಗಣ್ಯರು, ಪ್ರಶಸ್ತಿ ಪುರಸ್ಕೃತರು ತಮ್ಮ ಅನಿಸಿಕೆ, ಸಾಧನೆಯ ಹಾದಿ ನೆನೆದರು. ಸಾಧನೆಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸಿದರು.

ಮಧ್ಯೆ ತಮ್ಮ ಸಿನಿಮಾಗಳ ಹಾಡು, ಡಯಲಾಗ್ ಮೆಲುಕು ಹಾಕಿದರು. ಕೆ. ಕಲ್ಯಾಣ್ ಅವರಿಗೆ ಅತ್ಯುತ್ತಮ ಗೀತಾ ರಚನೆಕಾರ ಪ್ರಶಸ್ತಿ ಪ್ರದಾನ ಮಾಡಿದ ಗಾಯಕಿ ಎಂ.ಡಿ. ಪಲ್ಲವಿ ಅವರು 'ಹೇಳಯ್ಯ ಕೋಟಿ ಲಿಂಗವೇ...' ಹಾಡಿದರು. ಕಲ್ಯಾಣ್ ಅವರು ನಮ್ಮೂರ ಮಂದಾರ ಹೂವೆ ಚಿತ್ರದ ತುಂತುರು ಹಾಡಿನ ರಾಗ ಮೆಲುಕು ಹಾಕಿದರು. ನಟ ಅನಂತ್ ನಾಗ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪ್ರಜಾವಾಣಿ' ಪತ್ರಿಕೆಯ ವಿಶ್ವಾಸಾರ್ಹತೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಪ್ರಜಾವಾಣಿ@75'ಕ್ಕೆ ಕಾಲಿಟ್ಟಿದೆ. ರಾಜ್ಯದ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. ಟಿವಿ ಚಾನಲ್‌ಗಳಲ್ಲಿ ನೈಜ ಸುದ್ದಿ ಅಪರೂಪ. ಅದಕ್ಕಾಗಿ ಪತ್ರಿಕೆಯ ಮೇಲೆ ಜನರಿಗೆ ನಂಬಿಕೆ ಹೆಚ್ಚು' ಎಂದರು.

ತಾವು ಹಾಗೂ ಅನಂತ್ ನಾಗ್ ಅವರು ಜೆ.ಎಚ್. ಪಟೇಲ್ ಸಂಪುಟದಲ್ಲಿ ಸಚಿವರಾದ ಸಮಯವನ್ನು ಮುಖ್ಯಮಂತ್ರಿ ಮೆಲುಕು ಹಾಕಿದರು. 'ಈಗ ಸಿನಿಮಾ ವೀಕ್ಷಿಸಲು ಸಮಯ ಸಿಗುತ್ತಿಲ್ಲ. ಸಮಯ ಸಿಕ್ಕಾಗ ಟಿವಿಯಲ್ಲಿ ನೋಡುವೆ. ಅನಂತ್ ಅವರು ಆಡಂಬರವಿಲ್ಲದ ಸಹಜ ನಟ. ನನಗಿಂತ ಒಂದು ವರ್ಷವಷ್ಟೇ ಚಿಕ್ಕವರು' ಎಂದರು.

ಹೊಟ್ಟೆಹುಣ್ಣಾಗುವಂತೆ ನಗುತ್ತಿದ್ದೆ: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಚಾರ್ಲಿ ಚಿತ್ರನೋಡಿ ದುಃಖ ತಡೆಯಲಾಗಿರಲಿಲ್ಲ. ಹಾಗೆ ನರಸಿಂಹರಾಜು ಅವರ ಚಿತ್ರನೋಡಿದಾಗ ಹೊಟ್ಟೆಹುಣ್ಣಾಗುವಂತೆ ನಗುತ್ತಿದ್ದೆ' ಎಂದು ಹೇಳಿದರು. 'ಕಾಲವನ್ನು ಮೀರಿದ ಸತ್ಯ ಹೇಳುವ ಚಿತ್ರಕಥೆಗಳಿಂದ ಹಾಗೂ ಸಾಮಾನ್ಯರ ಪ್ರತಿಬಿಂಬವಾದ ಕೆಲ ಚಿತ್ರಗಳು ನೆನಪಿನಲ್ಲಿ ಉಳಿಯುತ್ತವೆ' ಎಂದು ಹೇಳಿದರು.


'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕರಾದ ರವೀಂದ್ರ ಭಟ್ಟ ಮಾತನಾಡಿ, 'ಪುನೀತ್ ಅಮೃತ ಸಂಜಾತ. ಯಾರು ಹೋದಮೇಲೂ ಜನರ ಮನಸ್ಸಲ್ಲಿ ಬದುಕುತ್ತಾರೋ ಅವರೇ ಚಿರಂಜೀವಿಗಳು. ಹಾಗಾಗಿ, ಅವರು ಅಮೃತ ಸಂಜಾತ' ಎಂದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್. ತಿಲಕ್ ಕುಮಾರ್, ನಿರ್ದೇಶಕರಾದ ಕೆ.ಎನ್. ಶಾಂತಕುಮಾರ್, ಸಿಇಒ ಸೀತಾರಾಮನ್ ಶಂಕರ್, ಮಲಬಾರ್ ಗೋಲ್ಡ್ ಪ್ರಾದೇಶಿಕ ಅಧಿಕಾರಿ ಸರ್ಫುದ್ದೀನ್ ಇದ್ದರು.

ಪುನೀತ್‌ಗೆ ನುಡಿನಮನ

ಕಾರ್ಯಕ್ರಮದಲ್ಲಿ ಪುನೀತ್ ಅವರಿಗೆ ದೃಶ್ಯ ಹಾಗೂ ನುಡಿನಮನ ಸಲ್ಲಿಸಲಾಯಿತು. ಆಟೊ ಚಾಲಕರೊಬ್ಬರು ಪುನೀತ್ ಹೆಸರಲ್ಲಿ ವೃದ್ಧಾಶ್ರಮವನ್ನು ಕಟ್ಟಿ 17 ಜನರಿಗೆ ಆಶ್ರಯ ನೀಡಿದ್ದಾರೆ. ಕೂಲಿಕಾರರ ಕುಟುಂಬವೊಂದು ನಿತ್ಯ ಪುನೀತ್ ಪ್ರತಿಮೆ ಶುಚಿಗೊಳಿಸುವ ಕಾಯಕದಲ್ಲಿ ತೊಡಗಿದ್ದಾರೆ. ಈ ದೃಶ್ಯಗಳು ಪುನೀತ್ ಗಳಿಸಿದ ಅಭಿಮಾನಿಗಳ ಅಭಿಮಾನದ ಸಂಕೇತಕ್ಕೆ ಸಾಕ್ಷಿಯಾದವು. ಚನ್ನಗಿರಿಯ ಕುಮಾರ್ ಅವರು ತಮ್ಮ ಮಗಳ ಕಿಡ್ನಿ ಚಿಕಿತ್ಸೆಗೆ ಪುನೀತ್ ನೆರವಾಗಿದ್ದನ್ನು ನೆನೆದು ಕಣ್ಣೀರಾದರು.

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 4-6-1998

● ಮಹಾರಾಷ್ಟ್ರ ಪೊಲೀಸರು ತನಿಖೆಗೆ ಮತ್ತೆ ರಾಜ್ಯಕ್ಕೆ

ಕಲ್ಬುರ್ಗಿ, ಜೂನ್ 3– ರಾಜ್ಯದಲ್ಲಿ ನಡೆದಿರುವ 12 ಕೊಲೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಚಿವ ಮಾಲೀಕಯ್ಯ ಗುತ್ತೇದಾರ್ ಹಾಗೂ ಶಾಸಕ ಸುಭಾಷ್ ಗುತ್ತೇದಾರ್ ಅವರ ಪಾತ್ರದ ಬಗ್ಗೆ ಬಲವಾದ ಸಾಕ್ಷ್ಯ ಸಂಗ್ರಹಿಸಲು ಮಹಾರಾಷ್ಟ್ರ ಪೊಲೀಸರು ಕರ್ನಾಟಕಕ್ಕೆ ಮತ್ತೆ ಭೇಟಿ ನೀಡಿದ್ದಾರೆ.

ನಿನ್ನೆ ಅಫ್ಜಲಪುರಕ್ಕೆ ಆಗಮಿಸಿದ ಮಹಾರಾಷ್ಟ್ರ ಪೊಲೀಸರ ತಂಡ ಇಂದೂ ಸಾಕ್ಷ್ಯ ಸಂಗ್ರಹಣೆ ಮುಂದುವರಿಸಿತು ಎಂದು ಉನ್ನತ ಪೊಲೀಸ್ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ
ಸೋಮವಾರ, 4-6-1973

ಗಡಿಯಲ್ಲಿ ಪಾಕ್ ಸೇನೆ ಚಟುವಟಿಕೆ: ಪರಿಸ್ಥಿತಿ ಎದುರಿಸಲು ಭಾರತ ಸಿದ್ಧ

ಚಂಡೀಗಢ, ಜೂನ್ 3– ಪಶ್ಚಿಮ ಗಡಿಯಲ್ಲಿ ಪಾಕಿಸ್ತಾನ ಸಶಸ್ತ್ರ ಚಟುವಟಿಕೆ ನಡೆಸುತ್ತಿರುವುದು ದಿಟವೆಂದು ರಕ್ಷಣಾ ಮಂತ್ರಿ ಜಗಜೀವನ್ ರಾಂ ಅವರು ಇಂದು ಇಲ್ಲಿ ತಿಳಿಸಿದರು.

'ಗಡಿಯಲ್ಲಿ ಪಾಕಿಸ್ತಾನಿ ಪಡೆಗಳು ಕ್ರಿಯಾಶೀಲವಾಗಿವೆಯೆಂದು ವರದಿಯಾಗಿದೆ. ಭಯಕ್ಕೆ ಕಾರಣವಿಲ್ಲ. ಸರ್ಕಾರಕ್ಕೆ ಪರಿಸ್ಥಿತಿಯ ಅರಿವಿದ್ದು ಅದನ್ನು ನಿಕಟವಾಗಿ ಗಮನಿಸುತ್ತಿದೆ' ಎಂದರು.

ಚೀನಾ ಪಾಕಿಸ್ತಾನಕ್ಕೆ ಟಿ.ಯು–16 ಬಾಂಬರ್ ವಿಮಾನಗಳನ್ನು ಸರಬರಾಜು ಮಾಡಿರುವುದರಿಂದ ಭಾರತದ ರಕ್ಷಣೆಗೆ ಅಪಾಯ ಉಂಟಾಗಿದೆಯೆ? ಇದರಿಂದ ಉಪಖಂಡದಲ್ಲಿ ಬಿಕ್ಕಟ್ಟು ಉಂಟಾಗಿದೆಯೆ ಎಂಬ ಪ್ರಶ್ನೆಗಳಿಗೆ ಜಗಜೀವನ ರಾಂ ಅವರು, 'ಎಂಥ ಪರಿಸ್ಥಿತಿ ಸಂಭವಿಸಿದರೂ ಅದನ್ನು ಎದುರಿಸಲು ಭಾರತ ಸಿದ್ಧವಾಗಿದೆ' ಎಂದು ಉತ್ತರಿಸಿದರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ
ಭಾನುವಾರ ಜೂನ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪೂರ್ಣಿಮಾ ಗಂ. 09-12 ನಕ್ಷತ್ರ: ಜ್ಯೇಷ್ಠ ಗಂ. 27-23 ಯೋಗ: ಸಿದ್ಧ ಗಂ. 11-58, ಕರಣ: ಬವ ಗಂ. 09-12, ವೃಷಭ ಮಾಸದ 20 ನೇ ದಿನ, ಮಳೆನಕ್ಷತ್ರ: ರೋಹಿಣಿ 3.
ರಾಹುಕಾಲ : ಸಾಯಂಕಾಲ 04-30 – 06-00,
ಸೂರ್ಯೋದಯ: 06-06 ಸೂರ್ಯಾಸ್ತ: 06-51, ಮುಸ್ಲಿಂ ದಿನಾಂಕ: 15 ಜುಲ್ಕಾಯದ್,
ದಿನ ವಿಶೇಷ : ದೇವ ಸ್ನಾನ ಪೂರ್ಣಿಮಾ, ಟ್ರಿನಿಟಿ ಭಾನುವಾರ (ಕ್ರಿಶ್ಚಿಯನ್),
ಅದೃಷ್ಟ ಸಂಖ್ಯೆ : 4, 7

ಮೇಷ: ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಹುಟ್ಟುವಂತೆ ಮನೆಯ ಪರಿಸರ ನಿರ್ಮಿಸಿ. ನಿಮ್ಮ ಕಲ್ಪನಾಶಕ್ತಿ ಚುರುಕಾಗಿ ಕೆಲಸ ಮಾಡಲಿದೆ. ನಿಮ್ಮ ನೈಪುಣ್ಯದಿಂದಾಗಿ ಹೆಚ್ಚಿನ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳುವ ಯೋಗವಿದೆ.

ವೃಷಭ: ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ ಇದೆ. ಆದರೆ ನಿಮ್ಮ ಮೊಂಡುತನವನ್ನು ಬಿಟ್ಟು ನಿಮ್ಮ ಪೋಷಕರ ಮಾತುಗಳನ್ನು ಕೇಳಲೇಬೇಕಾಗುತ್ತದೆ. ಕಾರ್ಯಕ್ಷೇತ್ರದಲ್ಲಿ ಒಳ್ಳೆಯ ಅವಕಾಶಗಳು ದೊರೆಯುತ್ತದೆ.

ಮಿಥುನ: ನಿಮ್ಮ ಮುಂದಿನ ಗುರಿ ಸಾಧನೆಗೆ ಮುಖ್ಯ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನೀವು ವ್ಯಾವಹಾರಿಕವಾಗಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ. ಸರ್ಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ಕರ್ಕಾಟಕ: ಕೊಡು ಕೊಳ್ಳುವ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ. ನಿರಂತರತೆಯ ಧನಾಗಮನದಲ್ಲಿ ವ್ಯತ್ಯಯ ಅಥವಾ ವಿಳಂಬ ತೋರಿಬರಲಿದೆ. ರಾಸಾಯನಿಕ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭ.

ಸಿಂಹ: ಎಲ್ಲಾ ಕಾರ್ಯಗಳನ್ನು ಸಫಲತೆಗೆ ಮಾರ್ಪಡಿಸುವತ್ತ ಪ್ರಯತ್ನಿಸಬೇಕು. ಅದರಿಂದಾಗಿ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರಲಿದೆ. ಹಿರಿಯರ ಆರೋಗ್ಯದ ಕಾರಣ ನಿಮ್ಮ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಕನ್ಯಾ: ಆರ್ಥಿಕವಾಗಿ ಹೆಚ್ಚಾಗಿ ಚೇತರಿಕೆ ಕಂಡುಬರದಿದ್ದರೂ ಜೀವನಕ್ಕೆ ಕೊರತೆ ಇರಲಾರದು. ಸಂಘ ಸಂಸ್ಥೆಗಳ ಹುದ್ದೆಯನ್ನು ಅಲಂಕರಿಸುವ ಅವಕಾಶ ಮತ್ತು ಮನಸ್ಸು ಇರುವುದು. ಆರೋಗ್ಯದಲ್ಲಿ ಉತ್ತಮ ಸುಧಾರಣೆ ತೋರುವುದು.

ತುಲಾ: ದೂರ ಸಂಚಾರ ಮಾಡಬೇಕಾಗುವುದು. ಕೆಲಸದಲ್ಲಿ ಆತುರದ ಸ್ವಭಾವ ಬೇಡ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ. ವಾತಾವರಣದಲ್ಲಿನ ಬದಲಾವಣೆಯ ಲಕ್ಷಣಗಳು ಕಣ್ಣಿಗೆ ಬೀಳಲಿವೆ.

ವೃಶ್ಚಿಕ: ನ್ಯಾಯವಾದಿಗಳಿಗೆ ಉತ್ತಮ ದಿನ. ಜಯ ಸಾಧಿಸುವ ಬಗ್ಗೆ ಉತ್ತಮ ಅಂಶ ಸಿಗಲಿದೆ. ಊರಿನ ರಾಜಕಾರಣದ ವಿಷಯದಲ್ಲಿ ಹೆಚ್ಚು ಸಮಯ ಕಳೆಯುವಂತಾಗುವುದು. ಸಂಪಾದನೆ ಕಡಿಮೆಯಿದ್ದರೂ ಆರ್ಥಿಕವಾಗಿ ಚಿಂತೆ ಇರದು.

ಧನು: ಧನಾಗಮನ ಹೆಚ್ಚಿದ್ದರೂ ಬಹುಪಾಲು ಅನಾವಶ್ಯಕವಾಗಿ ವೆಚ್ಚವಾಗಲಿದೆ. ಮನೆ ಕಟ್ಟುವ ಬಗ್ಗೆ ಹಿರಿಯರ, ಮನೆಯವರ ಅಭಿಪ್ರಾಯ ಸಂಗ್ರಹಿಸಿ. ಮೇಧಾವಿಗಳೊಂದಿಗಿನ ಸಂಪರ್ಕದಿಂದಾಗಿ ನಿಮ್ಮ ಅರಿವು ಹೆಚ್ಚಾಗಲಿದೆ.

ಮಕರ: ಉದ್ಯೋಗ ಬದಲಾವಣೆ ಮಾಡುವ ಯೋಚನೆಯು ಸರಿಯಲ್ಲ, ಇದೇ ಉದ್ಯೋಗದಲ್ಲಿ ವರಮಾನ ಹೆಚ್ಚಿಸಿಕೊಳ್ಳುವ ಹೊಸ ದಾರಿ ಹುಡುಕಿ. ಸಹನಾಶೀಲರಾಗಿ ವರ್ತಿಸಿದಲ್ಲಿ ನಿಮ್ಮ ಪ್ರಯತ್ನಕ್ಕೆ ಯಶಸ್ಸು ಸಿಗುತ್ತದೆ.


ಕುಂಭ: ನಿಮ್ಮ ಪ್ರಯತ್ನ ಬಲ, ಮನೆಯಲ್ಲಿ ಪಿತೃ ಕಾರ್ಯ ನೆಡೆಸಿದರೆ ಕೌಟುಂಬಿಕ ವಿವಾದಗಳು ರಾಜಿ ಮನೋಭಾವಗಳಿಂದ ಸಮಾಪ್ತಿ ಹೊಂದಬಹುದು. ಮನೆ ದೇವರ ದರ್ಶನ, ಸೇವೆಗಳಿಂದ ಮಂಗಳ ಪ್ರದವಾಗಲಿದೆ.

ಮೀನ: ನಿಮ್ಮ ಕೆಲಸದಲ್ಲಿ ತೊಡಕನ್ನುಂಟುಮಾಡುವ ಶತ್ರುಗಳ ಯತ್ನ ವಿಫಲವಾಗುವುದು. ಹೂವು ಹಣ್ಣು ಮಾರಾಟಗಾರರಿಗೆ ಉತ್ತಮ ವ್ಯಾಪಾರ. ಇತರರಿಗೆ ಕಹಿಯಾಗುವ ಕೆಲವು ನಿರ್ಧಾರಗಳನ್ನು ನೀವು ತೆಗೆದುಕೊಳ್ಳುತ್ತೀರಿ.

ಪದಬಂಧ 5339
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ಲಾಯ ಬಂದಾಗ ಓಡಿಹೋಗುವಿಕೆ (4)
4.ಮಂದಿಯ ಶಕ್ತಿ (4)
6.ಕಡಿಯಲು ಬಂದ ಭಲ್ಲೂಕ (3)
7.ಜೋಪಾನ ಎಂದು ಹೀಗೆನ್ನಿ (3)
8.ಗಣಪತಿ ಚಿಕ್ಕದಾಗಿ ಬಂದಿದ್ದಾನೆ (3)
10.ಮಾನಿನಿಯ ಮೇಲೆ ಬಂದ ಸಂಶಯ (3)
12.ರೀತಿಯೊಡಗೂಡುವ ಪದ್ಧತಿ (3)
13.ಮಲಗುವಾಗ ಕಾಣಿಸಿದ ಸೇವಕ (3)
14.ಸರಸ ವಿರಸಗಳೆರಡೂ ಸಮನಾಗಿರುವಿಕೆ (4)
16.ಯುದ್ಧದ ನಗಾರಿ (4)

ಮೇಲಿಂದ ಕೆಳಕ್ಕೆ
1.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
2.ತಿರುಗಿ ನಿಂತಿರುವ ಮಂದಿ (2)
3.ಬಾಲಕನಿಗೆ ಬೆಳೆದ ಲಾಂಗೂಲ (2)
5.ತುಸುವೇ ಬೀರಿದ ಮಂದಹಾಸ (4)
6.ಕರದಿಂದ ಪ್ರಾರಂಭವಾದ ಉತ್ಸವ (3)
7.ಹಡಗು ಇಲ್ಲಿದೆ (3)
9.ಪರದೊಳಗಿರುವ ನಿವಾರಣೆ (4)
11.ಯಮ ಕೊನೆಗಿದ್ದಾಗ ಸೂತ ಕಂಡಿತಲ್ಲಾ (3)
13.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
14.ಎಳೆಯ ಗಿಡ (2)
15.ಸರಕ್ಕನೆ ಧರಿಸಿದ ಮಾಲೆ (2)



5338ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಚ್ಚೆ 2.ಕನ್ನಡಕ
4.ತಲೋದರಿ 6.ಗಡಿಯಾರ
8.ಮಕರಂದ 9.ಅವಸಾನ
11.ಕಡವರ 13.ಹಗರಣ
15.ವಾಸಸ್ಥಳ 16.ಅಂಕ

ಮೇಲಿಂದ ಕೆಳಕ್ಕೆ:
1.ಪರಾತ 2.ಕಮರಿ
3.ಡರುಗ 5.ಲೋಲಕ
7.ರದನ 8.ಮಸ್ತಕ
10.ಸಾವಿರ 12.ರಕ್ಕಸ
13.ಹವಳ 14.ಣಲ್ಯಾಕ

ಸುಡೊಕು 5725

9		5		8		4		
	8		7		5		1	9
7		1		6		2		
							3	2
3	6		5		7	8	9	
		8					4	7
		7		5		1		3
5			9		8		2	4
2		3					8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5724 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಪಠ್ಯಪುಸ್ತಕಗಳ ಪರಿಷ್ಕರಣೆ ಖಚಿತ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಪಠ್ಯಪುಸ್ತಕ ಪರಿಷ್ಕರಿಸುವುದು ಖಚಿತ. ಅದರಲ್ಲಿ ಯಾವುದೇ ಗೊಂದಲವಿಲ್ಲ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

‘ಪರಿಷ್ಕರಣೆಗೆ ಸ್ವಲ್ಪ ಸಮಯ ಬೇಕು. ಯಾವ ಭಾಗವನ್ನು ಪರಿಷ್ಕರಣೆಗೆ ಒಳಪಡಿಸಬೇಕು ಎಂಬುದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ನಾನು ಅಧಿಕಾರ ವಹಿಸಿಕೊಳ್ಳುವ ಹೊತ್ತಿಗೆ ಪಠ್ಯಪುಸ್ತಕ ಮುದ್ರಣ ಪೂರ್ಣಗೊಂಡು ಶಾಲೆಗಳಿಗೆ ಕಳುಹಿಸಲಾಗಿತ್ತು. ಮಕ್ಕಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಮುಂಜಾಗ್ರತೆ ವಹಿಸಿ ಪಠ್ಯ ಪರಿಷ್ಕರಿಸಬೇಕಿದೆ. ಈಗಾಗಲೇ ಪಠ್ಯಪುಸ್ತಕ ವಿತರಣೆಯಾಗಿದ್ದರೂ, ಪರಿಷ್ಕರಣೆಗೆ ಅವಕಾಶವಿದೆ. ಅದನ್ನು ಕಾನೂನುಬದ್ಧವಾಗಿ ಮಾಡಲಾಗುವುದು’ ಎಂದರು.

‘ಪರಿಷ್ಕರಣೆ ವಿಚಾರದಲ್ಲಿ ಸ್ವಾರ್ಥವಿಲ್ಲ. ಮಕ್ಕಳ ಹಿತ, ಭವಿಷ್ಯ ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ಕೆ ಕೈ ಹಾಕಿದ್ದೇವೆ’ ಎಂದು ಹೇಳಿದರು.

ವಿಜಯೇಂದ್ರ ಹೇಳಿಕೆಗೆ ಸಚಿವ ಎಂ.ಬಿ.ಪಾಟೀಲ ಪ್ರಶ್ನೆ

‘ಯಡಿಯೂರಪ್ಪ ಅಧಿಕಾರ ಬಿಡುವ ಗ್ಯಾರಂಟಿ ನಿಮಗಿತ್ತಾ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಬಿ.ಎಸ್.ಯಡಿಯೂರಪ್ಪ ಅಧಿಕಾರ ಹಸ್ತಾಂತರ ಮಾಡುವಾಗ ಕಣ್ಣೀರು ಹಾಕಿದರು. ಅವರು ಅಧಿಕಾರ ಬಿಟ್ಟು ಕೊಡುತ್ತಾರೆ ಎಂಬ ಗ್ಯಾರಂಟಿ ನಿಮಗಿತ್ತಾ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವ ಎಂ.ಬಿ.ಪಾಟೀಲ ಅವರು ಶಾಸಕ ಬಿ.ವೈ. ವಿಜಯೇಂದ್ರ ಅವರನ್ನು ಪ್ರಶ್ನಿಸಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರದ ಅವಧಿ ಪೂರ್ಣಗೊಳಿಸುವುದಿಲ್ಲ’ ಎಂದು ವಿಜಯೇಂದ್ರ ಈಚೆಗೆ ನಗರದಲ್ಲಿ ನೀಡಿದ್ದ ಹೇಳಿಕೆ ಕುರಿತು ಮಾತನಾಡಿದ ಅವರು, ‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಒಮ್ಮೆಯೂ ಪೂರ್ಣಾವಧಿ ಅಧಿಕಾರ ಪೂರ್ಣಗೊಳಿಸಲಿಲ್ಲವಲ್ಲ’ ಎಂದರು.

‘ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಧಿಕಾರ ಹಂಚಿಕೆ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ಈಗಾಗಲೇ ಸ್ಪಷ್ಟಪಡಿಸಿದೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ನನ್ನ ಹೆಂಡ್ತಿಗೂ ಡಕೋಟ.. ನಿನ್ನ ಹೆಂಡ್ತಿಗೂ..’

ಚಿತ್ರದುರ್ಗ: ‘ಹೇ ಹುಲಿಯಾ... ನಿನಗೂ ಫ್ರೀ... ನನಗೂ ಫ್ರೀ’ ಎಂದು ಚುನಾವಣೆ ಸಮಯದಲ್ಲಿ ಹೇಳಿದ್ದ ಸಿದ್ದರಾಮಯ್ಯ ಈಗ ಮುಖ್ಯಮಂತ್ರಿ ಆದ ಬಳಿಕ ‘ನನ್ನ ಹೆಂಡತಿಗೂ ಡಕೋಟ.. ನಿನ್ನ ಹೆಂಡತಿಗೂ ಡಕೋಟ ಬಸ್... ಎಂಬುದಾಗಿ ಹೇಳುತ್ತಿದ್ದಾರೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ವ್ಯಂಗ್ಯವಾಡಿದರು.

ಎಲ್ಲ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಎಂದು ಹೇಳಿದ್ದ ಸಿದ್ದರಾಮಯ್ಯ ಇದೀಗ ಷರತ್ತು ವಿಧಿಸಿದ್ದು, ‘ಡಕೋಟ ಬಸ್’ಗಳಲ್ಲಿ ಮಾತ್ರ ಅವಕಾಶ ನೀಡಿದ್ದಾರೆ. ಈ ಮೂಲಕ ಜನರನ್ನು ವಂಚಿಸಿದ್ದಾರೆ ಎಂದು ಅವರು ಆರೋಪಿಸಿದರು.

ನಾರಾಯಣಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಸಚಿವ ಎಂ.ಬಿ.ಪಾಟೀಲ, ‘ಸಾಮಾನ್ಯ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲಿ ನೀವು ಅಧಿಕಾರದಲ್ಲಿ ಇದ್ದಾಗಲೂ ಶೇ 94ರಷ್ಟು ಸಾಮಾನ್ಯ ಬಸ್‌ಗಳಿದ್ದವು. ಈಗ ಮಾತ್ರ ಅವು ನಿಮಗೆ ಡಕೋಟ ಥರ ಕಾಣುತ್ತಿವೆಯೇ?’ ಎಂದು ಪ್ರಶ್ನಿಸಿದರು.

‘15 ಸಾವಿರ ಕಾನ್‌ಸ್ಟೆಬಲ್ ನೇಮಕ’

ಪ್ರಜಾವಾಣಿ ವಾರ್ತೆ

ತುಮಕೂರು: ‘15 ಸಾವಿರ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಶೀಘ್ರವೇ ನೇಮಕ ಮಾಡಿಕೊಳ್ಳಲಾಗುವುದು’ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾನ್‌ಸ್ಟೆಬಲ್ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಸದ್ಯದಲ್ಲೇ ಆರಂಭವಾಗಲಿದೆ. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದರು.

‘ಸಬ್‌ಇನ್‌ಸ್ಪೆಕ್ಟರ್ ನೇಮಕಾತಿ ಹಗರಣದ ತನಿಖೆ ಇನ್ನೂ ಮುಂದುವರಿದಿದೆ. 53 ಮಂದಿ ತಪ್ಪಿತಸ್ಥರು ಎಂಬುದು ಕಂಡು ಬಂದಿದೆ. ಆದರೆ, ಮರು ಪರೀಕ್ಷೆ ನಡೆಸುವುದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಕಾನೂನು ತಜ್ಞರ ಸಲಹೆ ಪಡೆದು ಅರ್ಹರಿಗೆ ನ್ಯಾಯ ಒದಗಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಅಭಿವೃದ್ಧಿ ಕಾರ್ಯಗಳು ಕುಂಠಿತವಾಗದಂತೆ ಎಚ್ಚರಿಕೆಯಿಂದ ‘ಗ್ಯಾರಂಟಿ’ ಯೋಜನೆಗಳನ್ನು ಜಾರಿ ಮಾಡುತ್ತೇವೆ. ಇದನ್ನು ಐದು ವರ್ಷಗಳ ಕಾಲವೂ ಮುಂದುವರಿಸಲಾಗುವುದು. ಈ ಯೋಜನೆಗಳಿಗೆ ಬೇಕಾದ ಸಂಪನ್ಮೂಲ ಕ್ರೋಡೀಕರಣಕ್ಕೆ ಒತ್ತು ನೀಡಲಾಗಿದೆ. ಎಲ್ಲಾ ಯೋಜನೆಗಳ ಡಿಪಿಆರ್ ಸಿದ್ಧಪಡಿಸುವ ಸಮಯದಲ್ಲಿ ಎಚ್ಚರ ವಹಿಸಬೇಕು. ಅಪವ್ಯಯ ಆಗದಂತೆ ನೋಡಿಕೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

‘ಬೆಂಗಳೂರಿನ ಹಾಲು ಒಕ್ಕೂಟದವರು ತಮ್ಮ ಸ್ವಂತ ನಿರ್ಧಾರದಿಂದ ಲೀಟರ್ ಹಾಲಿನ ಬೆಲೆಯನ್ನು ₹1.50 ಕಡಿಮೆ ಮಾಡಿದ್ದಾರೆ. ಆದರೆ ಹಾಲಿನ ಪ್ರೋತ್ಸಾಹ ಧನವನ್ನು ಲೀಟರ್‌ಗೆ ₹ 7ಕ್ಕೆ ಹೆಚ್ಚಳ ಮಾಡುವ ಉದ್ದೇಶವಿದೆ’ ಎಂದರು.



ಜುಲೈನಲ್ಲಿ ಮುಖ್ಯಮಂತ್ರಿ ಬಜೆಟ್ ಮಂಡಿಸಲಿದ್ದಾರೆ. ಸರ್ಕಾರಕ್ಕೆ ಹೊರೆ ಎನಿಸಿದ ನಿಗಮ, ಮಂಡಳಿ, ಕಾರ್ಯಕ್ರಮಗಳನ್ನು ರದ್ದುಪಡಿಸಲು ಪರಿಶೀಲನೆ ನಡೆದಿದೆ

ಡಾ.ಜಿ.ಪರಮೇಶ್ವರ, ಗೃಹ ಸಚಿವ

ಅಬಕಾರಿಗೆ ಹೊಸ ನೀತಿ: ತಿಮ್ಮಾಪುರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಅಬಕಾರಿ ಇಲಾಖೆಯಲ್ಲಿ ಕೆಲ ಬದಲಾವಣೆ ಮಾಡುವ ಉದ್ದೇಶವಿದ್ದು, ಮುಖ್ಯಮಂತ್ರಿ ಜೊತೆ ಚರ್ಚಿಸಿ ಹೊಸ ನೀತಿ ಜಾರಿ ಮಾಡಲಾಗುವುದು’ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

‘ಈ ಹಿಂದೆ ಇದೇ ಖಾತೆ ನಿರ್ವಹಿಸಿರುವೆ. ಆ ಅನುಭವದ ಆಧಾರದ ಮೇಲೆ ಬದಲಾವಣೆ ತರಲು ಉದ್ದೇಶಿಸಿರುವೆ’ ಎಂದು ಅವರು ಶನಿವಾರ ತಿಳಿಸಿದರು.

‘ಬಿಜೆಪಿಯಲ್ಲಿ ಸಮರ್ಥ ನಾಯಕತ್ವವಿಲ್ಲ. ಕಾಂಗ್ರೆಸ್ ಗೆಲುವಿನ ಯಾತ್ರೆ ಮುಂದುವರಿಯಲಿದೆ’ ಎಂದರು.

ಒಡಿಶಾ ರೈಲು ದುರಂತದ ಕಾರಣ ಬೆಂಬಲಿಗರಿಂದ ಹಾರ, ಸನ್ಮಾನ ನಿರಾಕರಿಸಿದರು.

‘ಕೇಂದ್ರ ಅಕ್ಕಿ ಬದಲು ಹಣ ನೀಡಲಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡುತ್ತಿರುವ 5 ಕೆ.ಜಿ ಅಕ್ಕಿಯಲ್ಲೇ ರಾಜ್ಯ ಕಾಂಗ್ರೆಸ್ ಸರ್ಕಾರ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ’ ಎಂದು ಶಾಸಕ ಅರವಿಂದ ಬೆಲ್ಲದ ಲೇವಡಿ ಮಾಡಿದರು.

‘ಕೇಂದ್ರ ಸರ್ಕಾರ ರಾಜ್ಯಕ್ಕೆ 5 ಕೆ.ಜಿ ಅಕ್ಕಿ ನೀಡುವ ಬದಲು ಅರ್ಹ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡಬೇಕು. ಆಗ ಜನರಿಗೆ ಯಾರು, ಎಷ್ಟು ಅಕ್ಕಿ ಕೊಡುತ್ತಾರೆ ಎಂಬುದು ಗೊತ್ತಾಗುತ್ತದೆ’ ಎಂದು ಅವರು ಶನಿವಾರ ತಿಳಿಸಿದರು.

‘ಜನರು ಅಕ್ಕಿಯಷ್ಟೇ ತಿನ್ನುವುದಿಲ್ಲ. ಕೇಂದ್ರ ಸರ್ಕಾರವು ಹಣ ವರ್ಗಾಯಿಸಿದರೆ ಫಲಾನುಭವಿಗಳು ಜೋಳ, ರಾಗಿಗಳಂಥ ಧಾನ್ಯ ಖರೀದಿಸುವರು. ಆಗ ಜನರಿಗೆ ಕಾಂಗ್ರೆಸ್‌ನ ಗ್ಯಾರಂಟಿ ಬಗ್ಗೆ ಅರಿವಾಗುತ್ತದೆ’ ಎಂದರು.

‘ವಿರೋಧ ಪಕ್ಷದ ನಾಯಕನ ಆಯ್ಕೆ ಪಕ್ಷಕ್ಕೆ ಬಿಟ್ಟ ವಿಚಾರ. ನನಗೆ ಯಾವ ಜವಾಬ್ದಾರಿ ನೀಡಿದರೂ ನಿಭಾಯಿಸುವೆ’ ಎಂದು ಹೇಳಿದರು.

‘ಗ್ಯಾರಂಟಿ’ ಮಾರ್ಗಸೂಚಿ ಪ್ರಕಟ

ಒಂದನೇ ಪುಟದಿಂದ...

ಯುವ ನಿಧಿ ಮಾರ್ಗಸೂಚಿಗಳು:

- ಉತ್ತೀರ್ಣರಾದ ನಂತರ ಆರು ತಿಂಗಳವರೆಗೂ ಯಾವುದೇ ಉದ್ಯೋಗ ದೊರಕದ ಕನ್ನಡಿಗರಿಗೆ ಯೋಜನೆ ಅನ್ವಯವಾಗುತ್ತದೆ.
- ಎರಡು ವರ್ಷಗಳವರೆಗೆ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಬಹುದು. ಎರಡು ವರ್ಷಕ್ಕೂ ಮೊದಲೇ ಉದ್ಯೋಗ ದೊರೆತರೆ ಭತ್ಯೆ ಪಾವತಿ ಸ್ಥಗಿತಗೊಳಿಸಲಾಗುತ್ತದೆ.
- ನಿರುದ್ಯೋಗ ಸ್ಥಿತಿಯ ಕುರಿತು ಸ್ವತಂತ್ರ ಪರಿಶೀಲನೆ ನಡೆಸಲಾಗುತ್ತದೆ. ಉದ್ಯೋಗ ದೊರಕಿದ ಕುರಿತು ತಪ್ಪು ಮಾಹಿತಿ ನೀಡಿದರೆ ಅಥವಾ ಘೋಷಣೆ ಮಾಡದಿದ್ದರೆ ದಂಡ ವಿಧಿಸಲಾಗುತ್ತದೆ.
- ನೇರ ನಗದು ಪಾವತಿ ವ್ಯವಸ್ಥೆ ಮೂಲಕ ನಿರುದ್ಯೋಗ ಭತ್ಯೆ ಪಾವತಿ ಮಾಡಲಾಗುತ್ತದೆ. ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

ಅನ್ನ ಭಾಗ್ಯ ಯೋಜನೆ ಮಾರ್ಗಸೂಚಿ

- ಅಂತ್ಯೋದಯ ಪಡಿತರ ಚೀಟಿ ಹೊಂದಿರುವ ಪ್ರತಿ ಕುಟುಂಬಕ್ಕೆ ಕೇಂದ್ರ ಸರ್ಕಾರ ತಿಂಗಳಿಗೆ 35 ಕೆ.ಜಿ. ಆಹಾರಧಾನ್ಯ ಉಚಿತವಾಗಿ ಒದಗಿಸುತ್ತಿದೆ.
- ಇನ್ನು ಮುಂದೆ ಅಂತ್ಯೋದಯ ಪಡಿತರ ಚೀಟಿ ಹೊಂದಿರುವ ಕುಟುಂಬಗಳಲ್ಲಿ ಮೂವರು ಸದಸ್ಯರಿದ್ದರೆ ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯ ಉಚಿತವಾಗಿ ದೊರೆಯಲಿದೆ.
- ಈ ಕುಟುಂಬಗಳಲ್ಲಿ ನಾಲ್ಕು ಜನರಿದ್ದರೆ ತಲಾ 10 ಕೆ.ಜಿ.ಯಂತೆ ಒಟ್ಟು 40 ಕೆ.ಜಿ., ಐವರು ಇದ್ದರೆ ಒಟ್ಟು 50 ಕೆ.ಜಿ. ಆಹಾರ ಧಾನ್ಯ ವಿತರಿಸಲಾಗುತ್ತಿದೆ. ಪ್ರತಿ ವ್ಯಕ್ತಿಗೆ ಹತ್ತು ಕೆ.ಜಿ.ಯಂತೆ ಉಚಿತ ಅಕ್ಕಿ ಸಿಗಲಿದೆ.
- ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳಲ್ಲಿ ಪ್ರತಿ ಸದಸ್ಯರಿಗೆ ಹತ್ತು ಕೆ.ಜಿ.ಯಂತೆ ಉಚಿತವಾಗಿ ಆಹಾರ ಧಾನ್ಯ ವಿತರಿಸಲಾಗುತ್ತದೆ.
- ಅಂತ್ಯೋದಯ ಪಡಿತರ ಚೀಟಿ ಹೊಂದಿದ ಕುಟುಂಬಗಳಿಗೆ ತಲಾ 35 ಕೆ.ಜಿ. ಹಾಗೂ ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಲಾ ಐದು ಕೆ.ಜಿ. ಆಹಾರ ಧಾನ್ಯವನ್ನು ಕೇಂದ್ರ ಸರ್ಕಾರವು ಆಹಾರ ಭದ್ರತಾ ಕಾಯ್ದೆಯಡಿ ಉಚಿತವಾಗಿ ಒದಗಿಸುತ್ತಿದೆ. ಹೆಚ್ಚುವರಿ ಆಹಾರ ಧಾನ್ಯದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ.

ಯಾರಿಗೆಲ್ಲ ಭತ್ಯೆ ಇಲ್ಲ?:

- ಪದವಿ ಅಥವಾ ಡಿಪ್ಲೊಮಾ ನಂತರ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವವರು.
- ಶಿಶಿಕ್ಷು (ಅಪ್ರೆಂಟಿಸ್‌ಶಿಪ್) ವೇತನ ಪಡೆಯುತ್ತಿರುವವರು.
- ಸರ್ಕಾರಿ ಅಥವಾ ಖಾಸಗಿ ವಲಯದಲ್ಲಿ ಉದ್ಯೋಗ ಪಡೆದಿರುವವರು.
- ರಾಜ್ಯ ಮತ್ತು ಕೇಂದ್ರದ ವಿವಿಧ ಯೋಜನೆಗಳಡಿ ಹಾಗೂ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಸ್ವಯಂ ಉದ್ಯೋಗ ಹೊಂದಿದವರು.

ಆರೋಪಿಗಳಿಂದ ಮುಚ್ಚಳಿಕೆ: ಮಂಗಳೂರು ಪೊಲೀಸ್ ಕಮಿಷನರೇಟ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ಮತೀಯ ಗೂಂಡಾಗಿರಿಯನ್ನು ಪರಿಣಾಮಕಾರಿಯಾಗಿ ಮಟ್ಟ ಹಾಕಲು ಮುಂದಾಗಿರುವ ಮಂಗಳೂರು ಪೊಲೀಸ್ ಕಮಿಷನರೇಟ್‌ನ ಪೊಲೀಸರು, ಐದು ವರ್ಷಗಳಿಂದ ಈಚೆಗೆ ಇಂತಹ ಕೃತ್ಯಗಳಲ್ಲಿ ತೊಡಗಿಸಿಕೊಂಡವರನ್ನು ಗುರುತಿಸಿ, ಅವರಿಂದ ಮುಚ್ಚಳಿಕೆ ಪಡೆಯಲು ನಿರ್ಧರಿಸಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ಇಲ್ಲಿ ಶನಿವಾರ ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್. ಜೈನ್, ‘ ಮತೀಯ ಗೂಂಡಾಗಿರಿ ನಡೆಸುವವರಿಂದ ನಿರ್ದಿಷ್ಟ ಮೊತ್ತದ ಬಾಂಡ್ ಪಡೆದು, ಮುಚ್ಚಳಿಕೆ ಬರೆಸಿಕೊಳ್ಳಲಿದ್ದೇವೆ. ವಾಗ್ದಾನದಂತೆ ಅವರು ನಡೆದುಕೊಳ್ಳದಿದ್ದರೆ, ಬಾಂಡ್‌ನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಅವರನ್ನು ಬಂಧಿಸುತ್ತೇವೆ’ ಎಂದರು.

‘5 ವರ್ಷಗಳಿಂದ ಈಚೆಗೆ ಮತೀಯ ಗೂಂಡಾಗಿರಿಯಲ್ಲಿ ತೊಡಗಿಸಿಕೊಂಡವರ ಮಾಹಿತಿ ಕಲೆ ಹಾಕುತ್ತಿದ್ದೇವೆ. ಮುಚ್ಚಳಿಕೆ ಉಲ್ಲಂಘನೆ ಸಂಬಂಧ 2023ರಲ್ಲಿ ಇದುವರೆಗೆ 9 ಮಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಅವರಿಂದ ಒಟ್ಟು ₹1.92 ಲಕ್ಷ ದಂಡ ವಸೂಲಿ ಮಾಡಿ ಸರ್ಕಾರಿ ಖಜಾನೆಗೆ ಜಮೆ ಮಾಡಲಾಗಿದೆ’ ಎಂದು ಡಿಸಿಪಿ (ಕಾನೂನು ಸುವ್ಯವಸ್ಥೆ) ಅಂಶು ಕುಮಾರ್ ತಿಳಿಸಿದರು.

‘ಮತೀಯ ಗೂಂಡಾಗಿರಿ ಪ್ರಕರಣಗಳು ಮರುಕಳಿಸುವ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ಪೊಲೀಸ್ ಗಸ್ತು ಹೆಚ್ಚಿಸಲು ಕ್ರಮ ಕೈಗೊಳ್ಳುತ್ತೇವೆ. ವಿಶೇಷವಾಗಿ ಕಡಲ ಕಿನಾರೆ, ಶಾಪಿಂಗ್ ಮಾಲ್ ಸೇರಿದಂತೆ ಮುಂತಾದ ಪ್ರದೇಶ ಗಳಲ್ಲಿ ಸಂಜೆ ವೇಳೆ ಪೊಲೀಸ್ ಸಿಬ್ಬಂದಿಯನ್ನೂ ನಿಯೋಜಿಸಲಿದ್ದೇವೆ. ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ, ಧೂಮಪಾನ ಮಾಡುವುದು ಗಮನಕ್ಕೆ ಬಂದರೆ ಪೊಲೀಸರಿಗೆ ಮಾಹಿತಿ ನೀಡಬಹುದು. ಕಾನೂನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ’ ಎಂದರು.

ದಕ್ಷಿಣ ಒಳನಾಡು: ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡು, ಕರಾವಳಿ, ಉತ್ತರ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಭಾನುವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಭಾಗದಲ್ಲಿ ಬಿರುಗಾಳಿ 45 ಕಿ.ಮೀ.ಯಿಂದ 55 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ. ಬೆಂಗಳೂರಿನಲ್ಲಿ ಸಂಜೆ ಅಥವಾ ರಾತ್ರಿ ವೇಳೆ ಸಾಧಾರಣ ಮಳೆಯಾಗಲಿದೆ.

ಶನಿವಾರ ಬೆಳಿಗ್ಗೆ 8.30ಕ್ಕಿಂತ ಹಿಂದಿನ 24 ಗಂಟೆ ಅವಧಿಯಲ್ಲಿ ಕೊಡಗಿನ ಪೊನ್ನಂಪೇಟೆಯಲ್ಲಿ 1 ಸೆಂ.ಮೀ ಮಳೆಯಾಗಿದೆ.

ಬೆಳಗಾವಿ: ಮೈ ನವಿರೇಳಿಸಿದ ಸಾಹಸ ಪ್ರದರ್ಶನ

ವಾಯುಸೇನೆಗೆ 2,675 ಅಗ್ನಿವೀರರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಏರ್‌ಮನ್ ತರಬೇತಿ ಶಾಲೆಯಲ್ಲಿ ‘ಅಗ್ನಿವೀರ ವಾಯು’ ಹುದ್ದೆಗೆ ತರಬೇತಿ ಪಡೆದ 2,675 ಯುವಕರನ್ನು ಶನಿವಾರ ಬೀಳ್ಕೊಡಲಾಯಿತು. ದೇಶದ ಮೊದಲ ಅಗ್ನವೀರರು ಎಂಬ ಕೀರ್ತಿಗೆ ಈ ಯುವಕರ ತಂಡವು ಪಾತ್ರವಾಯಿತು.

ಅಗ್ನಿ ಅವಘಡದ ವೇಳೆ ತುರ್ತು ರಕ್ಷಣಾ ಕಾರ್ಯಾಚರಣೆ, ಒಂದೇ ನಿಮಿಷದಲ್ಲಿ ಟೆಂಟ್ ನಿರ್ಮಾಣ, ಕಣ್ಣಿಗೆ ಪಟ್ಟಿಕಟ್ಟಿಕೊಂಡು ಅತ್ಯಾಧುನಿಕ ಬಂದೂಕುಗಳನ್ನು 30 ಸೆಕೆಂಡ್‌ಗಳಲ್ಲಿ ಬಿಚ್ಚಿ– ಜೋಡಿಸುವುದು ಸೇರಿ ರೋಮಾಂಚಕ ಸಾಹಸಗಳ ಪ್ರದರ್ಶನ, ಆಕರ್ಷಕ ಕವಾಯತು ನಡೆಯಿತು.

ವೈರಿಗಳು ಹಿಂಬದಿಯಿಂದ ದಾಳಿ ಮಾಡಿದಾಗ ಅವರಿಂದ ತಪ್ಪಿಸಿಕೊಂಡು, ಮರುಕ್ಷಣ ದಾಳಿ ಮಾಡುವುದು, ತುರ್ತು ಸಂದರ್ಭದಲ್ಲಿ ನಾಗರಿಕರ ರಕ್ಷಣೆಗೆ ಕ್ರಮ ಕೈಗೊಳ್ಳುವುದು, ನಾಲ್ಕೂವರೆ ಕೆಜಿ ತೂಕದ ಬಂದೂಕುಗಳನ್ನು ಲೀಲಾಜಾಲವಾಗಿ ಕೈಯಲ್ಲಿ ಗಿರಕಿ ಹೊಡೆಸಿ, ಚಾಕಚಕ್ಯತೆ ಮೆರೆಯುವುದು ಎಲ್ಲವೂ ಗಮನ ಸೆಳೆಯಿತು.

ಅತ್ಯುತ್ತಮ ಪ್ರದರ್ಶನ ನೀಡಿದವರಿಗೆ ಏರ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್, ಏರ್ ಮಾರ್ಷಲ್ ಆರ್. ರಾಧೀಶ್ ಪ್ರಶಸ್ತಿ ವಿತರಿಸಿದರು. ಸೈನಿಕರ ತಂದೆ– ತಾಯಿ, ಕುಟುಂಬದವರು ಮತ್ತು ಸ್ನೇಹಿತರು ಉಪಸ್ಥಿತರಿದ್ದರು.



ಬೆಳಗಾವಿಯ ಏರ್‌ಮನ್ ತರಬೇತಿ ಶಾಲೆಯಲ್ಲಿ ಶನಿವಾರ, ಅಗ್ನಿವೀರ ವಾಯು ತರಬೇತಿ ಹೊಂದಿದ ಯೋಧರು ವೈರಿ ಮೇಲೆ ಪ್ರತಿ ದಾಳಿ ಮಾಡುವ ಅಣಕು ಪ್ರದರ್ಶನ ನೀಡಿದರು

ಅಗ್ನಿವೀರರು ದೇಶದ ಹೆಮ್ಮೆ: ‘ಅಗ್ನಿಪಥ ಯೋಜನೆಯಡಿ ವಾಯುಸೇನೆಗೆ ಸೇರಲು 7 ಲಕ್ಷ ಯುವಜನರು ಬಂದಿದ್ದರು. ಯುವಜನರು ವಾಯುಸೇನೆ ಮೇಲೆ ಇಟ್ಟ ಅಭಿಮಾನವಿದು’ ಎಂದು ಏರ್ ಮಾರ್ಷಲ್ ಆರ್.ರಾಧೀಶ್ ಹೇಳಿದರು.

ಅಗ್ನಿವೀರ ವಾಯು ಮೊದಲ ತಂಡದ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ‘ಬೆಳಗಾವಿ ತರಬೇತಿ ಶಾಲೆಯಲ್ಲಿ ಯುವ ಸೈನಿಕರಿಗೆ ಎರಡು ಹಂತಗಳಲ್ಲಿ ತರಬೇತಿ ನೀಡಲಾಗಿದೆ. ಕೌಶಲ ಅಭಿವೃದ್ಧಿ, ವ್ಯಕ್ತಿತ್ವ ವಿಕಸನ, ದೈಹಿಕ ಮತ್ತು ಮಾನಸಿಕ ಕ್ಷಮತೆ ಹೆಚ್ಚಿಸುವುದು, ಅತ್ಯಾಧುನಿಕ ಶಸ್ತ್ರಾಸ್ತ್ರ ಬಳಕೆ, ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ವೃದ್ಧಿ, ಕಠಿಣ ಸ್ಥಿತಿಯಲ್ಲೂ ಸಮಚಿತ್ತ ಕಾಯ್ದುಕೊಳ್ಳುವುದು, ಯೋಗ, ಧ್ಯಾನ ತರಬೇತಿಗಳನ್ನೂ ನೀಡಲಾಗಿದೆ. ನಾಲ್ಕು ವರ್ಷಗಳ ಸೇವಾವಧಿ ಮುಗಿದ ಬಳಿಕವೂ ಇವರು ಸಮಾಜಕ್ಕೆ ಉತ್ತಮ ಕಾಣಿಕೆ ಆಗಲಿದ್ದಾರೆ’ ಎಂದರು.

ಏರ್ ಆಫೀಸರ್ ಕಮಾಂಡಿಂಗ್ ಎಸ್.ಶ್ರೀಧರ ಮಾತನಾಡಿದರು. ತರಬೇತಿ ಶಾಲೆಯ ಅಧಿಕಾರಿಗಳಿದ್ದರು.

ಬಲವಂತವಾಗಿ ನಾಭಿ, ಪೃಷ್ಠ ಸ್ಪರ್ಶಿಸಿದ್ದ ಬ್ರಿಜ್: ಕುಸ್ತಿಪಟುಗಳ ಆರೋಪ

ಫೋಟೊ ನೆಪ; ಲೈಂಗಿಕತೆಯ ಜಪ

ನವದೆಹಲಿ(ಪಿಟಿಐ): 'ಮಹಿಳಾ ಕುಸ್ತಿಪಟುಗಳ ಜೊತೆ ಬ್ರಿಜ್‌ಭೂಷಣ್ ಅನುಚಿತವಾಗಿ ವರ್ತಿಸುತ್ತಾರೆಂದು ಕೇಳಿದ್ದೆ. ನಾನು ತರಬೇತಿಯಲ್ಲಿದ್ದಾಗ ಪ್ರತ್ಯೇಕವಾಗಿ ಭೇಟಿ ಆಗುವಂತೆ ಹೇಳಿದ್ದರು. ಒಂಟಿಯಾಗಿ ಅವರ ಭೇಟಿಗೆ ನಿರಾಕರಿಸಿದ್ದೆ. ಮತ್ತೆ ಅವರಿಂದ ಕರೆ ಬಂದಾಗ ಹೋದೆ. ಆಗ ನನ್ನ ಹೃದಯ ಬಡಿತವನ್ನು ಪರೀಕ್ಷಿಸುವ ನೆಪದಲ್ಲಿ ಟೀ ಶರ್ಟ್ ಎಳೆದು ಎದೆಯ ಭಾಗದಿಂದ ಹೊಟ್ಟೆವರೆಗೆ ಕೈಯಾಡಿಸಿದರು. ಬಳಿಕ ನನ್ನ ನಾಭಿಯನ್ನೂ ಮುಟ್ಟಿದರು...'



ಬ್ರಿಜ್‌ಭೂಷಣ್

ಇದು ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ದೆಹಲಿ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಮಹಿಳಾ ಕುಸ್ತಿಪಟುವೊಬ್ಬರು ನೀಡಿರುವ ಹೇಳಿಕೆ.

ಏಪ್ರಿಲ್ 28ರಂದು ಬಾಲಕಿಯ ತಂದೆ ಸೇರಿದಂತೆ ಏಳು ಮಹಿಳಾ ಕುಸ್ತಿಪಟುಗಳು ಬ್ರಿಜ್‌ಭೂಷಣ್ ವಿರುದ್ಧ ನೀಡಿದ ದೂರಿನ ಅನ್ವಯ ಎರಡು ಎಫ್‌ಐಆರ್ ದಾಖಲಾಗಿವೆ. ದೂರಿನ ಸಂಪೂರ್ಣ ವಿವರ ಬಹಿರಂಗಗೊಂಡಿದೆ.

'ಮಹಿಳಾ ಕುಸ್ತಿಪಟುಗಳು ಅವರಿಂದ ತಪ್ಪಿಸಿಕೊಳ್ಳಲು ಹೋಟೆಲ್‌ನ ಕೊಠಡಿಗಳಿಗೆ ತೆರಳುವಾಗ ಗುಂಪಿನಲ್ಲಿ ಹೋಗುತ್ತಿದ್ದರು. ನಾನು ಹೋಟೆಲ್‌ನಲ್ಲಿದ್ದಾಗ ಇದನ್ನು ಗಮನಿಸಿದ್ದೇನೆ' ಎಂದು ಕುಸ್ತಿಪಟು ದೂರಿನಲ್ಲಿ ವಿವರಿಸಿದ್ದಾರೆ.

ಒಂದು ದಶಕದ ಅವಧಿಯಲ್ಲಿ ದೇಶದ ವಿವಿಧೆಡೆ ಹಾಗೂ ವಿದೇಶಗಳಲ್ಲಿ ನಡೆದ ಟೂರ್ನಿಗಳ ವೇಳೆ ಬ್ರಿಜ್‌ಭೂಷಣ್ ಅನುಚಿತವಾಗಿ ವರ್ತಿಸಿದ್ದನ್ನು ಕುಸ್ತಿಪಟುಗಳು ಎಳೆ ಎಳೆಯಾಗಿ ದೂರಿನಲ್ಲಿ ಬಿಡಿಸಿಟ್ಟಿದ್ದಾರೆ. ಅವರ ವಿರುದ್ಧ ಐಪಿಸಿ ಸೆಕ್ಷನ್ 354 (ಮಹಿಳೆಯ ಘನತೆಗೆ ಧಕ್ಕೆ), 354ಎ (ಲೈಂಗಿಕ ಕಿರುಕುಳ), 354ಡಿ(ಮಹಿಳೆಯನ್ನು ಹಿಂಬಾಲಿಸುವುದು) ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಫೆಡರೇಷನ್ ಕಾರ್ಯದರ್ಶಿ ವಿನೋದ್ ತೊಮರ್ ಅವರ ಹೆಸರೂ ಇದೆ.

ಕೋಚ್ ಇಲ್ಲದಿದ್ದಾಗ ಕಿರುಕುಳ: 'ನಾನು ಕ್ರೀಡಾಂಗಣದ ಮ್ಯಾಟ್ ಮೇಲೆ ವಾರ್ಮ್ ಅಪ್ ಮಾಡುವಾಗ ಮೂಲೆಯೊಂದರಲ್ಲಿ ನಿಂತು ನನ್ನನ್ನು ನೋಡುತ್ತಿದ್ದರು. ನಾನು ಮ್ಯಾಟ್ ಮೇಲೆ ಬಾಗಿದಾಗ ಹತ್ತಿರ ಬಂದರು. ಇದರಿಂದ ನನಗೆ ಅಚ್ಚರಿಯಾಯಿತು. ಆಗ ನನ್ನ ಕೋಚ್ ಸ್ಥಳದಲ್ಲಿ ಇರಲಿಲ್ಲ. ಎದೆಯ ಬಡಿತ ಪರೀಕ್ಷಿಸುವುದಾಗಿ ಹೇಳಿ ನನ್ನ ಒಪ್ಪಿಗೆ ಇಲ್ಲದೆಯೇ ಟೀಶರ್ಟ್ ಎಳೆದು ಎದೆಯ ಭಾಗವನ್ನು ಸ್ಪರ್ಶಿಸಿದರು. ಹೊಟ್ಟೆವರೆಗೆ ಕೈಯಾಡಿಸಿ ಅನುಚಿತವಾಗಿ ವರ್ತಿಸಿದರು' ಎಂದು ಎರಡನೇ ಕುಸ್ತಿಪಟು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪೃಷ್ಠ ಮುಟ್ಟಿದರು: ಗುಂಪಿನ ಛಾಯಾಚಿತ್ರ ತೆಗೆದುಕೊಳ್ಳುವಾಗ ಆದ ಕಹಿ ಅನುಭವವನ್ನು ಮೂರನೇ ಕುಸ್ತಿಪಟು ಬಿಚ್ಚಿಟ್ಟಿದ್ದಾರೆ. 'ಅಂದು ಕುಸ್ತಿಪಟುಗಳ ಗುಂಪು ಫೋಟೊ ತೆಗೆಯುವ ಕಾರ್ಯಕ್ರಮವಿತ್ತು. ಉಳಿದವರ ಬರುವಿಕೆಗಾಗಿ ನಾನು ಬದಿಯಲ್ಲಿ ನಿಂತು ಕಾಯುತ್ತಿದ್ದೆ. ನನ್ನ ಬಳಿಗೆ ಬಂದು ನಿಂತರು. ಅವರ ಕೈ ನನ್ನ ಪೃಷ್ಠ ಮುಟ್ಟಿದಾಗ ಭಯಗೊಂಡೆ. ಅಲ್ಲಿಂದ ತೆರಳಲು ಮುಂದಾದೆ. ಆಗ ಅವರು ಬಲವಂತವಾಗಿ ನನ್ನ ಭುಜ ಹಿಡಿದರು. ಅವರಿಂದ ಬಿಡಿಸಿಕೊಳ್ಳಲು ಹೆಣಗಾಟ ನಡೆಸಿದೆ' ಎಂದು ಹೇಳಿದ್ದಾರೆ.

ಫೋಟೊ ಕ್ಲಿಕ್ಕಿಸುವ ನೆಪ: ಫೋಟೊ ಕ್ಲಿಕ್ಕಿಸಿಕೊಳ್ಳುವಾಗ ನಡೆದ ಕಿರುಕುಳವನ್ನು ನಾಲ್ಕನೇ ಕುಸ್ತಿಪಟು ಹೇಳಿಕೆಯಲ್ಲಿ ದಾಖಲಿಸಿದ್ದಾರೆ. 'ಅಂದು ಪದಕ ವಿತರಣೆಯ ಸಮಾರಂಭವಿತ್ತು. ಆಗ ನನ್ನನ್ನು ಕರೆದು ವೈಯಕ್ತಿಕ ಪ್ರಶ್ನೆಗಳನ್ನು ಕೇಳಿದರು. ಸಮಾರಂಭ ಮುಗಿದ ಬಳಿಕ ಫೋಟೊ ಕ್ಲಿಕ್ಕಿಸುವ ನೆಪದಲ್ಲಿ ನನ್ನನ್ನು ಬಲವಂತವಾಗಿ ಅವರತ್ತ ಬರ ಸೆಳೆದು ಭುಜವನ್ನು ಗಟ್ಟಿಯಾಗಿ ಹಿಡಿದುಕೊಂಡರು. ನನ್ನ ಬಳಿ ಮೊಬೈಲ್ ಇಲ್ಲವೆಂದು ಹೇಳಿ ಅವರಿಂದ ಬಿಡಿಸಿಕೊಳ್ಳಲು ಮುಂದಾದೆ. ಆಗ ಅವರು ನನ್ನ ಮೊಬೈಲ್‌ನಲ್ಲಿಯೇ ಫೋಟೊ ಕ್ಲಿಕ್ಕಿಸಿಕೊಳ್ಳುತ್ತೇನೆಂದು ಹೇಳಿದರು' ಎಂದು ವಿವರಿಸಿದ್ದಾರೆ.

ಪೌಷ್ಟಿಕಾಂಶ ಕೊಡಿಸುವ ಭರವಸೆ: ಲೈಂಗಿಕ ಆಸೆ ಪೂರೈಸಿದರೆ ಕುಸ್ತಿಗೆ ಅಗತ್ಯವಿರುವ ಪೌಷ್ಟಿಕಾಂಶಗಳನ್ನು ಕೊಡಿಸುವ ಆಮಿಷವೊಡ್ಡಿದ್ದರು ಎಂದು ಐದನೇ ಕುಸ್ತಿಪಟು ಹೇಳಿದ್ದಾರೆ.

'ನಾನಾಗ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗೆದ್ದಿದ್ದೆ. ಕೊಠಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ನನ್ನಲ್ಲಿಗೆ ಬಂದ ಫಿಜಿಯೊ, ಅಧ್ಯಕ್ಷರು ನಿನ್ನನ್ನು ಕರೆಯುತ್ತಿದ್ದಾರೆಂದರು. ಪದಕ ಗೆದ್ದಿರುವುದರಿಂದ ಅಭಿನಂದಿಸಲು ಕರೆಯುತ್ತಿರಬಹುದೆಂದು ಭಾವಿಸಿದೆ. ಅವರಿದ್ದ ಕೊಠಡಿ ಪ್ರವೇಶಿಸಿದಾಗ ನನ್ನ ಪೋಷಕರ ಮೊಬೈಲ್ ನಂಬರ್ ಕೇಳಿದರು. ನನ್ನ ಬಳಿ ಆಗ ಮೊಬೈಲ್ ನಂಬರ್ ಇರಲಿಲ್ಲ. ಪೋಷಕರ ಜೊತೆಗೆ ಮಾತನಾಡುವಂತೆ ಅವರದ್ದೇ ಮೊಬೈಲ್ ನೀಡಿದರು. ನಾನು ಸಂಭಾಷಣೆ ಮುಗಿಸಿದಾಗ ಅವರು ಕುಳಿತಿದ್ದ ಬೆಡ್ ಬಳಿಗೆ ಕರೆದರು. ಹತ್ತಿರಕ್ಕೆ ಹೋದಾಗ ಆಲಂಗಿಸಿಕೊಂಡರು' ಎಂದು ಹೇಳಿಕೆ ದಾಖಲಿಸಿದ್ದಾರೆ.

ಮಾನಸಿಕವಾಗಿ ಜರ್ಜರಿತ: 'ಬ್ರಿಜ್‌ಭೂಷಣ್ ನೀಡಿದ ಕಿರುಕುಳದಿಂದ ನನ್ನ ಪುತ್ರಿ ಮಾನಸಿಕವಾಗಿ ಜರ್ಜರಿತಳಾಗಿದ್ದು, ದೆವ್ವ ಬಂದವಳಂತೆ ವರ್ತಿಸುತ್ತಾಳೆ. ಪದಕ ಗೆದ್ದಿದ್ದ ನನ್ನ ಮಗಳೊಂದಿಗೆ ಫೋಟೊ ಕ್ಲಿಕ್ಕಿಸಿಕೊಳ್ಳುವ ನೆಪದಲ್ಲಿ ಅವಳನ್ನು ತನ್ನತ್ತ ಬರ ಸೆಳೆದುಕೊಂಡು ಗಟ್ಟಿಯಾಗಿ ಭುಜ ಹಿಡಿದು ಎದೆಯ ಭಾಗವನ್ನು ಸ್ಪರ್ಶಿಸಿದ್ದಾರೆ' ಎಂದು ಬಾಲಕಿ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ಮೋದಿ ಮೌನ ಪ್ರಶ್ನಿಸಿದ ಸಿಬಲ್

'ಬ್ರಿಜ್‌ಭೂಷಣ್ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ. ಆದರೆ, ಅವರ ವಿರುದ್ಧ ತನಿಖೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಮೌನವಹಿಸಿದೆ' ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ದೂರಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ಮಹಿಳಾ ಕುಸ್ತಿಪಟುಗಳ ಪರ ವಾದಿಸುತ್ತಿರುವ ಸಿಬಲ್, 'ಬ್ರಿಜ್‌ಭೂಷಣ್ ವಿರುದ್ಧ ತನಿಖೆ ನಡೆಸಲು ಹಲವು ಸಾಕ್ಷ್ಯಗಳಿವೆ. ಜನರ ಒತ್ತಾಯವೂ ಇದೆ. ಆದರೂ, ಅವರನ್ನು ಬಂಧಿಸಿಲ್ಲ. ಪ್ರಧಾನಿ, ಗೃಹ ಸಚಿವರು, ಬಿಜೆಪಿ ಹಾಗೂ ಆರೆಸ್ಸೆಸ್ ಮೌನವಾಗಿದ್ದು, ಬ್ರಿಜ್‌ಭೂಷಣ್‌ಗೆ ಬೆಂಬಲ ನೀಡುತ್ತಿದ್ದಾರೆ' ಎಂದು ದೂರಿದ್ದಾರೆ.



ಸಾವಿತ್ರಿ ಪೂಜೆ

ವಟ್ ಸಾವಿತ್ರಿ ಪೂಜೆಯ ಅಂಗವಾಗಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ಮಹಿಳೆಯರು ಶನಿವಾರ ಧಾರ್ಮಿಕ ವಿಧಿವಿಧಾನ ನೆರವೇರಿಸಿದರು –ಪಿಟಿಐ ಚಿತ್ರ

ಸಿಸೋಡಿಯಾ ಪತ್ನಿ ವೈದ್ಯಕೀಯ ವರದಿ ನೀಡಲು ಸೂಚನೆ

ನವದೆಹಲಿ (ಪಿಟಿಐ): ಎಎಪಿ ನಾಯಕ ಮನೀಷ್ ಸಿಸೋಡಿಯಾ ಅವರ ಮಧ್ಯಂತರ ಜಾಮೀನು ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಕಾಯ್ದಿರಿಸಿರುವ ದೆಹಲಿ ಹೈಕೋರ್ಟ್, ಸಿಸೋಡಿಯಾ ಅವರ ಪತ್ನಿಯ ವೈದ್ಯಕೀಯ ವರದಿಯನ್ನು ಸಲ್ಲಿಸುವಂತೆ ಲೋಕ ನಾಯಕ ಜಯಪ್ರಕಾಶ್ ಆಸ್ಪತ್ರೆಗೆ ಶನಿವಾರ ಸೂಚಿಸಿದೆ.

ಅನಾರೋಗ್ಯ ಪೀಡಿತ ಪತ್ನಿಯ ಆರೈಕೆ ಮಾಡಲು ಮಧ್ಯಂತರ ಜಾಮೀನು ನೀಡುವಂತೆ ಕೋರಿ ಸಿಸೋಡಿಯಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸಂತ್ರಸ್ತೆಗೆ ಕುಜ ದೋಷ ಇದೆ ಎಂದ ಅತ್ಯಾಚಾರ ಆರೋಪಿ

ಜಾತಕ ಪರೀಕ್ಷೆ ಆದೇಶಕ್ಕೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಗೆ ಕುಜ ದೋಷ ಇದೆಯೇ ಎಂಬುದನ್ನು ಖಚಿತಪಡಿಸುವಂತೆ ಲಖನೌ ವಿಶ್ವವಿದ್ಯಾಲಯದ ಜ್ಯೋತಿಷ ಶಾಸ್ತ್ರ ವಿಭಾಗಕ್ಕೆ ಸೂಚಿಸಿದ್ದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಆದೇಶಕ್ಕೆ ಸುಪ್ರೀಂ ಕೋರ್ಟ್ ಶನಿವಾರ ತಡೆ ನೀಡಿದೆ.

ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ ಆಕೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಹೊತ್ತ ಗೋವಿಂದ್ ರಾಜು ಎಂಬಾತ, ಆಕೆಗೆ ಕುಜ ದೋಷ ಇರುವುದರಿಂದ ವಿವಾಹವಾಗುವುದಿಲ್ಲ ಎಂದು ವಂಚಿಸಿದ್ದ. ಆತನ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ್ದ ಲಖನೌ ಪೀಠವು ಈ ದೋಷ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸುವಂತೆ ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು.

'ಯುವತಿಗೆ ಕುಜ ದೋಷ (ಮಾಂಗ್ಲಿಕ- ಮಂಗಳ ದೋಷ) ಇದೆ. ಹಾಗಾಗಿ, ಶಾಸ್ತ್ರೋಕ್ತವಾಗಿ ಇಬ್ಬರ ನಡುವೆ ಮದುವೆ ಸಾಧ್ಯವಿಲ್ಲ' ಎಂದು ಆರೋಪಿ ಪರ ವಕೀಲರು ವಾದಿಸಿದ್ದರು.

'ಎರಡೂ ಕಡೆಯವರು ಹತ್ತು ದಿನಗಳೊಳಗೆ ಆಕೆಯ ಜನ್ಮ ಕುಂಡಲಿಯನ್ನು ಜ್ಯೋತಿಷ ಶಾಸ್ತ್ರ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. ಮೂರು ವಾರದೊಳಗೆ ಮುಖ್ಯಸ್ಥರು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಬೇಕು' ಎಂದು ಆದೇಶಿಸಿದ ಪೀಠವು ಜೂನ್ 26ಕ್ಕೆ ವಿಚಾರಣೆ ಮುಂದೂಡಿತ್ತು.

ಸ್ವಯಂ ಪ್ರೇರಿತವಾಗಿ ಈ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ರಜಾ ಕಾಲದ ವಿಭಾಗೀಯ ಪೀಠವು, ಸಂತ್ರಸ್ತೆಯ ಜಾತಕದ ಪರೀಕ್ಷೆ ನಡೆಸಬಾರದು ಎಂದು ವಿಶ್ವವಿದ್ಯಾಲಯಕ್ಕೆ ಸೂಚಿಸಿದೆ.

ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಲಖನೌ ಪೀಠದ ಆದೇಶವು ಗೊಂದಲಕಾರಿಯಾಗಿದ್ದು, ತಡೆ ನೀಡಬಹುದು' ಎಂದರು.

ಸಂತ್ರಸ್ತೆ ಪರ ಹಾಜರಿದ್ದ ವಕೀಲ ಅಜಯ್ ಕುಮಾರ್ ಸಿಂಗ್, 'ವಿ.ವಿಗಳಲ್ಲಿ ಇತ್ತೀಚೆಗೆ ಜ್ಯೋತಿಷ ಶಾಸ್ತ್ರವನ್ನು ವಿಜ್ಞಾನವಾಗಿ ಕಲಿಸಲಾಗುತ್ತಿದೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಜ್ಯೋತಿಷ ಶಾಸ್ತ್ರವು ವಿಜ್ಞಾನ ಎಂಬುದರಲ್ಲಿ ಸಂಶಯವಿಲ್ಲ. ಅದನ್ನು ನಾವು ಗೌರವಿಸುತ್ತೇವೆ. ಆದರೆ, ಈ ಪ್ರಕರಣಕ್ಕೆ ಅದು ಅನ್ವಯಿಸುವುದಿಲ್ಲ' ಎಂದು ಹೇಳಿ ಎರಡೂ ಕಡೆಯವರಿಗೆ ನೋಟಿಸ್ ನೀಡಿ ಜುಲೈನಲ್ಲಿ ಆದ್ಯತೆ ಮೇರೆಗೆ ಈ ಅರ್ಜಿ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಜ್ಯೋತಿಷ ಶಾಸ್ತ್ರದ ಪ್ರಕಾರ ಮಂಗಳನ ಪ್ರಭಾವದಿಂದ ಜನಿಸಿದವರಿಗೆ ಮಂಗಳ ಅಥವಾ ಕುಜ ದೋಷ ಕಾಡುತ್ತದೆ. ಜಾತಕದಲ್ಲಿ ಈ ದೋಷ ಇರುವವರು, ದೋಷ ಇಲ್ಲದವರ ಜೊತೆಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರೆ ಅಮಂಗಳಕರ. ಜೊತೆಗೆ, ಅವರ ಜೀವಕ್ಕೆ ಆಪತ್ತು ಸಂಭವಿಸಲಿದೆ ಎಂಬ ನಂಬಿಕೆ ಇದೆ.

'ಪರ್ಯಾಯ ದೃಷ್ಟಿಕೋನ'ದ ಹೋರಾಟ ಅಗತ್ಯ –ರಾಹುಲ್ ಪ್ರತಿಪಾದನೆ

'ಬಿಜೆಪಿ ವಿರುದ್ಧ ಸಂಘಟಿತ ಹೋರಾಟ'

ವಾಷಿಂಗ್ಟನ್ (ಪಿಟಿಐ): 'ಭಾರತದಲ್ಲಿ ಸದ್ಯ ಎರಡು ಸಿದ್ಧಾಂತಗಳ ನಡುವೆ 'ಹೋರಾಟ' ನಡೆದಿದ್ದು, ದೇಶಕ್ಕೆ 'ಪರ್ಯಾಯ ದೃಷ್ಟಿಕೋನ' ನೀಡಲು ಬಿಜೆಪಿಗೆ ವಿರುದ್ಧವಾಗಿ ಎಲ್ಲ ಪ್ರತಿಪಕ್ಷಗಳು ಕೈಜೋಡಿಸಲಿವೆ'ಎಂದು ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಮೆರಿಕದಲ್ಲಿ ನೆಲೆಯಾಗಿರುವ ಭಾರತ ಮೂಲದ ಜನರನ್ನು ಉದ್ದೇಶಿಸಿ ಶುಕ್ರವಾರ ಇಲ್ಲಿ ಮಾತನಾಡಿದ ಅವರು, 'ನಾನು ಕಾಂಗ್ರೆಸ್ಸೇತರ ಪ್ರತಿಪಕ್ಷಗಳ ಮುಖಂಡರನ್ನು ಭೇಟಿಯಾದಾಗ ಪ್ರತಿಪಕ್ಷಗಳ ಒಗ್ಗೂಡುವಿಕೆಯ ಮಹತ್ವ ಕುರಿತಂತೆಯೇ ಒತ್ತಿ ಹೇಳುತ್ತೇನೆ' ಎಂದರು.

'ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಅವು ಇರುವುದಕ್ಕಿಂತ ಬಹಳ ಬೃಹತ್ತಾಗಿ ಈಗ ಮಾಧ್ಯಮದಲ್ಲಿರುವ ಹೆಚ್ಚಿನವರು ಬಿಂಬಿಸುತ್ತಿದ್ದಾರೆ. ದಯವಿಟ್ಟು ಹಿಮಾಚಲ ಪ್ರದೇಶ, ಕರ್ನಾಟಕದ ಚುನಾವಣೆಯತ್ತಲೂ ಒಮ್ಮೆ ಗಮನಿಸಿ. ಮುಂದೆ, ಮಧ್ಯಪ್ರದೇಶ, ಛತ್ತೀಸಗಢ, ರಾಜಸ್ಥಾನದಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿವೆ. ಬಿಜೆಪಿಯನ್ನು ಸೋಲಿಸುವದಕ್ಕೆ ಬೇಕಿರುವುದಕ್ಕಿಂತ ಹೆಚ್ಚಿನ ಶಕ್ತಿ ಕಾಂಗ್ರೆಸ್ ಪಕ್ಷಕ್ಕೆ ಇದೆ ಎಂಬುದು ನಿಮಗೆ ತಿಳಿಯುತ್ತದೆ' ಎಂದು ಅವರು ಆತ್ಮವಿಶ್ವಾಸದಿಂದ ಹೇಳಿದರು.



ಅವರು (ಬಿಜೆಪಿ) ಜನರನ್ನು ಬೆದರಿಸುತ್ತಿದ್ದಾರೆ. ಹಾಗಾಗಿ ಅವರ ಸದ್ದು ಜೋರಾಗಿ ಕೇಳುತ್ತಿದೆ. ಆದರೆ, ಸಮಚಿತ್ತ ಮತ್ತು ಮಮತೆಗೆ ಧ್ವನಿಯೇ ಇಲ್ಲ ಎಂದು ಭಾವಿಸಬೇಡಿ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ಪ್ರತಿಪಕ್ಷಗಳವರು ಒಟ್ಟುಗೂಡುತ್ತೇವೆ. ಆದರೆ, ಸ್ವತಂತ್ರ ಪಕ್ಷಗಳಾಗಿ ಪ್ರತ್ಯೇಕವಾಗಿ ಹೋರಾಡುತ್ತಿದ್ದೇವೆ. ಆದರೆ, ಭಾರತಕ್ಕಾಗಿ ಪರ್ಯಾಯ ದೃಷ್ಟಿಕೋನದ ದೃಷ್ಟಿಯಿಂದ ಹೋರಾಟ ನಡೆಸುವುದು ಈಗಿನ ಅಗತ್ಯವಾಗಿದೆ. ಆ ಬಗ್ಗೆಯೇ ಈಗ ಚಿಂತನೆ ನಡೆದಿದ್ದು, ಎಲ್ಲ ಪಕ್ಷಗಳು ಚರ್ಚೆಯಲ್ಲಿವೆ. ಈ ಚರ್ಚೆಯು ಫಲಪ್ರದವಾಗುವ ದಿಕ್ಕಿನಲ್ಲಿ ಸಾಗುತ್ತಿದೆ' ಎಂದು ತಿಳಿಸಿದರು.

'ದೇಶದಲ್ಲಿ ಎರಡು ದೃಷ್ಟಿಕೋನಗಳ ನಡುವಣ ಸೈದ್ಧಾಂತಿಕ ಹೋರಾಟ ಇದಾಗಿದೆ. ಇದರಲ್ಲಿ ಒಂದು ಮಹಾತ್ಮ ಗಾಂಧಿಯವರ ಶಾಂತಿಯುತ, ಅಹಿಂಸಾತ್ಮಕವಾದ, ಸತ್ಯದ ಮಾರ್ಗ. ಇದರಲ್ಲಿ ದೇಶದ ಪ್ರಗತಿಯಲ್ಲಿ ಎಲ್ಲ ಜಾತಿ, ಧರ್ಮ, ಭಾಷೆಯವರು ಒಟ್ಟಾಗಿ ನಿಲ್ಲುತ್ತಾರೆ. ಎಲ್ಲರೂ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಮುಕ್ತರಾಗಿರುತ್ತಾರೆ' ಎಂದು ಹೇಳಿದರು.

'ಇನ್ನೊಂದು, ಆರ್‌ಎಸ್‌ಎಸ್ ರೂಪಿಸಿದ ದೃಷ್ಟಿಕೋನ. ಇಲ್ಲಿ ವಿಭಜನೆ ಚಿಂತನೆಯುಳ್ಳ ಅಹಂಕಾರ, ವೈಜ್ಞಾನಿಕವಲ್ಲದ ಆಕ್ರಮಣಶೀಲತೆ ಇದೆ. ಈಗಿನದು ಈ ಎರಡರ ನಡುವಣ ಹೋರಾಟ. ಹಲವು ವರ್ಷಗಳಿಂದ ಅಂದರೆ ಸಾವಿರಾರು ವರ್ಷಗಳಿಂದ ಈ ಹೋರಾಟ ನಡೆದಿದೆ. ಆದರೆ, ನನಗೆ ವಿಶ್ವಾಸವಿದೆ. ಮಹಾತ್ಮ ಗಾಂಧಿ ಅವರ ದೃಷ್ಟಿಕೋನ, ಚಿಂತನೆ ಖಂಡಿತವಾಗಿ ಜಯಭೇರಿ ಬಾರಿಸಲಿದೆ' ಎಂದು ಹೇಳಿದರು.

ಬ್ರಿಕ್ಸ್ ವ್ಯಾಪ್ತಿ ವಿಸ್ತರಣೆಗೆ ಚರ್ಚೆ: ಜೈಶಂಕರ್

ಜೊಹಾನ್ಸ್‌ಬರ್ಗ್ (ಪಿಟಿಐ): 'ಬ್ರಿಕ್ಸ್ ಕೂಟವನ್ನು ವಿಸ್ತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಭಾರತ ಸೇರಿ ಸದಸ್ಯ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ ಈ ಬಗ್ಗೆ ಮುಕ್ತ ಚಿಂತನೆ ಹೊಂದಿವೆ' ಎಂದು ವಿದೇಶಾಂಗ ಸಚಿವ ಜೈಶಂಕರ್ ತಿಳಿಸಿದರು.

ಕೇಪ್‌ಟೌನ್‌ನಲ್ಲಿ ಗುರುವಾರ ನಡೆದ ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯ ನಂತರ ಮಾತನಾಡಿದ ಅವರು, 'ವ್ಯಾಪ್ತಿ ವಿಸ್ತರಣೆಗೆ ಮಾರ್ಗದರ್ಶಿ ಸೂತ್ರ, ಮಾನದಂಡ, ಒಕ್ಕೂಟದ ಪ್ರವೇಶಕ್ಕೆ ಕಾರ್ಯಸೂಚಿ ರೂಪಿಸುವ ಪ್ರಕ್ರಿಯೆ ನಡೆದಿದೆ' ಎಂದರು.

'ಇಲ್ಲಿ ಹಲವು ಆಯಾಮಗಳಿವೆ. ಮೊದಲನೆಯದು ಈಗ ಬ್ರಿಕ್ಸ್‌ನ ಹಾಲಿ ಸದಸ್ಯ ರಾಷ್ಟ್ರಗಳು ಪರಸ್ಪರರ ಜೊತೆಗೆ ಹೇಗೆ ವರ್ತಿಸುತ್ತಿವೆ ಎಂಬುದು. ಎರಡನೆಯದು ಬ್ರಿಕ್ಸ್ ಸದಸ್ಯಯೇತರ ರಾಷ್ಟ್ರಗಳ ಜೊತೆಗೆ ಹೇಗೆ ವ್ಯವಹರಿಸಬೇಕು ಎಂಬುದು. ಇವುಗಳನ್ನು ಗಮನದಲ್ಲಿ ಇರಿಸಿಕೊಂಡೇ ವ್ಯಾಪ್ತಿ ವಿಸ್ತರಣೆ ಸ್ವರೂಪ ಕುರಿತು ಚರ್ಚೆ ನಡೆದಿದೆ' ಎಂದು ತಿಳಿಸಿದರು.

ಚೀನಾದ ಉಪ ಸಚಿವ ಮಾ ಝೂಕ್ಸು, ಬ್ರೆಜಿಲ್ ವಿದೇಶಾಂಗ ಸಚಿವ ಮೌರೋ ವಿಯೇರಾ, ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವರೋವ್ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ದ್ವಿಪಕ್ಷೀಯ ಬಾಂಧವ್ಯ ಚರ್ಚೆ: ಈ ಮಧ್ಯೆ, ಜೈಶಂಕರ್ ಅವರು ಬ್ರೆಜಿಲ್, ಸೌದಿ ಅರೇಬಿಯ, ಇರಾನ್‌ನ ವಿದೇಶಾಂಗ ಸಚಿವರನ್ನು ಶುಕ್ರವಾರ ಭೇಟಿಯಾಗಿದ್ದು, ಆಯಾ ದೇಶಗಳೊಡನೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತಂತೆ ಚರ್ಚಿಸಿದರು.

ಭೇಟಿ ವೇಳೆ ಪರಸ್ಪರ ಸಹಕಾರ ಮುಂದುವರಿಕೆ, ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಗೊಳಿಸುವ ಕುರಿತು ಚರ್ಚಿಸಲಾಯಿತು ಎಂದು ಜೈಶಂಕರ್ ಅವರು ಟ್ವೀಟ್ ಮಾಡಿದ್ದಾರೆ.

ಮಣಿಪುರ: ಮತ್ತೆ ಹಿಂಸಾಚಾರ 15 ಮಂದಿಗೆ ಗಾಯ

ಇಂಫಾಲ್ (ಪಿಟಿಐ): 'ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಶಂಕಿತ ಕುಕಿ ಉಗ್ರಗಾಮಿಗಳು ಅತ್ಯಾಧುನಿಕ ಶಸ್ತ್ರಾಸ್ತ್ರ ಹಾಗೂ ಬಾಂಬ್‌ಗಳ ಬಳಸಿ ಶುಕ್ರವಾರ ರಾತ್ರಿ ದಾಳಿ ನಡೆಸಿದ್ದು, ಕನಿಷ್ಠ 15 ಮಂದಿ ಗಾಯಗೊಂಡಿದ್ದಾರೆ' ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

'ಶಂಕಿತ ಉಗ್ರರು ಹತ್ತಿರದ ಬೆಟ್ಟಗಳಲ್ಲಿ ತಪ್ಪಿಸಿಕೊಂಡಿದ್ದಾರೆ' ಎಂದು ಹೇಳಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎನ್ನಲಾಗಿದೆ.

ಹುಲಿ ನಾಡಿನಲ್ಲಿ ವಿಶ್ವಾಸ

ಒಂದನೇ ಪುಟದಿಂದ...

ಕಾಳಿ ಹುಲಿ ಸಂರಕ್ಷಿತಾರಣ್ಯ ವಿಭಾಗದ ಅರಣ್ಯ ಇಲಾಖೆಯ ಅಧಿಕಾರಿಗಳು ಕಾತೇಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪರಿಸರ ಅಭಿವೃದ್ಧಿ ಸಮಿತಿ (ಇ.ಡಿ.ಸಿ.) ಬಲಪಡಿಸಲು ಮುಂದಾಗಿದ್ದಾರೆ. ಸಮಿತಿಯ ಕಾರ್ಯ-ಚಟುವಟಿಕೆಯ ಮೂಲಕ ಜನರ ಜೀವನ ಮಟ್ಟ ಸುಧಾರಿಸಲು ಹಲವು ಯೋಜನೆ ಹಾಕಿಕೊಂಡಿದ್ದಾರೆ. ಅವುಗಳನ್ನು ಕಾರ್ಯರೂಪಕ್ಕೆ ತರುವ ಮೊದಲ ಹೆಜ್ಜೆಯಾಗಿ ಜನರ ವಿಶ್ವಾಸ ಗಳಿಸಲು ಮುಂದಡಿ ಇಡಲಾಗಿದೆ.

ಮಹತ್ವಾಕಾಂಕ್ಷಿ ಮನಸ್ಸಿನ ಯುವಕರ ಸಹಭಾಗಿತ್ವದಲ್ಲಿ ವನ್ಯಜೀವಿ ಸಂರಕ್ಷಣೆ (SWAYAM) ಎಂಬ ಪರಿಕಲ್ಪನೆಯನ್ನು ರೂಪಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು ಈ ಮೂಲಕ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದುಕೊಂಡು ಅವರ ಜೀವನ ಸುಧಾರಣೆಯ ಕೆಲಸಕ್ಕೆ ಕೈ ಹಾಕಿದ್ದಾರೆ.

ಆರ್ಥಿಕವಾಗಿ, ಸಾಮಾಜಿಕವಾಗಿ ತೀರಾ ಹಿಂದುಳಿದಿರುವ ಕುಣಬಿ ಸಮುದಾಯದ ಜನರೇ ಹೆಚ್ಚಿರುವ ಕಾತೇಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 4,500 ರಷ್ಟು ಜನಸಂಖ್ಯೆ ಇದೆ. ಈ ಪೈಕಿ ಯುವ ತಲೆಮಾರಿನ ಬಹುತೇಕ ಮಂದಿ ಉದ್ಯೋಗದ ಸಲುವಾಗಿ ನೆರೆಯ ಗೋವಾ ರಾಜ್ಯ ಅಥವಾ ರಾಜ್ಯದ ದೊಡ್ಡ ನಗರಗಳಿಗೆ ವಲಸೆ ಹೋಗುವ ಅನಿವಾರ್ಯತೆಯಲ್ಲಿದ್ದಾರೆ.

‘ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯ ಭಾಗವಾಗಿಯೇ ಹುಲಿ ಸಂರಕ್ಷಣೆ ಫೌಂಡೇಶನ್ ಕೂಡ ಕಾರ್ಯನಿರ್ವಹಿಸುತ್ತ-ದೆ. ಕಾಳಿ ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಯಲ್ಲಿ ದಾಂಡೇಲಿ ಅಣಸಿ ಟೈಗರ್ ಕನ್ಸರ್ವೇಶನ್ ಫೌಂಡೇಶನ್ (ಡಿಎಟಿಸಿಎಫ್) ಕಾರ್ಯನಿ-ರ್ವಹಿಸುತ್ತಿದ್ದು, ಅದರಡಿಯಲ್ಲಿ ಪರಿಸರ ಅಭಿವೃದ್ಧಿ ಸಮಿತಿಗಳನ್ನು ಬಲಪಡಿಸುವ ಕೆಲಸ ಮಾಡುತ್ತಿದ್ದೇವೆ’ ಎನ್ನುತ್ತಾರೆ ಕುಂಬಾರವಾಡಾ ಎಸಿಎಫ್ ಅಮರಾಕ್ಷರ ವಿ.ಎಂ.

‘ಪರಿಸರ ಅಭಿವೃದ್ಧಿ ಸಮಿತಿಗಳ ಮೂಲಕವೇ ಕಾತೇಲಿ ಭಾಗದಲ್ಲಿ ಜನರ ಜೀವನಮಟ್ಟ ಸುಧಾರಣೆಯ ಯೋಜನೆಗಳು ಜಾರಿಗೊಳ್ಳಲಿವೆ. ಸ್ವಉದ್ಯೋಗದ ಮೂಲಕ ಜನರು ತಯಾರಿಸುವ ಸಿದ್ಧ ಉತ್ಪನ್ನಗಳನ್ನು ಸ್ಥಳೀಯವಾಗಿ ಮತ್ತು ಪ್ರವಾಸಿ ತಾಣಗಳಲ್ಲಿ ಮಾರಾಟ ಮಾಡಲಾಗುವುದು. ಜೇನುತುಪ್ಪ, ನಾರಿನ ಉತ್ಪನ್ನಗಳು ಕೆ.ಟಿ.ಆರ್. (ಕಾಳಿ ಟೈಗರ್ ರಿಸರ್ವ್) ಬ್ರ್ಯಾಂಡ್ ಅಡಿಯಲ್ಲಿ ಮಾರುಕಟ್ಟೆಗೆ ಪರಿಚಯಗೊಳ್ಳಲಿವೆ’ ಎಂದರು.

ವನ್ಯಜೀವಿಗಳ ಸಂರಕ್ಷಣೆಗಾಗಿ ಹುಲಿ ಸಂರ-ಕ್ಷಿತಾರಣ್ಯ ಪ್ರದೇಶದಲ್ಲಿ ಜಾರಿಯಲ್ಲಿರುವ ಕಠಿಣ ನಿಯಮಾವಳಿ ಜನ ಮತ್ತು ಅರಣ್ಯ ಇಲಾಖೆಯ ನಡುವೆ ಕಂದಕವನ್ನೇ ಸೃಷ್ಟಿಸಿದೆ. ಸಾರ್ವಜನಿಕ ಸಹಭಾಗಿತ್ವದಲ್ಲಿ ಅಭಿವೃದ್ಧಿ ಎಂಬುದು ಘೋಷಣೆಗೆ ಸೀಮಿತ ಎಂಬ ಆರೋಪ ಇತ್ತು. ಇಂತಹ ಅಪವಾದಗಳಿಂದ ಮುಕ್ತವಾಗಲು ಕುಂಬಾರವಾಡಾದಲ್ಲಿ ಅರಣ್ಯ ಇಲಾಖೆ ಹಲವಾರು ಪ್ರಯೋಗಗಳನ್ನು ಕೈಗೊಂಡಿದೆ.



ಜೊಯಿಡಾ ತಾಲ್ಲೂಕಿನ ಕುಂಬಾರವಾಡಾ ವ್ಯಾಪ್ತಿಯ ಗ್ರಾಮಸ್ಥರಿಗೆ ತಜ್ಞರು ಜೇನು ಕೃಷಿ ತರಬೇತಿ ನೀಡುತ್ತಿರುವುದು.

ಮಣ್ಣಿನ ಕಲಾಕೃತಿಗೂ ಬ್ರ್ಯಾಂಡ್

ಕುಂಬಾರವಾಡಾದಲ್ಲಿ ಪಾರಂಪರಿಕ ಕುಂಬಾರಿಕೆ ವೃತ್ತಿ ನಡೆಸಿಕೊಂಡು ಬಂದಿದ್ದ ಕೆಲವು ಕುಂಬಾರರ ಕುಟುಂಬಗಳಿವೆ. ಒಂದು ಕಾಲದಲ್ಲಿ ಕುಂಬಾರವಾಡಾದಲ್ಲಿ ಮಣ್ಣಿನ ಕಲಾಕೃತಿ, ಪಾತ್ರೆಗಳ ತಯಾರಿಕೆ ಉತ್ತುಂಗದಲ್ಲಿತ್ತು. ಕುಂಬಾರಿಕೆ ವೃತ್ತಿ ಅವಲಂಭಿಸಿದ್ದ ಹಲವು ಕುಟುಂಬಗಳಿ-ದ್ದವು. ಹೀಗಾಗಿಯೆ ‘ಕುಂಬಾರವಾಡಾ’ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

ಈಗಲೂ ಗ್ರಾಮಕ್ಕೆ ಹಳೆಯ ಮೆರಗು ತಂದುಕೊಡಬೇಕು ಎಂಬುದು ಅರಣ್ಯ ಇಲಾಖೆಯ ಯೋಜನೆ. ‘ಕುಂಬಾರಿಕೆ ವೃತ್ತಿ ಅವಲಂಭಿಸಿರುವ ಕುಟುಂಬಗಳಿಗೆ ಮಣ್ಣಿನ ಪಾತ್ರೆ, ಕರಕುಶಲ ಸಾಮಗ್ರಿ ತಯಾರಿಸಲು ವೇದಿಕೆ ಸೃಷ್ಟಿಸಿಕೊಡಲಾಗುತ್ತದೆ. ಪಾರಂಪರಿಕ ಕಲಾಕಾರರಿಂದ ಉಳಿದ ಸಮುದಾಯಗಳ ಆಸಕ್ತರಿಗೂ ಮಣ್ಣಿನ ಕಲಾಕೃತಿ, ಪಾತ್ರೆ ತಯಾರಿಕೆ ತರಬೇತಿ ಒದಗಿಸುತ್ತೇವೆ. ಈಗಾಗಲೇ ಸಮುದಾಯದ ಪ್ರಮುಖರನ್ನು ಕರೆದು ಸಭೆಯನ್ನೂ ನಡೆಸಿದ್ದೇವೆ. ಮಣ್ಣಿನಿಂದ ತಯಾರಾಗುವ ಪರಿಸರ ಪೂರಕ ಸಾಮಗ್ರಿಗಳನ್ನು ಮಾರುಕಟ್ಟೆಗೆ ತಂದು ಪ್ರವಾಸಿಗರನ್ನು ಸೆಳೆಯುವುದು ಭವಿಷ್ಯದ ಯೋಜನೆಯ ಸ್ವರೂಪ’ ಎನ್ನುತ್ತಾರೆ ಎಸಿಎಫ್ ಅಮರಾಕ್ಷರ ವಿ.ಎಂ.

ಅರಣ್ಯ ಸಂರಕ್ಷಣೆಯಲ್ಲಿ ಸ್ಥಳೀಯರ ಸಹಭಾಗಿತ್ವವೂ ಮುಖ್ಯ. ಜನರ ವಿಶ್ವಾಸ ಗಳಿಸುವ ಜತೆಗೆ ಜೀವನಮಟ್ಟ ಸುಧಾರಿಸುವ ಸಲುವಾಗಿ ‘ಸ್ವಯಂ’ ಎಂಬ ಕಾರ್ಯಕ್ರಮ ರೂಪಿಸಲಾಗಿದೆ.
ಅಮರಾಕ್ಷರ ವಿ.ಎಂ.
ಎ.ಸಿ.ಎಫ್. ಕುಂಬಾರವಾಡಾ

‘ಹುಲಿ ಸಂರಕ್ಷಿತಾರಣ್ಯದ ಹೃದಯ ಭಾಗದಂತಿರುವ ಕಾತೇಲಿಯಲ್ಲಿ ಅಭಿವೃದ್ಧಿ ಯೋಜನೆಯೊಂದನ್ನು ಜಾರಿಗೆ ತರಬೇಕಾದರೆ ಹಲವು ಬಾರಿ ಯೋಚಿಸಬೇಕಾಗುತ್ತದೆ. ಜನರ ‘ವಿಶ್ವಾಸ’ ಗಳಿಸಿದರೆ ಯೋಜನೆಯು ಯಶಸ್ಸಿನ ಮೊದಲ ಮೆಟ್ಟಿಲು ಹತ್ತಿದಂತೆ’ ಎನ್ನುವರು ಕೆ.ಟಿ. ಆರ್.ನ ಡಿಸಿಎಫ್ ಮರಿಯಾ ಕ್ರಿಸ್ತರಾಜು.

‘ಕೆ.ಟಿ.ಆರ್. ವ್ಯಾಪ್ತಿಯ ಪಣಸೋಲಿಯಲ್ಲಿ ಜಂಗಲ್ ಸಫಾರಿ ಯೋಜನೆಯನ್ನು ಸ್ಥಳೀಯ ಪರಿಸರ ಅಭಿವೃದ್ಧಿ ಸಮಿತಿ ಜತೆ ಕೈಜೋಡಿಸಿ ನಡೆಸಲಾಗುತ್ತಿದೆ. ಇದರಿಂದ ಸ್ಥಳೀಯರಿಗೆ ಉದ್ಯೋಗ ಒದಗಿದೆ. ಆದರೆ ಕಾತೇಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಚಟುವಟಿಕೆ ಇಲ್ಲ. ಆದರೆ ಈ ಭಾಗದ ಮೂಲಕ ಪ್ರವಾಸಿಗರು ದೊಡ್ಡ ಸಂಖ್ಯೆಯಲ್ಲಿ ಹಾದುಹೋಗುತ್ತಾರೆ. ಇದಕ್ಕಾಗಿಯೇ ಪ್ರವಾ-ಸೋದ್ಯಮಕ್ಕೆ ಪೂರಕ ಚಟುವಟಿಕೆ ನಡೆಸಲು ಮುಂದಾಗಿದ್ದೇವೆ’ ಎಂದು ಯೋಜನೆ ಆರಂಭಿಸಲು ಪೂರಕವಾದ ಅಂಶಗಳನ್ನು ಎಸಿಎಫ್ ಅಮರಾಕ್ಷರ ಅವರು ವಿವರಿಸಿದರು.

‘ನೈಸರ್ಗಿಕವಾದ ಜೇನುತುಪ್ಪ ಹೇರಳ ಪ್ರಮಾಣದಲ್ಲಿ ಈ ಭಾಗದಲ್ಲಿ ದೊರೆಯುತ್ತವೆ. ಕಾಡಿನ ಮರಗಳಲ್ಲಿ ಕಟ್ಟಿಕೊಂಡ ಜೇನುಗೂಡುಗಳಿಂದ ಜೇನುತುಪ್ಪ ಸಂಗ್ರಹಣೆ ಬದಲು ‘ಅಡವಿ ಝೇಂಕಾರ’ ಎಂಬ ಕಾರ್ಯಕ್ರಮ ರೂಪಿಸಿ ಅದರಡಿ ಜೇನು ಸಾಕಣೆ ತರಬೇತಿ ನೀಡಿದ್ದೇವೆ. ಪ್ರತಿ ಕುಟುಂಬ ವರ್ಷಕ್ಕೆ ಕನಿಷ್ಠ 1 ಕ್ವಿಂಟಲ್‌ನಷ್ಟು ಜೇನುತುಪ್ಪ ಉತ್ಪಾದಿಸಿದರೂ ಈ ಭಾಗದಿಂದ 2 ಟನ್‌ಗೂ ಹೆಚ್ಚು ಶುದ್ಧ ಜೇನುತುಪ್ಪ ಸಂಗ್ರಹಿಸುವ ಗುರಿ ಇದೆ. ಅವುಗಳನ್ನು ಕೆ.ಟಿ.ಆರ್. ಬ್ರ್ಯಾಂಡ್ ಅಡಿಯಲ್ಲಿ ಮಾರುಕಟ್ಟೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಮೊದಲ ಹಂತವಾಗಿ ಈ ಭಾಗದ 80 ಕುಟುಂಬಗಳಿಗೆ ನೂರು ಜೇನುಪೆಟ್ಟಿಗೆಗಳ-ನ್ನೂ ಉಚಿತವಾಗಿ ಕೊಡಲಾಗಿದೆ’ ಎಂದರು.

‘ಕೇರಳದ ಪೆರಿಯಾರ್ ಹುಲಿ ಸಂರಕ್ಷಿತಾ-ರಣ್ಯ ವ್ಯಾಪ್ತಿಯಲ್ಲಿ ಸಿಗುವ ಜೇನುತುಪ್ಪವನ್ನು ‘ಪೆರಿಯಾರ್ ಟೈಗರ್ ರಿಸರ್ವ್ ಬ್ರ್ಯಾಂಡ್’ ಮೂಲಕ ಮಾರಾಟ ನಡೆಸಿ ಯಶಸ್ಸು ಕಾಣಲಾಗಿದೆ. ಇದೇ ನಮಗೆ ಮಾದರಿಯಾಗಿದೆ’ ಎಂದು ಹೇಳುವುದನ್ನು ಅವರು ಮರೆಯಲಿಲ್ಲ.

‘ಇಲ್ಲಿನ ಅರಣ್ಯ ಪ್ರದೇಶದಲ್ಲಿ ಅಂಟವಾಳ, ನೇರಳೆ ಸೇರಿದಂತೆ ಮಕರಂದ ಹೀರಲು ಪೂರಕವಾಗಿರುವ ಸಸ್ಯ ಸಂಪತ್ತು ಹೆಚ್ಚಿದೆ. ಇವುಗಳಿಂದ ಉತ್ಪಾದನೆಯಾಗುವ ಜೇನುತುಪ್ಪವೂ ಗುಣಮಟ್ಟ ಮತ್ತು ಔಷಧೀಯ ಗುಣಗಳಿಂದ ಕೂಡಿರುತ್ತದೆ. ಕಲಬೆರಕೆ ಇಲ್ಲದ ಈ ರೀತಿಯ ಜೇನುತುಪ್ಪಕ್ಕೆ ಒಳ್ಳೆಯ ದರವೂ ಇದೆ. ಇದು ಸ್ಥಳೀಯ ಜನರಿಗೆ ಉತ್ತಮ ಆದಾಯ ತಂದುಕೊಡಬಲ್ಲದು’ ಎಂದು ರವಿ ಡೇರೆಕರ್ ಹೇಳುತ್ತಾರೆ.

ಕುಂಬಾರವಾಡಾ ಗ್ರಾಮ ಪಂಚಾಯ್ತಿಯಲ್ಲಿ 25ರಷ್ಟು ಮಜಿರೆಗಳಿದ್ದು (ಹಳ್ಳಿಗಳಿಗಿಂತ ಚಿಕ್ಕದಾಗಿರುವ ಮನೆಗಳ ಸಮೂಹಕ್ಕೆ ಕಂದಾಯ ಇಲಾಖೆಯ ಪ್ರಕಾರ ಮಜಿರೆ ಎಂದು ಕರೆಯಲಾಗುತ್ತದೆ) ಅಲ್ಲಿನ ಯುವಕ, ಯುವತಿಯರು ಓದು ಮೊಟಕುಗೊಳಿಸಿ ಕೆಲಸಕ್ಕಾಗಿ ಗೋವಾ ರಾಜ್ಯಕ್ಕೆ ವಲಸೆ ಹೋಗುತ್ತಾರೆ. ಅಲ್ಲಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇಂತಹ ವಲಸೆ ತಡೆದು ಸ್ಥಳೀಯವಾಗಿಯೇ ಉದ್ಯೋಗ ಸೃಷ್ಟಿಸಲು ಅರಣ್ಯ ಇಲಾಖೆ ಬೆಂಗಳೂರಿನ ನಾರು ಅಭಿವೃದ್ಧಿ ಮಂಡಳಿ ಜತೆ ಮಾತುಕತೆ ನಡೆಸಿದೆ. ನಾರಿನ ಕಚ್ಚಾವಸ್ತುಗಳನ್ನು ಪೂರೈಸಿ ಸ್ಥಳೀಯರಿಂದ ಸಿದ್ಧವಸ್ತು ತಯಾರಿಸಿ ಅವುಗಳನ್ನು ಮಾರುಕಟ್ಟೆ ಮಾಡುವ ಪ್ರಕ್ರಿಯೆಗಳು ನಡೆದಿವೆ.



ಕೆ.ಟಿ.ಆರ್. ವ್ಯಾಪ್ತಿಯಲ್ಲಿ ತೀರಾ ಹಿಂದುಳಿದ ಗ್ರಾಮಗಳನ್ನು ಒಳಗೊಂಡಿರುವ ಕಾತೇಲಿ ಭಾಗದಲ್ಲಿ ಅರಣ್ಯ ಇಲಾಖೆಯ ಸುಧಾರಿತ ಯೋಜನೆಗಳು ಜನರ ಜೀವನಮಟ್ಟ ಸುಧಾರಿಸುವ ವಿಶ್ವಾಸ ಮೂಡಿದೆ. ಜನರಿಗೆ ಯೋಜನೆ ವಿವರಿಸಿ ವಿಶ್ವಾಸಕ್ಕೆ ಪಡೆಯುತ್ತಿದ್ದೇವೆ.
ಸುಭೇಂದ್ರ ಕಾಮತ್
ಕಾತೇಲಿ ಗ್ರಾಮ ಪಂಚಾಯ್ತಿ ಸದಸ್ಯ



ಅರಣ್ಯ ಇಲಾಖೆಯಿಂದ ಜೇನು ಕೃಷಿ ತರಬೇತಿ ನೀಡಲಾಗಿದೆ. ನಾರಿನ ಉತ್ಪನ್ನದ ತರಬೇತಿಯನ್ನೂ ಶೀಘ್ರ ನೀಡುವುದಾಗಿ ತಿಳಿಸಿದ್ದಾರೆ. ಜೀವನೋಪಾಯಕ್ಕೆ ಒಂದಷ್ಟು ಆದಾಯ ದೊರೆಯುವ ನಂಬಿಕೆ ಇದೆ.
ಶಾಂತಾ ಮಿರಾಶಿ, ಮೈನೋಳ ಗ್ರಾಮಸ್ಥ

ಇದಕ್ಕೆ ಪೂರಕವಾಗಿ ಕುಂಬಾರವಾಡಾ-ದಲ್ಲಿ ತರಬೇತಿ ನೀಡಲು ಕಟ್ಟಡವೊಂದನ್ನು ನಿರ್ಮಿಸಲಾಗುತ್ತಿದೆ. ಬಳಿಕ ನಾರಿನ ಉತ್ಪನ್ನ ಸಿದ್ಧಪಡಿಸುವ ಘಟಕವನ್ನು ಆರಂಭಿಸುವ ಯೋಜನೆ ಇದಾಗಿದೆ. ಈ ಉತ್ಪನ್ನವನ್ನೂ ಕೆ.ಟಿ. ಆರ್. ಬ್ರ್ಯಾಂಡ್ ಅಡಿ ಮಾರುಕಟ್ಟೆಗೆ ಪರಿ-ಚಯಿಸುತ್ತೇವೆ ಎನ್ನುವುದು ಅರಣ್ಯ ಇಲಾಖೆ ಅಧಿಕಾರಿಗಳ ಭರವಸೆ.

‘ಈ ಭಾಗದ 200ಕ್ಕೂ ಹೆಚ್ಚು ಜನರು ಗೋವಾ ರಾಜ್ಯಕ್ಕೆ ಕೆಲಸಕ್ಕೆ ತೆರಳುತ್ತಿದ್ದಾರೆ. ಅಲ್ಲಿ ಸಿಗುವ ಅಲ್ಪ ವೇತನದಲ್ಲಿ ಜೀವನ ನಿರ್ವಹಿ-ಸುತ್ತಾರೆ. ವಲಸೆ ತಡೆದು ಸ್ಥಳೀಯವಾಗಿಯೇ ಆದಾಯ ಗಳಿಕೆಗೆ ದಾರಿಮಾಡಿಕೊಡಲು ಈ ನಾರಿನ ಉತ್ಪನ್ನ ಸಿದ್ಧಪಡಿಸುವ ಪ್ರಯತ್ನ ನಡೆಯುತ್ತಿದೆ. ಜೇನು, ನಾರಿನ ಉತ್ಪನ್ನಗಳಿಂದ ಇಲ್ಲಿನ ಕುಟುಂಬವೊಂದು ತಿಂಗಳಿಗೆ ಕನಿಷ್ಠ ₹6 ರಿಂದ 10 ಸಾವಿರಕ್ಕಿಂತ ಹೆಚ್ಚು ಆದಾಯ ಗಳಿಸುವಂತೆ ಮಾಡುವುದು ಯೋಜನೆಯ ಉದ್ದೇಶ’ ಎಂದು ಎಸಿಎಫ್ ಅಮರಾಕ್ಷರ ವಿವರಿಸುತ್ತಾರೆ.

‘ಕುಂಬಾರವಾಡಾದಲ್ಲಿ ಪ್ರವಾಸೋದ್ಯಮ ಚಟುವಟಿಕೆ ಅಷ್ಟಾಗಿ ಇಲ್ಲದಿದ್ದರೂ ಪ್ರವಾಸಿಗರ ಓಡಾಟ ಈ ಭಾಗದಲ್ಲಿ ಹೆಚ್ಚಿದೆ. ಸಮೀಪದ ನಾಗೋಡದಲ್ಲಿ ದೋಣಿ ವಿಹಾರ ಚಟುವಟಿಕೆ ಇದೆ. ಸ್ಥಳೀಯವಾಗಿ ತಯಾರಾಗುವ ಜೇನುತುಪ್ಪ, ನಾರಿನ ಉತ್ಪನ್ನ ಸೇರಿದಂತೆ ನೈಸರ್ಗಿಕ ಉತ್ಪನ್ನಗಳ ಮಾರುಕಟ್ಟೆಯ ಮೂಲಕವೇ ಕುಂಬಾರವಾಡಾಕ್ಕೆ ಪ್ರವಾಸಿಗ-ರನ್ನು ಸೆಳೆಯುವುದು ಸಾಧ್ಯವಿದೆ’ ಎನ್ನುತ್ತಾರೆ ಕಾಳಿ ರೈತ ಉತ್ಪಾದಕ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಕಾತೇಲಿ ಗ್ರಾಮ ಪಂಚಾಯ್ತಿ ಸದಸ್ಯ ಸುಭೇಂದ್ರ ಕಾಮತ್.

‘ಮಧ್ಯಪ್ರದೇಶದ ಭೋಪಾಲ್‌ನ ಐಐಎಫ್ಎಂ (ಭಾರತೀಯ ಅರಣ್ಯ ನಿರ್ವಹಣಾ ಸಂಸ್ಥೆ)ನಿಂದ ಇಬ್ಬರು ಸಂಶೋಧನಾರ್ಥಿಗಳು ಕಾತೇಲಿ ಭಾಗದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಅಧ್ಯಯನ ನಡೆಸಿದ್ದರು. ಅವರು ನಡೆಸಿದ ಅಧ್ಯಯನದ ವರದಿಯನ್ನು ಕೆ.ಟಿ. ಆರ್.ಗೆ ಸಲ್ಲಿಸಿದ್ದಾರೆ. ಇದನ್ನು ಆಧರಿಸಿ ಜನರ ಜೀವನ ಮಟ್ಟ ಸುಧಾರಿಸಲು ಕೈಗೊಳ್ಳಬಹು-ದಾದ ಮತ್ತಷ್ಟು ಸುಧಾರಣೆಗಳನ್ನು ಹಂತ ಹಂತವಾಗಿ ತರುತ್ತೇವೆ’ ಎಂದು ವಾಗ್ದಾನ ನೀಡಿದರು.

‘ಕಾಳಿ ಹುಲಿ ಸಂರಕ್ಷಿತಾರಣ್ಯ ರಚನೆಗೂ ಮುನ್ನ ಅರಣ್ಯ ಇಲಾಖೆ ಸ್ಥಳೀಯರಿಗೆ ಬಿದಿರು ಪೂರೈಸಿ ಅದರಿಂದ ಸಿದ್ಧಪಡಿಸಲಾದ ಉತ್ಪನ್ನ ಖರೀದಿಸಿ ಉಳವಿ ಭಾಗದಲ್ಲಿ ಮಾರಾಟ ನಡೆಸುವ ಚಟುವಟಿಕೆ ನಡೆಸುತ್ತಿತ್ತು. ಇದರಿಂದ ಸ್ಥಳೀಯರಿಗೆ ಸ್ವಲ್ಪಮಟ್ಟಿಗಿನ ಆದಾಯವೂ ಸಿಗುತ್ತಿತ್ತು. ಆದರೆ ಕೆ.ಟಿ.ಆರ್. ರಚನೆ ನಂತರ ಅಂತಹ ಪ್ರಕ್ರಿಯೆ ಸ್ಥಗಿತಗೊಂಡಿದೆ. ಈಗ ಅವರು ರೂಪಿಸುತ್ತಿರುವ ಯೋಜನೆಗಳು ಇದೇ ಸಾಲಿಗೆ ಸೇರಬಾರದು’ ಎಂದು ಕುಂಬಾರವಾಡಾ ಗ್ರಾಮಸ್ಥರು ಹೇಳುತ್ತಾರೆ.

ಕಾಡಿನ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ: ಕುಂಬಾರಾವಾಡದಲ್ಲಿರುವ ಬ್ರಿಟಿಷ್ ಕಾಲದ ಕಟ್ಟಡವನ್ನು ನವೀಕರಣಗೊಳಿಸುತ್ತಿರುವ ಅರಣ್ಯ ಇಲಾಖೆ ಇಲ್ಲಿ ಡಿಜಿಟಲ್ ಗ್ರಂಥಾಲಯ, ಕಂಪ್ಯೂಟರ್ ತರಬೇತಿ ಕೇಂದ್ರ ಆರಂಭಿಸಲು ಮುಂದಾಗಿದೆ. ಪ್ರೌಢಶಿಕ್ಷಣ, ಕಾಲೇಜು ಶಿಕ್ಷಣ ಪೂರೈಸಿದ ಸ್ಥಳೀಯರಿಗೆ ಕಂಪ್ಯೂಟರ್ ಶಿಕ್ಷಣ ಒದಗಿಸಲು ತಯಾರಿ ನಡೆದಿದೆ.

ಅರಣ್ಯದ ಕುರಿತು ಇಲ್ಲಿನ ಮಕ್ಕಳಲ್ಲಿಯೂ ಉತ್ತಮ ಜ್ಞಾನವಿದೆ. ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಅದಕ್ಕೆ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ. ಅರಣ್ಯ ಇಲಾಖೆಯ ಹುದ್ದೆಯೂ ಸೇರಿದಂತೆ ವಿವಿಧ ನೇಮಕಾತಿಗೆ ನಡೆಯುವ ಪರೀಕ್ಷೆಗೆ ಕುಣಬಿ, ಇನ್ನಿತರ ಸಮುದಾಯಗಳ ಮಕ್ಕಳನ್ನು ಅಣಿಗೊಳಿಸಬೇಕು ಎಂಬುದೇ ಈ ಕೇಂದ್ರ ಸ್ಥಾಪನೆಯ ಉದ್ದೇಶ ಎಂಬುದು ಅರಣ್ಯ ಇಲಾಖೆ ಅಧಿಕಾರಿಗಳ ಹೇಳಿಕೆ. ಈ ಕೇಂದ್ರವೂ ದಾಂಡೇಲಿ ಅಣಸಿ ಟೈಗರ್ ಕನ್ಸರ್ವೇಶನ್ ಫೌಂಡೇಶನ್‌ನ ಆರ್ಥಿಕ ನೆರವಿನಿಂದಲೇ ಸ್ಥಾಪ-ನೆಗೊಳ್ಳುತ್ತಿದೆ.


‘ಕೆ.ಟಿ.ಆರ್. ವ್ಯಾಪ್ತಿಯಲ್ಲಿ ಬಿದಿರು, ಬೆತ್ತ ಬೆಳೆಸಲು ಅವಕಾಶ ಇಲ್ಲ. ಹೀಗಾಗಿ ಬಿದಿರಿನ ಉತ್ಪನ್ನಕ್ಕೆ ಪ್ರೋತ್ಸಾಹಿಸುವ ಯೋಜನೆ ಕೈಬಿಡಲಾಗಿತ್ತು. ಈಗ ಕೈಗೊಂಡಿರುವ ಯೋಜನೆಗಳು ಪರಿಸರ ಉಳಿವಿನ ಜತೆಗೆ ಸ್ವಯಂ ಉದ್ಯೋಗ ಸೃಷ್ಟಿಗೆ ಪೂರಕವಾಗಿರುವ ಕಾರಣ ಅವುಗಳನ್ನು ಕೈಬಿಡುವ ಪ್ರಶ್ನೆ ಇಲ್ಲ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದರು.

ಒಟ್ಟಾರೆ ಕೆ.ಟಿ.ಆರ್ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ಮೂಲಕ ನಡೆಯುತ್ತಿರುವ ಸ್ಥಳೀಯರ ಆರ್ಥಿಕ ಸ್ಥಿತಿ ಸುಧಾರಿಸುವ ಪ್ರಗತಿಪರ ಪ್ರಯತ್ನ ಗ್ರಾಮಸ್ಥರಲ್ಲಿ ಆಶಾಭಾವನೆ ಮೂಡಿಸಿದ್ದು, ಇಲಾಖೆಯ ಬಗ್ಗೆ ಅರಣ್ಯದಲ್ಲಿರುವ ನಿವಾಸಿಗಳಲ್ಲಿ ನಕಾರಾತ್ಮಕ ಧೋರಣೆ ಕಡಿಮೆ ಮಾಡಲು ಸಹಕಾರಿಯಾಗುತ್ತಿದೆ.



ಕುಂಬಾರವಾಡಾ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರ ಜತೆಗೆ ಅರಣ್ಯ ಇಲಾಖೆ ರೂಪಿಸಿರುವ ಯೋಜನೆಗಳ ಬಗ್ಗೆ ಎ.ಸಿ.ಎಫ್. ಅಮರಾಕ್ಷರ ವಿ.ಎಂ. ವಿವರಿಸಿದರು.

ಪ್ಲಾಸ್ಟಿಕ್ ಕಸ ನಿಯಂತ್ರಣಕ್ಕೆ ವಿಲೇವಾರಿ ಘಟಕ



ಜೊಯಿಡಾ ತಾಲ್ಲೂಕಿನ ಕುಂಬಾರವಾಡಾದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಇಲ್ಲದ ಪರಿಣಾಮ ಸದ್ಯ ತಾತ್ಕಾಲಿಕ ಕಟ್ಟಡವೊಂದರಲ್ಲಿ ಪ್ಲಾಸ್ಟಿಕ್ ಕಸ ಸಂಗ್ರಹಿಸಿ ಇಡಲಾಗಿತ್ತು.

ಸದಾಶಿವಗಡ–ಔರಾದ್ ರಾಜ್ಯ ಹೆದ್ದಾರಿ ಕಾತೇಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹಾದುಹೋಗುತ್ತದೆ. ಇದೇ ಮಾರ್ಗದಲ್ಲಿ ದಾಂಡೇಲಿ, ಉಳವಿ, ಜೊಯಿಡಾಕ್ಕೆ ತೆರಳುವ ಪ್ರವಾಸಿಗರ ಓಡಾಟ ಹೆಚ್ಚಿದೆ. ಪ್ರವಾಸಿಗರು, ಸ್ಥಳೀಯರು ಎಸೆಯುವ ಕಸಗಳು, ಅದರಲ್ಲೂ ಚಿಪ್ಸ್, ಇನ್ನಿತರ ತಿನಿಸುಗಳ ಪೊಟ್ಟಣಗಳು ರಸ್ತೆಯ ಬದಿಗಳಲ್ಲಿ ರಾಶಿ ರಾಶಿ ಬೀಳುತ್ತಿವೆ. ಒಂದು ಅಂದಾಜಿನ ಪ್ರಕಾರ ಇಲ್ಲಿನ ಪ್ರತಿ ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಸರಾಸರಿ 2 ಕೆ.ಜಿ.ಯಷ್ಟು ಪ್ಲಾಸ್ಟಿಕ್ ಕಸ ಸಿಗುತ್ತಿವೆ.

‘ಮಸಾಲೆ, ಉಪ್ಪಿನ ಅಂಶಯುಕ್ತ ತಿನಿಸುಗಳನ್ನು ತಿಂದು ಜನರು ಬಿಸಾಡುವ ಪ್ಲಾಸ್ಟಿಕ್ ಪೊಟ್ಟಣಗಳ ವಾಸನೆಗೆ ಇಲ್ಲಿನ ಸಾಂಬಾರ ಕಡವೆ, ಜಿಂಕೆಗಳು ಆಕರ್ಷಣೆಗೊಳಗಾಗುತ್ತ-ವೆ. ಅವುಗಳನ್ನು ತಿನ್ನುತ್ತವೆ. ಇದರಿಂದ ಅವುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಹೆಚ್ಚುತ್ತಿದೆ. ಹುಲಿಗಳಿಗೆ ಮುಖ್ಯ ಆಹಾರವಾಗಿರುವ ಕಡವೆ, ಜಿಂಕೆಗಳ ಪ್ರಮಾಣ ಕುಸಿತಗೊಳ್ಳುತ್ತಿವೆ. ಹೀಗಾಗಿ ಪ್ಲಾಸ್ಟಿಕ್ ಕಸ ಸಂಗ್ರಹಣೆ ಮತ್ತು ವಿಲೇವಾರಿಗೆ ಆದ್ಯತೆ ನೀಡಲಾಗುತ್ತಿದೆ’ ಎಂಬುದು ಅಮರಾಕ್ಷರ ಹೇಳುವ ಮಾತು.

‘ಗ್ರಾಮ ಪಂಚಾಯ್ತಿಗೆ ಘನ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಿಕೊಳ್ಳಲು ಜಾಗದ ಕೊರತೆ ಇತ್ತು. ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಘಟಕ ನಿರ್ಮಾಣಕ್ಕೆ ನೀಡಲಾಗಿದೆ. ಅರಣ್ಯದಲ್ಲಿ ಬಿದ್ದ ಕಸಗಳನ್ನು ಸಂಗ್ರಹಿಸಲು ಇಲಾಖೆಯ ಸಿಬ್ಬಂದಿಯೂ ನೆರವಾಗಲಿದ್ದೇವೆ’ ಎಂದರು.

ಮಧ್ಯಸ್ಥಿಕೆಗೆ ಜರ್ಮನಿ ರಾಯಭಾರಿಗೆ ಪತ್ರ

ಜೈನ ಪೋಷಕರ ಮಡಿಲು ಸೇರದ ಹೆಣ್ಣು ಮಗು

ನವದೆಹಲಿ(ಪಿಟಿಐ): ಒಂದೂವರೆ ವರ್ಷದಿಂದಲೂ ಜರ್ಮನಿ ಸರ್ಕಾರದ ವಶದಲ್ಲಿರುವ ಆರಿಹಾ ಶಾ ಎಂಬ ಹೆಣ್ಣು ಮಗುವನ್ನು ಭಾರತೀಯ ಪೋಷಕರ ಮಡಿಲಿಗೆ ಮರಳಿಸುವ ಸಂಬಂಧ ಕೂಡಲೇ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿ ಜರ್ಮನಿ ರಾಯಭಾರಿಗೆ 59 ಸಂಸದರು ಪತ್ರ ಬರೆದಿದ್ದಾರೆ.

ಸಂಸದರಾದ ಹೇಮಮಾಲಿನಿ, ಅಧಿರ್ ರಂಜನ್ ಚೌಧರಿ, ಸುಪ್ರಿಯಾ ಸುಳೆ, ಕನಿಮೊಳಿ ಕರುಣಾನಿಧಿ, ಶಶಿ ತರೂರ್, ಫಾರುಕ್ ಅಬ್ದುಲ್ಲಾ ಸೇರಿದಂತೆ ವಿವಿಧ ಪಕ್ಷಗಳ ಸಂಸದರು ಪತ್ರಕ್ಕೆ ಸಹಿ ಹಾಕಿದ್ದಾರೆ.

ಪೋಷಕರು ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ 2021ರಿಂದಲೂ ಆರಿಹಾ ಅಲ್ಲಿನ ಮಕ್ಕಳ ಯೋಗಕ್ಷೇಮ ಏಜೆನ್ಸಿಯ ವಶದಲ್ಲಿದ್ದಾಳೆ.

‘ನಿಮ್ಮ ದೇಶದ ಕಾನೂನನ್ನು ನಾವು ಗೌರವಿಸುತ್ತೇವೆ. ಆದರೆ, ಮಗುವಿನ ಕುಟುಂಬದ ಸದಸ್ಯರ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿಲ್ಲ. ಹಾಗಾಗಿ, ಆಕೆಯನ್ನು ಮತ್ತೆ ಕುಟುಂಬದ ಮಡಿಲಿಗೆ ನೀಡಬೇಕು’ ಎಂದು ಸಂಸದರು ಕೋರಿದ್ದಾರೆ.

ಮಗುವಿನ ಗುಪ್ತಾಂಗ ಭಾಗದಲ್ಲಿ ಆಕಸ್ಮಿಕವಾಗಿ ಗಾಯವಾಗಿದ್ದರಿಂದ ಪೋಷಕರು ಆಸ್ಪತ್ರೆಗೆ ದಾಖಲಿಸಿದ್ದರು. ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ಆರೋಪದ ಮೇರೆಗೆ ಪೋಷಕರ ವಿರುದ್ಧ ತನಿಖೆ ನಡೆಸಲಾಗಿತ್ತು. ಆದರೆ, 2022ರಲ್ಲಿ ಪೊಲೀಸರು ಅಂತಹ ಯಾವುದೇ ಕೃತ್ಯ ನಡೆದಿಲ್ಲ ಎಂದು ಪ್ರಕರಣವನ್ನು ವಜಾಗೊಳಿಸಿದ್ದಾರೆ. ಆಸ್ಪತ್ರೆ ಆಡಳಿತ ಮಂಡಳಿಯೂ ಈ ಆರೋಪ ನಿರಾಕರಿಸಿ ವರದಿ ನೀಡಿದೆ ಎಂದು ಸಂಸದರು ಪತ್ರದಲ್ಲಿ ತಿಳಿಸಿದ್ದಾರೆ.

ಪೋಷಕರಾದ ಧಾರಾ ಮತ್ತು ಭವೇಶ್ ಶಾ ಸದ್ಯ ಜರ್ಮನಿಯಲ್ಲಿದ್ದಾರೆ. ನ್ಯಾಯಾಲಯ ನೇಮಿಸಿದ ಮನೋವೈದ್ಯರಿಂದಲೂ ಅವರ ಮೌಲ್ಯಮಾಪನ ನಡೆದಿದೆ. ಸ್ವಂತ ಕಂದನನ್ನು ನೋಡಲು ಅವರಿಗೆ ಹದಿನೈದು ದಿನಕ್ಕೊಮ್ಮೆ ಮಾತ್ರ ಅವಕಾಶ ಕಲ್ಪಿಸಿರುವುದು ನೋವಿನ ಸಂಗತಿ ಎಂದಿದ್ದಾರೆ.

ಭಾರತೀಯರಿಗೆ ತಮ್ಮದೇ ಆದ ಸಂಸ್ಕೃತಿ ಇದೆ. ಮಗು ಶುದ್ಧ ಸಸ್ಯಹಾರಿಯಾದ ಜೈನ ಸಮುದಾಯಕ್ಕೆ ಸೇರಿದೆ. ಜರ್ಮನಿಯ ಮಗುವೊಂದು ಭಾರತದ ವಶದಲ್ಲಿದ್ದರೆ ನಿಮ್ಮ ಕಾಳಜಿ ಹೇಗಿರುತ್ತದೆಂದು ಅರಿಯಿರಿ. ಇಲ್ಲಿನ ಮಕ್ಕಳ ಯೋಗಕ್ಷೇಮ ಆಲಿಸುವ ಸಂಸ್ಥೆಗಳ ನಿಗಾದಲ್ಲಿಯೇ ಮಗುವಿನ ಆರೈಕೆ ಮಾಡಲಾಗುತ್ತದೆ. ಹಾಗಾಗಿ, ತಾಯ್ನಾಡಿಗೆ ಮಗುವನ್ನು ಮರಳಿಸುವಂತೆ ಭಾರತ ಸರ್ಕಾರವೂ ಔಪಚಾರಿಕವಾಗಿ ಜರ್ಮನಿ ಸರ್ಕಾರಕ್ಕೆ ಕೋರಿದೆ ಎಂದು ತಿಳಿಸಿದ್ದಾರೆ.

‘ನಾಪತ್ತೆ ದೂರುಗಳಲ್ಲಿ ಲವ್ ಜಿಹಾದ್ ಪ್ರಕರಣಗಳೇ ಹೆಚ್ಚು’

ಮುಂಬೈ (ಪಿಟಿಐ): ‘ರಾಜ್ಯದಲ್ಲಿ ಕಾಣೆಯಾದವರ ದೂರುಗಳ ಬಗ್ಗೆ ತನಿಖೆ ನಡೆಸುವ ಸಂದರ್ಭದಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿವೆ’ ಎಂದು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಗೃಹ ಖಾತೆಯ ಜವಾಬ್ದಾರಿಯನ್ನು ಹೊಂದಿರುವ ಫಡಣವೀಸ್ ಅವರು, ‘ಈ ರೀತಿ ಪತ್ತೆಯಾದ ಲವ್ ಜಿಹಾದ್ ಪ್ರಕರಣಗಳು ಶೇ 90ರಿಂದ 95ರಷ್ಟಿವೆ. ಮಹಿಳೆಯರನ್ನು ದಾರಿತಪ್ಪಿಸಲು ಕೆಲವರು ಸುಳ್ಳು ಭರವಸೆ, ಗುರುತು ನೀಡಿದ ಘಟನೆಗಳೂ ತನಿಖೆ ವೇಳೆ ಪತ್ತೆಯಾಗಿವೆ’ ಎಂದರು.

ಯೂಕೊ ಬ್ಯಾಂಕ್ ಸಿಇಒ ಆಗಿ ಅಶ್ವಿನಿ ಕುಮಾರ್ ನೇಮಕ

ಕೋಲ್ಕತ್ತ (ಪಿಟಿಐ): ಸರ್ಕಾರಿ ಸ್ವಾಮ್ಯದ ಯೂಕೊ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಆಗಿ ಅಶ್ವಿನಿ ಕುಮಾರ್ ನೇಮಕ ಆಗಿದ್ದಾರೆ. ಇವರ ನೇಮಕವು ಜೂನ್ 1 ರಿಂದ ಜಾರಿಗೆ ಬಂದಿದೆ.

ಈ ಮೊದಲು ಅವರು ಇಂಡಿಯನ್ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು. ಬ್ಯಾಂಕ್ ಆಫ್ ಬರೋಡಾ, ಕಾರ್ಪೊರೇಷನ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಲ್ಲಿಯೂ ಕೆಲಸ ಮಾಡಿದ್ದಾರೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ. ಎಸ್.ಎಸ್. ಪ್ರಸಾದ್ ಅವರಿಂದ ತೆರವಾಗಿರುವ ಸ್ಥಾನಕ್ಕೆ ಈ ನೇಮಕ ನಡೆದಿದೆ.

ದೇಶದ್ರೋಹ ಪ್ರಕರಣ: ಕಾನೂನು ಆಯೋಗದ ಶಿಫಾರಸಿಗೆ ವಿರೋಧ

ನವದೆಹಲಿ (ಪಿಟಿಐ): ದೇಶದ್ರೋಹ ಪ್ರಕರಣಗಳಲ್ಲಿ ವಿಧಿಸುವ ಜೈಲುಶಿಕ್ಷೆ ಅವಧಿಯನ್ನು ಕನಿಷ್ಠ ಮೂರು ವರ್ಷಗಳಿಂದ ಏಳು ವರ್ಷಗಳ ವರೆಗೆ ಹೆಚ್ಚಿಸಬೇಕು ಎಂದು ಕಾನೂನು ಆಯೋಗ ಮಾಡಿರುವ ಶಿಫಾರಸಿಗೆ ಕಾಂಗ್ರೆಸ್‌ನ ಸಂಸದರಾದ ಶಶಿ ತರೂರ್, ಪಿ. ಚಿದಂಬರಂ ಹಾಗೂ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಶನಿವಾರ ವಿರೋಧ ವ್ಯಕ್ತಪಡಿಸಿದ್ದಾರೆ.

‘ಇದು ಆಘಾತಕಾರಿ ಮತ್ತು ಈ ಕಾನೂನು ಈಗಾಗಲೇ ಸಾಕಷ್ಟು ದುರುಪಯೋಗ ಆಗಿರುವುದರಿಂದ ಇದನ್ನು ವಿರೋಧಿಸಬೇಕು’ ಎಂದು ತರೂರ್ ಹೇಳಿದ್ದಾರೆ.

‘ದೇಶದ್ರೋಹ ಕಾನೂನನ್ನು ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಬೇಕೆಂದು 2014ರಲ್ಲಿ ನಾನು ಮಂಡಿಸಿದ ಖಾಸಗಿ ಮಸೂದೆಯಲ್ಲಿ ಮತ್ತು ಕಾಂಗ್ರೆಸ್‌ನ 2019ರ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾಗಿತ್ತು’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಭಾರತೀಯ ದಂಡ ಸಂಹಿತೆಯ(ಐಪಿಸಿ) 124 (ಎ)(ದೇಶದ್ರೋಹ) ಸೆಕ್ಷನ್ ಅನ್ನು ಏಕೆ ಕೈಬಿಡಬಾರದು ಎಂದು 2022ರಲ್ಲಿ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತ್ತು.

‘ರೋಗಕ್ಕಿಂತ ಕೆಟ್ಟ ಚಿಕಿತ್ಸೆ ಸೂಚಿಸಿದಂತೆ’: ಕಾನೂನು ಆಯೋಗದ ಶಿಫಾರಸಿನ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ, ‘ಇದು ವೈದ್ಯರು, ರೋಗಕ್ಕಿಂತ ಕೆಟ್ಟ ಚಿಕಿತ್ಸೆಯನ್ನು ಸೂಚಿಸಿದಂತಾಗಿದೆ’ ಎಂದು ಬಣ್ಣಿಸಿದ್ದಾರೆ.

‘ಈ ಕಠೋರ ಕಾನೂನು, ಆಡಳಿತಗಾರರಿಗೆ ದುರುಪಯೋಗ ಮಾಡಲು ಆಹ್ವಾನ ನೀಡಿದಂತಾಗಿದೆ. ಈ ಹಿಂದೆಯೂ ಅದು ಸಾಬೀತಾಗಿದೆ’ ಎಂದೂ ಹೇಳಿದ್ದಾರೆ.

‘ಗಣರಾಜ್ಯದ ತತ್ವಗಳಿಗೆ ವಿರುದ್ಧ’: ಕಾನೂನು ಆಯೋಗದ ಶಿಫಾರಸು ದೇಶದ ಗಣರಾಜ್ಯದ ಅಡಿಪಾಯಕ್ಕೆ ಮತ್ತು ತತ್ವಗಳಿಗೆ ವಿರುದ್ಧವಾಗಿದೆ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಶಿಫಾರಸಿನಿಂದ ನಾನು ವ್ಯಾಕುಲನಾಗಿದ್ದೇನೆ. ಯಾರು ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಾರೋ ಅವರ ಬಾಯಿ ಮುಚ್ಚಿಸಲು ನೀವು ಬಯಸುತ್ತೀರಿ’ ಎಂದೂ ಸಿಬಲ್ ಹೇಳಿದ್ದಾರೆ.

ಇದು ದೋಷಪೂರಿತ ಕಾನೂನು ಎಂದಿರುವ ಅವರು, 2014ರ ಬಳಿಕ ದಾಖಲಾಗಿದ್ದ 10 ಸಾವಿರಕ್ಕೂ ಹೆಚ್ಚು ದೇಶದ್ರೋಹ ಪ್ರಕರಣಗಳಲ್ಲಿ ಕೇವಲ 329 ಪ್ರಕರಣಗಳಲ್ಲಿ ಮಾತ್ರ ಅಪರಾಧ ಸಾಬೀತಾಗಿದೆ ಎಂದಿದ್ದಾರೆ.



ಚಿನ್ನ, ಬೆಳ್ಳಿ ಧಾರಣೆ (ಬೆಂಗಳೂರು)	
ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,560
ಒಡವೆ ಚಿನ್ನ 1ಗ್ರಾಂ	₹5,664
ಬೆಳ್ಳಿ ಕೆ.ಜಿಗೆ	₹73,900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹129

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹895 (890)
ಸೂರ್ಯಕಾಂತಿ (ರಿಫೈನ್ಡ್)	₹890 (890)
ಪಾಮೋಲಿನ್	₹840 (835)

ಮೇನಲ್ಲಿ ₹ 43,838 ಕೋಟಿ ವಿದೇಶಿ ಬಂಡವಾಳ ಒಳಹರಿವು

ಹೆಚ್ಚು ಹೂಡಿಕೆ ಆಕರ್ಷಿಸಿದ ಭಾರತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಭಾರತದಲ್ಲಿ ಎಫ್‌ಪಿಐ ಒಳಹರಿವಿಗೆ ಪೂರಕ ವಾತಾವರಣ
- ಸಾರ್ವಕಾಲಿಕ ದಾಖಲೆ ಮಟ್ಟ ಮೀರಲಿರುವ ನಿಫ್ಟಿ
- ಚೀನಾದಿಂದ ವಿದೇಶಿ ಬಂಡವಾಳ ಹಿಂತೆಗೆತ



ಬೆಂಗಳೂರು: ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಭಾರತವು ಮೇ ತಿಂಗಳಿನಲ್ಲಿ ಅತಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮೇ ತಿಂಗಳಿನಲ್ಲಿ ಭಾರತದಲ್ಲಿ ಒಟ್ಟು ₹ 43,838 ಕೋಟಿ ಹೂಡಿಕೆ ಮಾಡಿದ್ದಾರೆ. ಈ ಮೂಲಕ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಿದಂತಾಗಿದೆ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ವಿದೇಶಿ ಹೂಡಿಕೆದಾರರು ಮೇನಲ್ಲಿ ಚೀನಾದಿಂದ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ ಎಂದು ಅವರು ತಿಳಿಸಿದರು.

ಈಚೆಗೆ ಬಿಡುಗಡೆ ಆಗಿರುವ ಭಾರತದ ಜಿಡಿಪಿ ಬೆಳವಣಿಗೆಯು ಆಶಾದಾಯಕ ಆಗಿರುವುದರ ಜೊತೆಗೆ ತಯಾರಿಕಾ ವಲಯದ ಬೆಳವಣಿಗೆಯೂ ಉತ್ತಮವಾಗಿದೆ. ಈ ಅಂಶಗಳು ಆರ್ಥಿಕತೆಯು ಉತ್ತಮ ಬೆಳವಣಿಗೆ ಕಾಣುತ್ತಿದೆ ಎನ್ನುವುದನ್ನು ಸೂಚಿಸುತ್ತಿವೆ. ಹೀಗಾಗಿ, ಜೂನ್‌ನಲ್ಲಿಯೂ ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಒಳಹರಿವು ಹೆಚ್ಚಾಗುವ ಸಾಧ್ಯತೆ ಇದೆ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟರು.

ಹಣಕಾಸು, ಆಟೊಮೊಬೈಲ್, ದೂರಸಂಪರ್ಕ ಮತ್ತು ನಿರ್ಮಾಣ ವಲಯಗಳು ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯನ್ನು ಆಕರ್ಷಿಸುತ್ತಿವೆ. ನಿಫ್ಟಿ ಸಾರ್ವಕಾಲಿಕ ದಾಖಲೆ ಮಟ್ಟವಾದ 18,887ರತ್ತ ಸಾಗುತ್ತಿದ್ದು, ಕೆಲವೇ ವಹಿವಾಟು ದಿನಗಳಲ್ಲಿ ಅದನ್ನೂ ದಾಟುವ ಎಲ್ಲಾ ಸಾಧ್ಯತೆಗಳಿವೆ. ಆದರೆ, ದಾಖಲೆ ಮಟ್ಟದಲ್ಲಿ ಮಾರುಕಟ್ಟೆ ಮೌಲ್ಯವು ಸಹ ಹೆಚ್ಚಾಗುವುದರಿಂದ ಮಾರಾಟದ ಒತ್ತಡ ಎದುರಾಗಬಹುದು ಎನ್ನುವ ಸೂಚನೆಯನ್ನೂ ಅವರು ನೀಡಿದರು.

ವಿಶ್ವ ಬ್ಯಾಂಕ್ ಅಧ್ಯಕ್ಷರಾಗಿ ಅಜಯ್ ಬಂಗಾ ಅಧಿಕಾರ ಸ್ವೀಕಾರ



ಅಜಯ್ ಬಂಗಾ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಜಯ್ ಬಂಗಾ ಅವರು ವಿಶ್ವ ಬ್ಯಾಂಕ್‌ನ ಅಧ್ಯಕ್ಷರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ.

63 ವರ್ಷದ ಅಜಯ್ ಅವರು ಜೂನ್ 2 ರಿಂದ ಐದು ವರ್ಷಗಳವರೆಗೆ ವಿಶ್ವ ಬ್ಯಾಂಕ್‌ನ 14ನೇ ಅಧ್ಯಕ್ಷರಾಗಿ ಅಧಿಕಾರದಲ್ಲಿ ಇರಲಿದ್ದಾರೆ.

ಅವರು ಜನರಲ್ ಅಟ್ಲಾಂಟಿಕಾದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮಾಸ್ಟರ್‌ಕಾರ್ಡ್‌ನ ಅಧ್ಯಕ್ಷ ಮತ್ತು ಸಿಇಒ ಆಗಿಯೂ ಅವರು ಕೆಲಸ ಮಾಡಿದ್ದಾರೆ.

ಬಂಗಾ ಅವರಿಗೆ ಕೇಂದ್ರ ಸರ್ಕಾರವು 2016ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿದೆ.

‘ಪ್ರಚಾರ ಕರೆ: ಗ್ರಾಹಕರ ಒಪ್ಪಿಗೆಗೆ ವೇದಿಕೆ ರೂಪಿಸಿ’

ನವದೆಹಲಿ (ಪಿಟಿಐ): ಉತ್ಪನ್ನಗಳ ಪ್ರಚಾರಕ್ಕೆ ಸಂಬಂಧಿಸಿದ ಕರೆ ಮತ್ತು ಎಸ್‌ಎಂಎಸ್‌ಗಳನ್ನು ಸ್ವೀಕರಿಸಲು ಗ್ರಾಹಕರು ಒಪ್ಪಿಗೆ ನೀಡಲು/ಹಿಂಪಡೆಯಲು ಏಕೀಕೃತ ಡಿಜಿಟಲ್ ವೇದಿಕೆಯೊಂದನ್ನು ಎರಡು ತಿಂಗಳಿನಲ್ಲಿ ರೂಪಿಸುವಂತೆ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಕಂಪನಿಗಳಿಗೆ ಸೂಚನೆ ನೀಡಿದೆ.

ಕಿರಿಕಿರಿ ಉಂಟುಮಾಡುವ ಕರೆ ಮತ್ತು ಎಸ್‌ಎಂಎಸ್‌ಗಳನ್ನು ತಡೆಯುವ ಉದ್ದೇಶದಿಂದ ಈ ಸೂಚನೆ ನೀಡಿದೆ. ಹಂತ ಹಂತವಾಗಿ ಅದನ್ನು ಜಾರಿಗೊಳಿಸುವಂತೆಯೂ ಹೇಳಿದೆ. ಗ್ರಾಹಕರ ಒಪ್ಪಿಗೆ ಪಡೆಯಲು ಸದ್ಯ ಈ ತರಹದ ಯಾವುದೇ ವ್ಯವಸ್ಥೆ ಇಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಂದಾಪುರ	
ಹಳೆಚಾಲಿ	43000-46000
ಹೊಸಚಾಲಿ	36000-39000
ಪುತ್ತೂರು	
ಹೊಸತು	33500-40500
ಚನ್ನಗಿರಿ	
ರಾಶಿ	48799-50500
ದಾವಣಗೆರೆ	
ರಾಶಿ	33869-49029
ಸಿದ್ದಾಪುರ	
ಬಿಳೆಗೋಟು	30112-32699
ಚಾಲಿ	34899-37599
ಕೋಕ	28012-32382
ಕೆಂಪುಗೋಟು	30111-32099
ರಾಶಿ	43099-48219
ತಟ್ಟಿಬೆಟ್ಟೆ	38289-46099
ಶಿರಸಿ	
ಬೆಟ್ಟೆ	36061-44899
ಬಿಳಿಗೋಟು	25099-34879
ಚಾಲಿ	35399-38500
ಕೆಂಪುಗೋಟು	32309-35709
ರಾಶಿ	44298-47709
ಸೊರಬ	
ಚಾಲಿ	30199-36469
ಗೊರಬಲು	30989-33099
ರಾಶಿ	44099-48819
ಸಿಪ್ಪೆಗೋಟು	18500-20500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15200	15100	183.05 ಸೆಂಟ್ಸ್
ಎಸಿ	---	8100	7650	
ಆರ್‌ಪಿ	---	10825	10675	ಲಂಡನ್
ಆರ್‌ಸಿ	---	238 on OT	5900	2605 ಡಾಲರ್ಸ್

‘ರಾಮ ಜನ್ಮಭೂಮಿ–ಬಾಬ್ರಿ ಮಸೀದಿ ತೀರ್ಪು ನೀಡದಂತೆ ಒತ್ತಡ ಇತ್ತು’

ಮೀರತ್ (ಪಿಟಿಐ): ‘ರಾಮ ಜನ್ಮಭೂಮಿ- ಬಾಬ್ರಿ ಮಸೀದಿ ಭೂಮಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತೀರ್ಪು ನೀಡದಂತೆ ನನ್ನ ಮೇಲೆ ಭಾರಿ ಒತ್ತಡವಿತ್ತು’ ಎಂದು ನಿವೃತ್ತ ನ್ಯಾಯಮೂರ್ತಿ ಸುಧೀರ್ ಅಗರ್ವಾಲ್ ಹೇಳಿದ್ದಾರೆ.

2010ರ ಸೆಪ್ಟೆಂಬರ್ 30ರಂದು ಈ ವಿವಾದಕ್ಕೆ ಸಂಬಂಧಿಸಿ ತೀರ್ಪು ನೀಡಿದ್ದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿಗಳಲ್ಲಿ ಇವರೂ ಒಬ್ಬರಾಗಿದ್ದರು.

ಮೀರತ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ಭಾಗಿಯಾಗಿದ್ದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರಕರಣದ ತೀರ್ಪನ್ನು ಮುಂದೂಡುವಂತೆ ಮನೆಯಿಂದ ಮತ್ತು ಮನೆಯ ಹೊರಗೆ ನನಗೆ ಒತ್ತಡ ಹೇರಲಾಗುತ್ತಿತ್ತು. ಆ ತೀರ್ಪನ್ನು ಆಗ ನೀಡದಿದ್ದರೆ ಬಹುಶಃ ಇನ್ನೂ 200 ವರ್ಷಗಳ ಕಾಲ ಆ ವಿವಾದವನ್ನು ಎಳೆದಾಡಲಾಗುತ್ತಿತ್ತು. ಆ ತೀರ್ಪನ್ನು ಪ್ರಕಟಿಸಿದ ಬಳಿಕ ದೈವಕೃಪೆಗೆ ಒಳಗಾದಂತೆಭಾಸವಾಯಿತು’ಎಂದರು.

ಅಯೋಧ್ಯೆಯಲ್ಲಿದ್ದ ವಿವಾದಿತ 2.77 ಎಕರೆ ಭೂಮಿಯನ್ನು ಸುನ್ನಿ ವಕ್ಫ್ ಮಂಡಳಿ, ನಿರ್ಮೋಹಿ ಅಕಾರ ಮತ್ತು ಹಿಂದೂ ಮಹಾಸಭೆ ಪ್ರತಿನಿಧಿಸುವ ರಾಮ್ ಲಲ್ಲಾಗೆ ಸಮನಾಗಿ ಹಂಚಿ ಈ ತೀರ್ಪನ್ನು ನೀಡಲಾಗಿತ್ತು. ಈ ತೀರ್ಪು ನೀಡಿದ್ದ ನ್ಯಾಯಪೀಠದಲ್ಲಿ ಎಸ್.ಯು. ಖಾನ್, ಸುಧೀರ್ ಅಗರ್ವಾಲ್ ಮತ್ತು ಡಿ.ವಿ. ಶರ್ಮಾ ಇದ್ದರು.

ಪತಂಜಲಿ ಘಟಕ ಮುಚ್ಚಲು ಶಿಫಾರಸು

ಒಂದನೇ ಪುಟದಿಂದ

‘ಮೇ 31ರಂದು ಮತ್ತೆ ಮಾದರಿ ಸಂಗ್ರಹಿಸಿದಾಗ, ನಾಲೆಯ ನೀರು ಕಲುಷಿತಗೊಂಡು ಕಪ್ಪು ಬಣ್ಣಕ್ಕೆ ತಿರುಗಿತ್ತು. ನಾಲೆಯ ನೀರಿನಲ್ಲಿ ಜಿಡ್ಡಿನ ದಪ್ಪನೆಯ ಪದರ ಭಾರಿ ಪ್ರಮಾಣದಲ್ಲಿ ಕಂಡುಬಂದಿದೆ. ಈ ಕೈಗಾರಿಕೆಯಿಂದಲೇ ತೈಲಾಂಶವು ಸೋರಿಕೆಯಾದ ಕುರುಹು ಇದು’ ಎಂದೂ ತಿಳಿಸಿದೆ.

‘ಕಂಪನಿಯ ಟ್ಯಾಂಕರ್ ಏಪ್ರಿಲ್ 28ರಂದು ಅಪಘಾತಕ್ಕೀಡಾಗಿದ್ದು, ಅದರಿಂದ ಸುಮಾರು 10 ಟನ್‌ಗಳಷ್ಟು ತಾಳೆ ಎಣ್ಣೆಯ ಘನ ಪದಾರ್ಥ ನಾಲೆಯನ್ನು ಸೇರಿದೆ ಎಂದು ಕಂಪನಿಯ ಪ್ರತಿನಿಧಿಗಳು ತಪ್ಪೊಪ್ಪಿಕೊಂಡಿದ್ದಾರೆ. ಈ ದುರ್ಘಟನೆ ನಡೆದ ಬಳಿಕವೂ ಅವರು ಮಂಡಳಿಗೆ ಮಾಹಿತಿ ನೀಡಿಲ್ಲ’ ಎಂದು ಪ್ರಾದೇಶಿಕ ಅಧಿಕಾರಿಯು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪತಂಜಲಿ ಫುಡ್ಸ್ ಸಂಸ್ಥೆಯವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)	
ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ತಿಪಟೂರು	₹7800-8604
ತುರುವೇಕೆರೆ	₹8900-8900

ಮುಂಬೈ ಧಾರಣೆ

ಶೇಂಗಾ 3-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1580)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	850 (825)
ಪಾಮ್ ವಾರದ ಡೆಲಿವರಿ	838 (833)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,450 (59,950)

ಬೆಳ್ಳಿ ಕೆ.ಜಿ 71,600 (72,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ





ಅಪಘಾತಕ್ಕೊಳಗಾದ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲಿನಿಂದ ಸಂತ್ರಸ್ತರನ್ನು ರಕ್ಷಿಸುತ್ತಿರುವ ಎನ್‌ಡಿಆರ್‌ಎಫ್ ಸಿಬ್ಬಂದಿ (ಎಡಚಿತ್ರ) ಪ್ರಧಾನಿ ನರೇಂದ್ರ ಮೋದಿ ಅವರು ರೈಲು ಅವಘಡ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಈ ವೇಳೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇದ್ದರು —ಪಿಟಿಐ ಚಿತ್ರಗಳು

ದುರಂತದ ಸ್ಥಳಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ

ಬಾಲಸೋರ್ (ಪಿಟಿಐ): ತ್ರಿವಳಿ ರೈಲು ಅಪಘಾತ ಸ್ಥಳ ಒಡಿಶಾದ ಬಾಲಸೋರ್ ಜಿಲ್ಲೆಯ ಬಹನಾಗಾಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಭೇಟಿ ನೀಡಿ ಪರಿಸ್ಥಿತಿ ಕುರಿತು ವರದಿ ಪಡೆದರು.

ಮೋದಿ ಅವರೊಂದಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸಹ ಇದ್ದರು. ಅಶ್ವಿನಿ ವೈಷ್ಣವ್ ಮತ್ತು ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳು ಪರಿಸ್ಥಿತಿ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಧಾನಿ ಮೋದಿ ಅವರು ಸ್ಥಳದಿಂದಲೇ ಸಂಪುಟ ಕಾರ್ಯದರ್ಶಿ ಮತ್ತು ಆರೋಗ್ಯ ಸಚಿವರೊಂದಿಗೆ ಮಾತನಾಡಿ, ಗಾಯಾಳುಗಳು ಮತ್ತು ಅವರ ಕುಟುಂಬಸ್ಥರಿಗೆ ಎಲ್ಲ ರೀತಿಯ ನೆರವು ನೀಡುವಂತೆ ಸೂಚಿಸಿದರು. ಮೃತರ ಕುಟಂಬಸ್ಥರಿಗೆ ಯಾವುದೇ ಅನನುಕೂಲ ಉಂಟಾಗದಂತೆ ಮತ್ತು ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ದೊರಕುವಂತೆ ವಿಶೇಷ ಕಾಳಜಿ ವಹಿಸಬೇಕು ಎಂದು ಒತ್ತಿ ಹೇಳಿದರು ಎಂದು ಅಧಿಕಾರಿಗಳು ತಿಳಿಸಿದರು.

ಇದೇ ವೇಳೆ ಒಡಿಶಾ ಕಂದಾಯ ಮತ್ತು ವಿಪತ್ತು ನಿರ್ವಹಣೆ ಸಚಿವ ಪ್ರಮಿಳಾ ಮಲ್ಲಿಕ್ ಮತ್ತು ಸ್ಥಳೀಯ ಪೊಲೀಸ್ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದರು.

ಬಳಿಕ ಅವರು ಬಾಲಸೋರ್ ಜಿಲ್ಲಾ ಆಸ್ಪತ್ರೆಗೆ ತೆರಳಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಜಾರ್ಖಂಡ್, ಪಶ್ಚಿಮ ಬಂಗಾಳ ಮತ್ತು ಒಡಿಶಾ ಮೂಲದ ಕೆಲವು ಸಂತ್ರಸ್ತರೊಂದಿಗೆ ಮಾತನಾಡಿದರು. ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯೊಂದಿಗೆ ಚರ್ಚಿಸಿದರು.

ಕಠಿಣ ಕ್ರಮ: ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ಅತ್ಯಂತ ಗಂಭೀರ ಘಟನೆ. ಎಲ್ಲಾ ಆಯಾಮಗಳಿಂದ ತನಿಖೆಗೆ ಸೂಚಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಘಟನಾ ಸ್ಥಳಕ್ಕೆ ಭೇಟಿ ನೀಡುವ ಮೊದಲು ಅವಘಡಕ್ಕೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ್ದರು. ರಕ್ಷಣಾ ಕಾರ್ಯಾಚರಣೆ, ಪರಿಹಾರ, ಸಂತ್ರಸ್ತರ ಔಷಧೋಪಚಾರ ಮುಂತಾದ ವಿಷಯಗಳ ಕುರಿತು ವರದಿ ಪಡೆದರು' ಎಂದು ಪ್ರಧಾನಿ ಕಾರ್ಯಾಲಯ ಟ್ವೀಟ್ ಮಾಡಿದೆ.

ಎಲ್ಲೆಂದರಲ್ಲಿ ಬಿದ್ದಿದ್ದ ಹೆಣಗಳು • ರೈಲು ಅವಘಡದ ಭೀಕರತೆ ತೆರೆದಿಟ್ಟ ಪ್ರಯಾಣಿಕರು

ದಿಕ್ಕುದೆಸೆ ಇಲ್ಲದೆ ಉರುಳಿದ ಬೋಗಿಗಳು


ಕೋಲ್ಕತ್ತ (ಪಿಟಿಐ): 'ಬೆಂಗಳೂರು–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ವೇಗವಾಗಿ ಸಾಗುತ್ತಿತ್ತು. ರಾತ್ರಿ ಏಳು ಗಂಟೆ ಸುಮಾರಿಗೆ ಜೋರಾದ ಶಬ್ದ ಕಿವಿಗೆ ಅಪ್ಪಳಿಸಿತು. ನೋಡ ನೋಡುತ್ತಿದ್ದಂತೆಯೇ ಬೋಗಿಗಳು ದಿಕ್ಕುದೆಸೆಯಿಲ್ಲದೆ ಉರುಳಿದವು. ಬೆಳಕು ಆರಿ ಕತ್ತಲು ಆವರಿಸಿತು, ನಾನು ಕುಳಿತಿದ್ದ ಸೀಟಿನಿಂದ ಕೆಳಗೆ ಬಿದ್ದೆ...ಹೇಗೋ ಎದ್ದು ಹೊರಗೆ ನೋಡಿದರೆ ಗಾಯಾಳುಗಳು ಎಲ್ಲೆಂದರಲ್ಲಿ ಆಕ್ರಂದಿಸುತ್ತಿದ್ದರು.'

ರೈಲು ದುರಂತದಲ್ಲಿ ಬದುಕುಳಿದ ಮಿಜಾನ್ ಉಲ್ ಹಕ್ ಎಂಬವರು ಘಟನೆಯ ಭೀಕರತೆಯನ್ನು ವಿವರಿಸಿದ್ದು ಹೀಗೆ. ದಕ್ಷಿಣ ಭಾರತದಲ್ಲಿ ಕೆಲಸ ಮಾಡುತ್ತಿದ್ದ ಹಕ್ ಅವರು ಹಲವು ತಿಂಗಳ ಬಳಿಕ ಮನೆಗೆ ಮರಳುತ್ತಿದ್ದರು.

'ಬೋಗಿಗಳು ಉರುಳಿ ಬಿದ್ದಾಗ ಎದೆಯ ಭಾಗ, ಕಾಲು ಮತ್ತು ತಲೆಗೆ ಪೆಟ್ಟಾಯಿತು. ಜೀವವನ್ನು ಉಳಿಸಿಕೊಳ್ಳಲು ಕಿಟಕಿಗಳನ್ನು ಒಡೆದು ಹೊರಗೆ ಬರಲೇಬೇಕಿತ್ತು. ಘಟನಾಸ್ಥಳದಲ್ಲಿ ಹೆಣಗಳ ರಾಶಿ ಕಂಡು ಆಘಾತವಾಯಿತು' ಎಂದು ಭೀಕರತೆಯನ್ನು ವಿವರಿಸಿದರು.

' ಕರಾಳ ದೃಶ್ಯಗಳನ್ನು ಸ್ಮೃತಿಪಟಲದಿಂದ ಹೊರಹಾಕಲು ಸಾಧ್ಯವೇ ಇಲ್ಲ' ಎಂದು ಮುರ್ಷಿದಾ ಬಾದ್ ನಿವಾಸಿ ಇಮ್ತಾಜುಲ್ ಖಾನ್ ಹೇಳಿದರು.


ಅಪಘಾತಕ್ಕೀಡಾದ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲಿನಲ್ಲಿದ್ದ ರಾಜಲಕ್ಷ್ಮಿ ಎಂಬವರು, 'ಬಾಲಸೋರ್ ದಾಟಿ ಕೆಲವೇ ನಿಮಿಷಗಳಾಗಿದ್ದವು, ಜೋರಾದ ಶಬ್ದವಾಯಿತು. ನಾವಿದ್ದ ಬೋಗಿಯು ಇನ್ನೊಂದು ಹಳಿಯ ಮೇಲೆ ಬೀಳಲು ಆರಂಭಿಸಿತು. ಏನಾಗುತ್ತಿದೆ ಎಂದೇ ನಮಗೆ ತಿಳಿಯಲಿಲ್ಲ. ಕೆಲ ನಿಮಿಷಗಳ ನಂತರ ರೈಲಿನ ಹೊರಗೆ ಬಂದು ನೋಡಿದಾಗ ಬೋಗಿಗಳು ಮತ್ತು ಹೆಣಗಳು ಎಲ್ಲೆಂದರಲ್ಲಿ ಬಿದ್ದಿದ್ದವು. ಒಂದು ಬೋಗಿಯಂತೂ ಸಂಪೂರ್ಣವಾಗಿ ಮಗುಚಿತ್ತು.



ಕೋರೊಮಂಡಲ್ ಎಕ್ಸ್‌ಪ್ರೆಸ್ ಮೊದಲು ಹಳಿ ತಪ್ಪಿ ಉರುಳಿತು



ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳು ಗೂಡ್ಸ್ ರೈಲಿನ ಮೇಲೆ ಬಿದ್ದವು. ಗೂಡ್ಸ್ ರೈಲು ಉರುಳಿಬಿತ್ತು



ಯಶವಂತಪುರ –ಹೌರಾ ರೈಲು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆಯಿತು

ಇಂದು ಬದುಕುಳಿದಿದ್ದೇನೆ ಎಂದರೆ ನಿಜಕ್ಕೂ ನಾನು ಅದೃಷ್ಟವಂತೆ' ಎಂದು ಪವಾಡಸದೃಶ ರೀತಿಯಲ್ಲಿ ಸಾವಿನ ದವಡೆಯಿಂದ ಪಾರಾಗಿದ್ದನ್ನು ವಿವರಿಸಿದರು.

'ಮೊದಲಿಗೆ ಗೊಂದಲದಲ್ಲಿದ್ದೆವು. ಬಳಿಕ ಬೋಗಿಯಿಂದ ಹೊರಬಂದು ಕಗ್ಗತ್ತಲಲ್ಲಿಯೇ ಸಮೀಪದ ಹೊಲಕ್ಕೆ ಬಂದು ಇಡೀ ರಾತ್ರಿ ಕಳೆದೆವು. ಮುಂಜಾನೆಯ ವೇಳೆಗೆ ರೈಲು ಹೌರಾಗೆ ಪ್ರಯಾಣ ಆರಂಭಿಸಿತು' ಎಂದು ಕೋಲ್ಕತ್ತಕ್ಕೆ ಹೊರಟಿದ್ದ ಬೆಂಗಳೂರು ನಿವಾಸಿ ರೇಖಾ ಎಂಬವರು ತಿಳಿಸಿದರು.

10 ನಿಮಿಷ, 3 ರೈಲು, ಎರಡು ಅಪಘಾತ!

ನವದೆಹಲಿ: ನಾಲ್ಕು ಟ್ರ್ಯಾಕ್‌ಗಳು, ಮೂರು ರೈಲುಗಳು, 10 ನಿಮಿಷದ ಅಂತರದಲ್ಲಿ ಎರಡು ಅಪಘಾತಗಳು, ನೂರಾರು ಜನರ ಸಾವು.

–ಒಡಿಶಾದಲ್ಲಿ ಶುಕ್ರವಾರ ರಾತ್ರಿ ಜರುಗಿದ ಭೀಕರ ರೈಲು ಅಪಘಾತದ ಸಂಕ್ಷಿಪ್ತ ಚಿತ್ರಣವಿದು. ಒಡಿಶಾದ ಬಾಲಸೋರ್ ಬಳಿ ಸಂಜೆ 6.50 ರಿಂದ 7.10ರ ನಡುವೆ ಈ ದುರಂತ ಜರುಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಚೆನ್ನೈಗೆ ತೆರಳುತ್ತಿದ್ದ ಕೋರೊಮಂಡಲ್–ಶಾಲಿಮಾರ್ ಎಕ್ಸ್‌ಪ್ರೆಸ್ ರೈಲು ಮೊದಲಿಗೆ ಹಳಿ ತಪ್ಪಿದ್ದು, ಪಕ್ಕದ ಹಳಿಯಲ್ಲಿ ನಿಲ್ಲಿಸಲಾಗಿದ್ದ ಸರಕುಸಾಗಣೆ ರೈಲಿಗೆ ಡಿಕ್ಕಿ ಹೊಡೆಯಿತು. ರೈಲು ಅತಿವೇಗದಲ್ಲಿದ್ದು, ಡಿಕ್ಕಿಯ ರಭಸಕ್ಕೆ ಬೋಗಿಗಳು ಉರುಳಿದವು.

ಸ್ವಲ್ಪ ಹೊತ್ತಿನಲ್ಲಿಯೇ ಇನ್ನೊಂದು ಹಳಿಯಲ್ಲಿ ಬೆಂಗಳೂರಿನಿಂದ ಹೊರಟಿದ್ದ ಯಶವಂತಪುರ– ಹೌರಾ ಸೂಪರ್‌ಫಾಸ್ಟ್ ರೈಲು, ಈ ಮೊದಲು ಉರುಳಿ ಹಳಿಯ ಮೇಲೆ ಬಿದ್ದಿದ್ದ ಕೋರೊಮಂಡಲ್ ಎಕ್ಸ್‌ಪ್ರೆಸ್ ಮತ್ತು ಸರಕುಸಾಗಣೆ ರೈಲಿನ ಬೋಗಿಗಳಿಗೆ ಡಿಕ್ಕಿ ಹೊಡೆದಿದ್ದು, ಅಪಘಾತದ ತೀವ್ರತೆ ಇನ್ನಷ್ಟು ಹೆಚ್ಚಿಸಿತು.

ಅಪಘಾತ ಸಂಭವಿಸಿದಾಗ ಹಲವು ಪ್ರಯಾಣಿಕರು ನಿದ್ರಾವಸ್ಥೆಯಲ್ಲಿದ್ದರು. ಕೋರೊಮಂಡಲ್–ಶಾಲಿಮಾರ್ ಎಕ್ಸ್‌ಪ್ರೆಸ್ ರೈಲಿನ ಸಾಮಾನ್ಯ ಬೋಗಿಗಳು ಭರ್ತಿಯಾಗಿತ್ತು.

ಸ್ಥಳೀಯರು ಮೊದಲಿಗೆ ರಕ್ಷಣೆಗೆ ಧಾವಿಸಿದ್ದು, ಹಿಂದೆಯೇ ರಕ್ಷಣಾ ಸಿಬ್ಬಂದಿಯೂ ಸೇರಿಕೊಂಡರು. ಅಪಘಾತಕ್ಕೆ ನಿರ್ವಹಣಾ ವೈಫಲ್ಯ ಕಾರಣ ಎಂಬ ಸಂಶಯ ಮೂಡಿದ್ದು, ರೈಲ್ವೆ ಇಲಾಖೆಯು ಸಮಗ್ರ ತನಿಖೆಗೆ ಆದೇಶಿಸಿದೆ

● 1964 ಡಿಸೆಂಬರ್ 23	ಪಂಬನ್–ಧನುಷ್ಕೋಡಿ ಪ್ಯಾಸೆಂಜರ್ ರೈಲು ರಾಮೇಶ್ವರದ ಬಳಿ ಚಂಡಮಾರುತಕ್ಕೆ ಸಿಲುಕಿ ಕೊಚ್ಚಿಹೋಗಿ 126 ಮಂದಿ ಮೃತಪಟ್ಟಿದ್ದರು
● 1981 ಜೂನ್ 6	ಬಿಹಾರದ ಬಾಗಮತಿ ನದಿಗೆ ರೈಲೊಂದು ಸೇತುವೆಯಿಂದ ಉರುಳಿ ಬಿದ್ದು 800 ಮಂದಿ ಸಾವನ್ನಪ್ಪಿದ್ದರು
● 1988 ಜುಲೈ 8	ಕೇರಳದ ಅಷ್ಟಮುಡಿ ಸರೋವರದ ಪೆರುಮಣ್ ಸೇತುವೆ ಮೇಲೆ ಐಲ್ಯಾಂಡ್ ಎಕ್ಸ್‌ಪ್ರೆಸ್ ರೈಲಿನ 10 ಬೋಗಿಗಳು ಹಳಿತಪ್ಪಿ ಮಗುಚಿ ಸುಮಾರು 105 ಮಂದಿ ಮೃತಪಟ್ಟಿದ್ದರು
● 1995 ಆಗಸ್ಟ್ 20	ಉತ್ತರ ಪ್ರದೇಶದ ಫಿರೋಜಾಬಾದ್‌ನಲ್ಲಿ ಪುರುಷೋತ್ತಮ ಎಕ್ಸ್‌ಪ್ರೆಸ್ ರೈಲು, ನಿಲುಗಡೆಗೊಂಡಿದ್ದ ಕಾಳಿಂದಿ ಎಕ್ಸ್‌ಪ್ರೆಸ್ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮ 358 ಮಂದಿ ಮೃತಪಟ್ಟಿದ್ದರು
● 1999 ಆಗಸ್ಟ್ 2	ಪಶ್ಚಿಮ ಬಂಗಾಳದ ಗೈಸಲ್ ನಿಲ್ದಾಣದಲ್ಲಿ ಬ್ರಹ್ಮಪುತ್ರ ಮೇಲ್ ರೈಲು, ನಿಲುಗಡೆಗೊಂಡಿದ್ದ ಅವಧ್ ಎಕ್ಸ್‌ಪ್ರೆಸ್‌ಗೆ ಡಿಕ್ಕಿ ಹೊಡೆದು 285 ಮಂದಿ ಮೃತಪಟ್ಟು, 300 ಮಂದಿ ಗಾಯಗೊಂಡಿದ್ದರು. ಮೃತರಲ್ಲಿ ಸೇನೆ, ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್ ಯೋಧರು ಸೇರಿದ್ದರು
● 1998 ನವೆಂಬರ್ 26	ಪಂಜಾಬ್‌ನ ಖಾನ್ನಾದಲ್ಲಿ ಜಮ್ಮು ತವಿ - ಸೀಲ್ದಾಹ್ ಎಕ್ಸ್‌ಪ್ರೆಸ್ ರೈಲು, ಹಳಿತಪ್ಪಿ ಮಗುಚಿದ್ದ ಗೋಲ್ಡನ್ ಟೆಂಪಲ್ ಮೇಲ್‌ನ ಬೋಗಿಗಳಿಗೆ ಡಿಕ್ಕಿಹೊಡೆದು 212 ಮಂದಿ ಮೃತಪಟ್ಟಿದ್ದರು
● 2005 ಅಕ್ಟೋಬರ್ 29	ಆಂಧ್ರಪ್ರದೇಶದ ವಾಲಿಗೊಂಡದಲ್ಲಿ ಪ್ರವಾಹಕ್ಕೆ ಹಳಿ ಕೊಚ್ಚಿಹೋದ ಕಾರಣ ಡೆಲ್ಟಾ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಹಳಿತಪ್ಪಿ ಮಗುಚಿ 114 ಮಂದಿ ಪ್ರಯಾಣಿಕರು ಸಾವನ್ನಪ್ಪಿದ್ದರು. 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
● 2016 ನವೆಂಬರ್ 20	ಉತ್ತರ ಪ್ರದೇಶದ ಪುಖ್ರಾಯನ್‌ನಲ್ಲಿ ಇಂದೋರ್– ರಾಜೇಂದ್ರ ನಗರ ಎಕ್ಸ್‌ಪ್ರೆಸ್ ರೈಲಿನ 14 ಬೋಗಿಗಳು ಹಳಿತಪ್ಪಿ ಬಿದ್ದು 152 ಮಂದಿ ಸಾವನ್ನಪ್ಪಿ, 260 ಮಂದಿ ಗಾಯಗೊಂಡಿದ್ದರು
● 2010 ಮೇ 28	ಮುಂಬೈಗೆ ತೆರಳುತ್ತಿದ್ದ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲು ಪಶ್ಚಿಮ ಬಂಗಾಳದ ಜಾರ್‌ಗ್ರಮ್‌ನಲ್ಲಿ ಹಳಿತಪ್ಪಿ, ಸರಕು ಸಾಗಣೆ ರೈಲಿಗೆ ಡಿಕ್ಕಿ ಹೊಡೆದು 148 ಮಂದಿ ಮೃತಪಟ್ಟಿದ್ದರು
● 2022 ಸೆಪ್ಟೆಂಬರ್ 9	ಬಿಹಾರದ ರಫಿಗಂಜ್‌ನ ಧಾವೆ ನದಿಯ ಸೇತುವೆ ಮೇಲೆ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಹಳಿತಪ್ಪಿ ಉಂಟಾದ ಅವಘಡದಲ್ಲಿ 140 ಮಂದಿ ಸಾವನ್ನಪ್ಪಿದ್ದರು.

3 ವರ್ಷಗಳಲ್ಲಿ ಯಾವುದೇ ರೈಲು ದುರಂತ ನಡೆದಿರಲಿಲ್ಲ. ಒಡಿಶಾ ರೈಲು ದುರಂತ ದುರ್ದೈವದ ಸಂಗತಿ. ದುರಂತದಲ್ಲಿ ಮೃತರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಕೇಂದ್ರ ಎಲ್ಲ ರೀತಿಯ ನೆರವು ನೀಡುತ್ತಿದೆ.
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಮೃತರ ಕುಟುಂಬಗಳಿಗೆ ತಲಾ ₹ 12 ಲಕ್ಷ ಪರಿಹಾರ

ನವದೆಹಲಿ (ಪಿಟಿಐ) : ರೈಲು ಅವಘಡದಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ತಲಾ ₹10 ಲಕ್ಷ, ತೀವ್ರವಾಗಿ ಗಾಯಗೊಂಡವರಿಗೆ ₹2 ಲಕ್ಷ ಮತ್ತು ಅಲ್ಪ ಪ್ರಮಾಣದಲ್ಲಿ ಗಾಯಗೊಂಡವರಿಗೆ ₹50,000 ನೆರವು ನೀಡಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಘೋಷಿಸಿದ್ದಾರೆ.

ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (ಪಿಎಂಎನ್‌ಆರ್‌ಎಫ್) ಪ್ರತ್ಯೇಕವಾಗಿ ಮೃತರ ಕುಟುಂಬಸ್ಥರಿಗೆ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50,000 ನೀಡುವುದಾಗಿ ಪ್ರಧಾನಮಂತ್ರಿಗಳ ಕಾರ್ಯಾಲಯ ತಿಳಿಸಿದೆ.

ದುರಂತದಲ್ಲಿ ಮೃತಪಟ್ಟ ಪಶ್ಚಿಮ ಬಂಗಾಳದ ಪ್ರಯಾಣಿಕರ ಕುಟುಂಬಸ್ಥರಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ.

ರದ್ದು: ಈ ಅವಘಡ ಹಿನ್ನೆಲೆಯಲ್ಲಿ 90 ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದ್ದರೆ, 46 ರೈಲುಗಳ ಮಾರ್ಗ ಬದಲಾಯಿಸಲಾಗಿದೆ.

'ಕವಚ' ಅಳವಡಿಕೆ ಕಾರ್ಯ ನಡೆಯುತ್ತಿದೆ: ರೈಲ್ವೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬಾಲಸೋರ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಅಪಘಾತವು, ರೈಲುಗಳು ಡಿಕ್ಕಿಯಾಗುವುದನ್ನು ಸ್ವಯಂಚಾಲಿತವಾಗಿ ತಡೆಯುವ 'ಕವಚ' ವ್ಯವಸ್ಥೆಯತ್ತ ಗಮನ ಸೆಳೆದಿದೆ.

ರೈಲುಗಳ ಅಪಘಾತ ಸಂಭವಿಸಿದ ಈ ಮಾರ್ಗದಲ್ಲಿ 'ಕವಚ' ಸುರಕ್ಷಾ ವ್ಯವಸ್ಥೆಯನ್ನು ಅಳವಡಿಸಿರಲಿಲ್ಲ. ಆದರೆ, ಎಲ್ಲ ಮಾರ್ಗಗಳಲ್ಲಿ ಈ ವ್ಯವಸ್ಥೆ ಅಳವಡಿಸುವ ಕಾರ್ಯ ನಡೆಯುತ್ತಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'ಈ ಅಪಘಾತವು 'ಕವಚ' ವ್ಯವಸ್ಥೆ ಇಲ್ಲದ ಕಾರಣಕ್ಕೆ ಸಂಭವಿಸಿಲ್ಲ. ಹಳಿಗಳನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದ ವ್ಯವಸ್ಥೆಯಲ್ಲಿನ ಲೋಪವೇ ಅಪಘಾತಕ್ಕೆ ಕಾರಣ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಹೇಳಿದ್ದಾರೆ.

'ಹಳಿಗಳಲ್ಲಿ ಯಾವುದೇ ದೋಷಗಳಿಲ್ಲ. ಅವಘಡ ಕುರಿತು ತನಿಖೆಗೆ ಅದೇಶಿಸಲಾಗಿದ್ದು, ಅದು ಪೂರ್ಣಗೊಂಡ ನಂತರ ಕಾರಣ ತಿಳಿಯಲಿದೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪರೀಕ್ಷಾರ್ಥ ಪ್ರಯೋಗ: 'ಕವಚ' ಸುರಕ್ಷಾ ವ್ಯವಸ್ಥೆಯನ್ನು ಸಂಶೋಧನೆ, ವಿನ್ಯಾಸ ಹಾಗೂ ಮಾನಕ ಸಂಸ್ಥೆ (ಆರ್‌ಡಿಎಸ್‌ಒ) ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ₹ 16.88 ಕೋಟಿ ವೆಚ್ಚವಾಗಿದೆ.

ಈ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿವೆ. ದಕ್ಷಿಣ ಮಧ್ಯ ರೈಲ್ವೆಯ ಲಿಂಗಂಪಲ್ಲಿ–ವಿಕಾರಾಬಾದ್–ವಾಡಿ, ವಿಕಾರಾಬಾದ್–ಬೀದರ್ ಮಾರ್ಗಗಳಲ್ಲಿ ಈ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿದೆ. ದಕ್ಷಿಣ ಮಧ್ಯ ರೈಲ್ವೆ ವ್ಯಾಪ್ತಿಯ 1,455 ಕಿ.ಮೀ. ಉದ್ದದ ಮಾರ್ಗದಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಮುಂದಿನ ವರ್ಷ ನವದೆಹಲಿ–ಹೌರಾ ಮತ್ತು ನವದೆಹಲಿ–ಮುಂಬೈ ನಡುವಿನ ಒಟ್ಟು 2,951 ಕಿ.ಮೀ. ಉದ್ದದ ಮಾರ್ಗಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲು ಟೆಂಡರ್ ಕರೆಯಲಾಗಿದೆ.

35,736 ಕಿ.ಮೀ. ಉದ್ದ ಮಾರ್ಗದಲ್ಲಿ 'ಕವಚ' ವ್ಯವಸ್ಥೆ ಅಳವಡಿಕೆಗೆ ಮಂಜೂರಾತಿ ನೀಡ ಲಾಗಿದೆ. ನಂತರ, 6 ಸಾವಿರ ಕಿ.ಮೀ. ಮಾರ್ಗದಲ್ಲಿ ಅಳವಡಿಸಲು ಯೋಜಿಸಲಾಗಿದೆ ಎಂದು ರೈಲ್ವೆ ಮೂಲಗಳು ಹೇಳಿವೆ.

'ಕವಚ'ದ ವೈಶಿಷ್ಟ್ಯಗಳು

- ರೈಲು ರೆಡ್ ಸಿಗ್ನಲ್ ದಾಟಿ ಹೋದಾಗ, ಈ ವ್ಯವಸ್ಥೆಯು ಚಾಲಕನಿಗೆ ಎಚ್ಚರಿಕೆ ಸಂದೇಶ ನೀಡುತ್ತದೆ.
- ಮಾರ್ಗದಲ್ಲಿ ಮತ್ತೊಂದು ರೈಲು ಸಂಚರಿಸುತ್ತಿದ್ದರೆ, ನಿರ್ದಿಷ್ಟ ಅಂತರವಿರುವಾಗಲೇ ಆ ರೈಲನ್ನು ಗುರುತಿಸುವ ಈ ವ್ಯವಸ್ಥೆ ತಕ್ಷಣವೇ ಬ್ರೇಕ್ ಹಾಕಿ ರೈಲು ನಿಲ್ಲುವಂತೆ ಮಾಡುತ್ತದೆ.
- ರೈಲುಗಳ ಮಧ್ಯೆ ಮುಖಾಮುಖಿ ಡಿಕ್ಕಿ ತಪ್ಪಿಸುತ್ತದೆ.
- ರೈಲ್ವೆ ಕ್ರಾಸಿಂಗ್ ಗೇಟ್‌ಗಳು ಸಮೀಪಿಸುತ್ತಿದ್ದಂತೆಯೇ ಸ್ವಯಂಚಾಲಿತವಾಗಿ ಜೋರಾದ ಶಿಳ್ಳೆ ಹೊಡೆದು ಎಚ್ಚರಿಕೆಯ ಸಂದೇಶ ರವಾನಿಸುತ್ತದೆ.
- ಚಾಲಕ ಬ್ರೇಕ್‌ಗಳನ್ನು ಹಾಕಲು ವಿಫಲನಾದ ಸಂದರ್ಭದಲ್ಲಿ ಸ್ವಯಂಚಾಲಿತವಾಗಿ ಬ್ರೇಕ್ ಹಾಕಿ ರೈಲಿನ ವೇಗವನ್ನು ನಿಯಂತ್ರಿಸುತ್ತದೆ
- ಅತ್ಯಂತ ದಟ್ಟವಾದ ಮಂಜಿನ ವಾತಾವರಣದಲ್ಲೂ ರೈಲು ಸುರಕ್ಷಿತವಾಗಿ ಚಲಿಸಲು ನೆರವಾಗುತ್ತದೆ.

ಹೊಣೆಗಾರಿಕೆ ನಿಗದಿಗೆ ವಿಪಕ್ಷಗಳ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಡಿಶಾದಲ್ಲಿ ಭೀಕರ ರೈಲು ಅಪಘಾತ ಸಂಭವಿಸಿದ ಬೆನ್ನಲ್ಲೇ, ಪ್ರಯಾಣಿಕರ ಸುರಕ್ಷತೆ ಬಗ್ಗೆ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ಮುಂದೆ ಕೆಲ ಪ್ರಶ್ನೆಗಳನ್ನಟ್ಟಿವೆ.

ಬಾಲಸೋರ್ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದ ಬಗ್ಗೆ ಆಘಾತ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳ ನಾಯಕರು, ಈ ದುರಂತಕ್ಕೆ ಸಂಬಂಧಿಸಿ ಹೊಣೆಗಾರಿಕೆ ನಿಗದಿ ಮಾಡಬೇಕು ಹಾಗೂ ಸಮಗ್ರ ತನಿಖೆ ನಡೆಯಬೇಕು ಎಂದು ಆಗ್ರಹಿಸಿದ್ದಾರೆ.

'ಈ ಅಪಘಾತದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಹಲವಾರು ಪ್ರಶ್ನೆಗಳನ್ನು ಕೇಳಬೇಕಿದೆ. ಆದರೆ, ತಕ್ಷಣಕ್ಕೆ ರಕ್ಷಣಾ ಕಾರ್ಯವೇ ಮುಖ್ಯ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ರೈಲ್ವೆ ಆಧುನೀಕರಣಕ್ಕಾಗಿ ರೂಪಿಸಿರುವ ಯೋಜನೆಗಳಲ್ಲಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ಇರಬೇಕು' ಎಂದಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಗಾಯಾಳುಗಳಿಗೆ ಚಿಕಿತ್ಸೆ ನೀಡುವ ಮೂಲಕ ಸಾವಿನ ಸಂಖ್ಯೆ ಹೆಚ್ಚುವುದನ್ನು ತಡೆಯಬೇಕು ಎಂದು ಆಗ್ರಹಿಸಿದ್ದಾರೆ.

'ಇದು ಈ ಶತಮಾನದ ದೊಡ್ಡ ರೈಲು ಅಪಘಾತ' ಎಂದು ಘಟನಾ ಸ್ಥಳಕ್ಕೆ ಭೇಟಿ ನೀಡಿರುವ ಪಶ್ಚಿಮ ಬಂಗಾಳ ಸಿ.ಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಮಾಜಿ ರೈಲ್ವೆ ಸಚಿವರೂ ಆಗಿರುವ ಅವರು, 'ರೈಲುಗಳ ಡಿಕ್ಕಿ ತಡೆಯುವ 'ಕವಚ' ವ್ಯವಸ್ಥೆ ಈ ಮಾರ್ಗದಲ್ಲಿ ಯಾಕೆ ಇಲ್ಲ' ಎಂದು ಪ್ರಶ್ನಿಸಿದ್ದಾರೆ.

'ಮಮತಾ ಬ್ಯಾನರ್ಜಿ ಅವರು ರೈಲ್ವೆ ಸಚಿವರಾಗಿದ್ದಾಗ ರೈಲುಗಳಲ್ಲಿ 'ಡಿಕ್ಕಿ ತಡೆಯುವ ಸಾಧನ'ಗಳ ಅಳವಡಿಕೆಗೆ ಅನುದಾನ ಒದಗಿಸಿದ್ದರು. ಈ ಅನುದಾನ ಬಳಕೆ ಕುರಿತು ಕೇಂದ್ರ ಸರ್ಕಾರ ಶ್ವೇತಪತ್ರ ಪ್ರಕಟಿಸಬೇಕು' ಎಂದು ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಆಗ್ರಹಿಸಿದ್ದಾರೆ.

ಜೆಡಿಯು, ಆರ್‌ಜೆಡಿ ಹಾಗೂ ಇತರ ಪಕ್ಷಗಳ ಮುಖಂಡರು ಕೂಡ ಘಟನೆ ಕುರಿತು ತನಿಖೆ ನಡೆಸಬೇಕು ಹಾಗೂ ನೈತಿಕ ಹೊಣೆ ಹೊತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಅವಘಡದ ಹಿಂದೆ ಯಾವುದೋ ಪಿತೂರಿ ಇರಬಹುದು. ಸತ್ಯ ಹೊರಗೆ ಬರಲೇಬೇಕು. ಇದಕ್ಕಾಗಿ ಸಮಗ್ರ ತನಿಖೆ ನಡೆಸುವುದು ಅಗತ್ಯ
ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸರ್ಕಾರ ಐಷಾರಾಮಿ ರೈಲುಗಳ ಬಗ್ಗೆ ಮಾತ್ರ ಗಮನ ಹರಿಸುತ್ತಿದೆ. ಸಾಮಾನ್ಯ ಜನರು ಓಡಾಡುವ ರೈಲುಗಳು, ಹಳಿಗಳನ್ನು ನಿರ್ಲಕ್ಷಿಸುತ್ತಿದೆ.
ವಿನಯ್ ವಿಶ್ವಂ
ಸಿಪಿಐ ನಾಯಕ

ಕಳಸದ 110 ಯಾತ್ರಿಗಳು ಸುರಕ್ಷಿತ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಒಡಿಶಾ ಬಾಲಸೋರ್ ಜಿಲ್ಲೆಯ ಬಹನಾಗಾದಲ್ಲಿ ಶುಕ್ರವಾರ ಸಂಜೆ ಅಪಘಾತಕ್ಕೆ ಒಳಗಾದ ರೈಲಿನಲ್ಲಿ ಇದ್ದ ಕಳಸ ತಾಲ್ಲೂಕಿನ ಎಲ್ಲ 110 ಯಾತ್ರಿಗಳು ಸುರಕ್ಷಿತವಾಗಿದ್ದಾರೆ.

ಕಳಸ ತಾಲ್ಲೂಕಿನ ಕಳಸ, ಹೊರನಾಡು, ಸಂಸೆ ಮತ್ತಿತರ ಪ್ರದೇಶದಿಂದ 110 ಜನರು ಜಾರ್ಖಂಡ್ ರಾಜ್ಯದ ಶಿಖರಜಿ ಪುಣ್ಯಕ್ಷೇತ್ರದ ಪ್ರವಾಸಕ್ಕೆ ತೆರಳಿದ್ದರು. ಮಹಿಮಾ ಸಾಗರ ಮುನಿಗಳ ಸಹಕಾರದಿಂದ ಅವರು ಯಾತ್ರೆಗೆ ಹೊರಟಿದ್ದರು. ಬೆಂಗಳೂರು-ಹೌರಾ ಎಕ್ಸ್‌ಪ್ರೆಸ್ ರೈಲು ಸರಕು ರೈಲಿಗೆ ಗುದ್ದಿದಾಗ 300ಕ್ಕೂ ಹೆಚ್ಚು ಪ್ರಯಾಣಿಕರು ಮೃತಪಟ್ಟರು ಎಂಬ ಸುದ್ದಿ ಕಳಸದಲ್ಲಿ ಆತಂಕ ಮನೆಮಾಡಿತ್ತು. ಆದರೆ, ಇಲ್ಲಿನ ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿ ಇರುವ ವಿಷಯ ನೆಮ್ಮದಿ ತಂದಿದೆ.

ವಿಶಾಖಪಟ್ಟಣದವರೆಗೂ ಇದೇ ರೈಲಿನ ಕಡೆಯ 4 ಬೋಗಿಗಳಲ್ಲಿ ಕಳಸದ ಯಾತ್ರಿಕರು ಇದ್ದರು. ಆದರೆ, ಅಲ್ಲಿ ರೈಲಿನ ಎಂಜಿನ್ ಬದಲಿಸಿದ್ದರಿಂದ ಹಿಂದಿನ ಬೋಗಿಗಳು ಮುಂಭಾಗಕ್ಕೆ ಬಂದಂತಾಯಿತು. ಇದರಿಂದ ಕಳಸದ ಯಾತ್ರಿಗಳ ಜೀವ ಉಳಿಯಿತು ಎಂದು ಯಾತ್ರೆಯ ತಂಡದಲ್ಲಿರುವ ಕಳಸದ ಶೇಷರಾಜ್ ಜೈನ್ ತಿಳಿಸಿದ್ದಾರೆ.

'ಕಳಸದ ಯಾತ್ರಿಗಳು ಬಸ್ ಮೂಲಕ ಶನಿವಾರ ಕೋಲ್ಕತ್ತ ತಲುಪಿದ್ದು, ಭಾನುವಾರ ಶಿಖರಜಿ ತಲುಪುವ ನಿರೀಕ್ಷೆ ಇದೆ' ಎಂದು ಸರ್ವೋದಯ ತೀರ್ಥ ಸಮಿತಿ ಅಧ್ಯಕ್ಷ ಬ್ರಹ್ಮದೇವ ಪ್ರತಿಕ್ರಿಯಿಸಿದ್ದಾರೆ.

ರೈಲು ದುರಂತ: ಮೃತರ ಸಂಖ್ಯೆ 288ಕ್ಕೆ

ಒಂದನೇ ಪುಟದಿಂದ...

ನೆರೆಯ ಪಶ್ಚಿಮ ಬಂಗಾಳದ ಬ್ಯಾರಕ್‌ಪುರ ಹಾಗೂ ಪನಾಗಢದಿಂದ ಬಂದಿರುವ, ಸೇನೆಯ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ತಂಡಗಳನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯುವ ಸಲುವಾಗಿ ಎರಡು ಎಂಐ–17 ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ ಎಂದು ರಕ್ಷಣಾ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಸವಾಲಿನ ರಕ್ಷಣಾ ಕಾರ್ಯ: ಅಪಘಾತದಿಂದಾಗಿ ಹಳಿಗಳಿಂದ ತುಸು ದೂರ ಬಿದ್ದಿರುವ ಬೋಗಿಗಳನ್ನು ಎತ್ತುವುದು ಹಾಗೂ ಅದರಡಿ ಸಿಲುಕಿರುವವರ ರಕ್ಷಣೆಯೇ ಸವಾಲಿನದಾಗಿತ್ತು. ಈ ಕಾರ್ಯದಲ್ಲಿ ದೊಡ್ಡ ಕ್ರೇನ್‌ಗಳು ಹಾಗೂ ಬುಲ್‌ಡೋಜರ್‌ಗಳನ್ನು ಬಳಸಲಾಗಿದೆ.

ಹಳಿ ತಪ್ಪಿ, ಉರುಳಿ ಬಿದ್ದಿದ್ದ ಬೋಗಿಗಳ ಕಿಟಕಿ, ಬಾಗಿಲು ಸೇರಿ ಇತರ ಭಾಗಗಳನ್ನು 'ಗ್ಯಾಸ್ ಕಟರ್'ಗಳ ಮೂಲಕ ಕತ್ತರಿಸಿ, ಅಲ್ಲಿ ಸಿಲುಕಿದ್ದವರನ್ನುರಕ್ಷಿಸಲಾಯಿತು.

ರಕ್ತಸಿಕ್ತ ದೇಹಗಳು...

ರಕ್ತಸಿಕ್ತ ಹಾಗೂ ವಿರೂಪಗೊಂಡ ಮೃತದೇಹಗಳು ಅಪಘಾತದ ಗಂಭೀರತೆಯನ್ನು ಹೇಳುತ್ತಿದ್ದವು. ಡಿಕ್ಕಿಯ ರಭಸಕ್ಕೆ ಸಿಲುಕಿ ಸತ್ತವರ ದೇಹಗಳು ಒಂದರ ಮೇಲೊಂದು ಹಾಗೂ ಒಂದಕ್ಕೊಂದು ತಾಗಿ ಬಿದ್ದ ಪರಿಣಾಮ, ಅಪಘಾತ ಸಂಭವಿಸಿದ ಸ್ಥಳದಲ್ಲಿ ವಿಲಕ್ಷಣ, ಭಯಂಕರ ದೃಶ್ಯಗಳು ರಾಚುತ್ತಿದ್ದವು.

ಒಂದು ಪ್ರಬಲ ಚಂಡಮಾರುತವು ಬೋಗಿಗಳಿಗೆ ಅಪ್ಪಳಿಸಿ, ಅವುಗಳನ್ನು ಒಂದರ ಮೇಲೊಂದು ಎಸೆಯಲಾಗಿದೆಯೇ ಎನ್ನುವ ರೀತಿಯಲ್ಲಿ ಘಟನಾ ಸ್ಥಳ ಕಾಣುತ್ತಿತ್ತು.

ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಬಾಲಸೋರ್ ಜಿಲ್ಲಾ ಆಸ್ಪತ್ರೆ ಮತ್ತು ಸೊರೊ ಆಸ್ಪತ್ರೆಗಳು ಗಾಯಾಳುಗಳಿಂದ ತುಂಬಿ ಹೋಗಿವೆ. ಆಸ್ಪತ್ರೆಗಳ ಕೋಣೆಗಳಲ್ಲಿ ಜಾಗವಿಲ್ಲದೆ ಕಾರಿಡಾರ್‌ಗಳಲ್ಲಿಯೂ ಚಿಕಿತ್ಸೆ ನೀಡಲಾಗುತ್ತಿದೆ.

ಎರಡು ಸಾವಿರ ಜನರಿಂದ ರಕ್ತದಾನ!

ಬಾಲಸೋರ್ ಜಿಲ್ಲಾಸ್ಪತ್ರೆಯಲ್ಲಿ ದಾಖಲಾದ ಗಾಯಾಳುಗಳಿಗಾಗಿ ರಕ್ತ ನೀಡಲು ಎರಡು ಸಾವಿರದಷ್ಟು ಜನರು ಜಮಾಯಿಸಿದ್ದರು. ಪೊಲೀಸರು ಸೇರಿದಂತೆ ಸ್ಥಳೀಯರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿ ಕಾಳಜಿ ಮೆರೆದಿದ್ದಾರೆ.

'ರಕ್ತದಾನ ಮಾಡಲು ಆಸ್ಪತ್ರೆಯ ಮುಂದೆ ಜಮಾಯಿಸಿದ್ದನ್ನು ಕಂಡು ಆಶ್ಚರ್ಯವಾಯಿತು. ದಾನಿಗಳಿಂದ 500 ಯುನಿಟ್ ರಕ್ತ ಸಂಗ್ರಹಿಸಲಾಗಿದೆ. ಇದು ನನ್ನ ವೃತ್ತಿ ಜೀವನದಲ್ಲಿ ಮರೆಯಲಾಗದ ದೊಡ್ಡ ಅನುಭವ' ಎಂದು ಡಾ.ಮೃತ್ಯುಂಜಯ ಮಿಶ್ರಾ ಹೇಳಿದರು.



ಬೇಯುತ್ತಿದೆ ಭೂಮಿ, ಎ.ಸಿ. ಸರ್ವಾಂತರ್ಯಾಮಿ

ಗುರುರಾಜ್ ಎಸ್. ದಾವಣಗೆರೆ

ಐದನೇ ಕ್ಲಾಸಿನ ಅಸಾವರಿ ಪೋಪಟ್ ಮತ್ತು ತನ್ಮಯಿ ಇಬ್ಬರೂ ಅಂದು ತುಂಬಾ ಅವಸರದಲ್ಲಿದ್ದರು. ತರಗತಿಯ ಕೊನೆ ಬೆಲ್ ಬಾರಿಸುತ್ತಿದ್ದಂತೆ ಗಡಿಬಿಡಿಯಲ್ಲಿ ಬ್ಯಾಗಿಗೆ ಪುಸ್ತಕ ತುಂಬಿಕೊಂಡವರೇ ಶಾಲಾ ಕೊಠಡಿಯಿಂದ ಹೊರಗೆ ಓಡಿಯೇಬಿಟ್ಟರು. ಅದಕ್ಕೂ ಮುಂಚೆ ತರಗತಿಯ ಮಧ್ಯೆ ಪಿಸುಪಿಸು ಮಾತನಾಡಿಕೊಂಡು ಖುಷಿಯಿಂದ ಕುಳಿತಿದ್ದ ಇಬ್ಬರನ್ನೂ ಗಣಿತದ ಮೇಷ್ಟ್ರು 'ಕಾಯ್ ಸಮಾಚಾರ್? ಕಾಯ್ ಚಾಲಾಲೆ? ಬಸೂನ್ ಬರಬರನೀ ಪಾಠ್ ಐಕ್' (ಏನು ಸಮಾಚಾರ, ಏನೋ ನಡಿಸಿದ್ದೀರಲ್ಲ, ಗಂಭೀರವಾಗಿ ಕುಳಿತುಕೊಂಡು ಪಾಠ ಕೇಳಿ) ಎಂದು ಗದರಿದ್ದರು.

ಇಬ್ಬರ ಖುಷಿ, ಗಡಿಬಿಡಿ ಧಾವಂತಕ್ಕೆ ಕಾರಣ ಧಾರಾವಿಯ ಅವರ ಜೋಪಡಪಟ್ಟಿಯ ಒಂದಂಕಣದ ಮನೆಗೆ ಹೊಸದಾಗಿ ಸೇರ್ಪಡೆಯಾಗಿದ್ದ ಏರ್‌ಕಂಡೀಶನರ್! ಕಾಸಿಗೆ ಕಾಸು ಕೂಡಿಟ್ಟು ಬಾಬಾ–ಆಯಿ (ಅಪ್ಪ–ಅಮ್ಮ) ಇಬ್ಬರೂ ಶ್ರಮಪಟ್ಟು ದುಡಿದು ಪ್ರಮುಖ ಕಂಪನಿಯೊಂದರ ತ್ರೀ ಸ್ಟಾರ್ ಏರ್‌ಕಂಡೀಶನರ್‌ನ್ನು ತಂದೇಬಿಟ್ಟಿದ್ದರು. ಅದನ್ನು ಫಿಟ್ ಮಾಡುವ ದಿನ ಇಬ್ಬರೂ ಶಾಲೆಗೆ ಚಕ್ಕರ್ ಹಾಕಿ ಮನೆಯಲ್ಲೇ ಇದ್ದುಕೊಂಡು ಮೆಕ್ಯಾನಿಕ್ ಸಾವಂತ್ ಅದನ್ನು ಆನ್ ಮಾಡುವವರೆಗೂ ಬಿಡುಗಣ್ಣಿನಿಂದ ನೋಡುತ್ತಲೇ ಇದ್ದರು. ಸ್ವಿಚ್ ಆನ್ ಮಾಡಿದ ಹತ್ತು ನಿಮಿಷಗಳ ನಂತರ ಸೂಸಿದ ತಣ್ಣನೆಯ ಗಾಳಿಗೆ ಮುಖವೊಡ್ಡಿ ಚಪ್ಪಾಳೆ ಹೊಡೆದು ಕುಣಿದು ಕುಪ್ಪಳಿಸಿದ್ದನ್ನು ಕಂಡ ಅಪ್ಪ ಯಶವಂತ ಮಾನೆ ಮತ್ತೆ ತಾಯಿ ಅಂಕಿತಾ ಭಿಡೆ ಇಬ್ಬರಿಗೂ ಜಗತ್ತನ್ನೇ ಗೆದ್ದ ಅನುಭವ. ಚಾಳ್‌ನ ಸುತ್ತಲಿನ ಮನೆಗಳಲ್ಲಿ ಇವರ ಎ.ಸಿಯ ಕುರಿತು ಎದ್ದ ಮೆಚ್ಚುಗೆಯ ಮಾತುಗಳಿಂದ ಹೊಸ ಉಮೇದು ಪಡೆದು ತಮ್ಮ ತಮ್ಮ ಕೆಲಸಕ್ಕೆ ಹೊರಟಿದ್ದರು.

> ಹವಾನಿಯಂತ್ರಣ ಬಳಸುತ್ತಿರುವವರಲ್ಲಿ ಎಂತೆಂಥವರೆಲ್ಲ ಇದ್ದಾರೆ ಎನ್ನುವುದೇ ಗಮನ ಸೆಳೆಯುವಂತಿದೆ. ಅವುಗಳ ತಂತ್ರಜ್ಞಾನದಲ್ಲೂ ವ್ಯಾಪಕ ಬದಲಾವಣೆಗಳಾಗುತ್ತಿವೆ. ಜೂನ್ 5 ವಿಶ್ವ ಪರಿಸರ ದಿನ. ಆ ನೆವದಲ್ಲಿ ಎ.ಸಿ ಗ್ರಾಹಕಲೋಕದಲ್ಲೊಂದು ಸುತ್ತು...

ಅದು ಮುಂಬೈನ ಕೊಳೆಗೇರಿಯಲ್ಲಿರುವ ಟ್ಯಾಕ್ಸಿ ಡ್ರೈವರ್ ಯಶವಂತರಾವ್ ಮಾನೆಯ ಹಾಲ್ ಕಮ್ ಕಿಚನ್ ಕಮ್ ಬೆಡ್‌ರೂಮು ಇರುವ ಮನೆಯಲ್ಲದ ಮನೆ! ಮಾಳಿಗೆಯ ಜಿಂಕ್‌ಶೀಟಿನಿಂದ ಹೊಮ್ಮುವ ಬಿಸಿಯೇ ಇವರ ಕುಟುಂಬದ ಪಾಲಿನ ದೊಡ್ಡ ಶತ್ರು. ಸುಡುಧಗೆಯಿಂದಾಗಿ ಮಕ್ಕಳು ಶಾಲೆಗೆ ಹೋದದ್ದಕ್ಕಿಂತ ಜ್ವರ ಬಂದು ಮನೆಯಲ್ಲಿ ಮಲಗಿ ಬಳಲಿದ್ದೇ ಹೆಚ್ಚು. ಐದಾರು ಮನೆಗಳಲ್ಲಿ ಕೆಲಸ ಮಾಡುತ್ತಿದ್ದ ಅಂಕಿತ ಮತ್ತು ನಾಲ್ಕೈದು ಟ್ರಿಪ್‌ಗಳಿಗೇ ಸುಸ್ತಾಗುತ್ತಿದ್ದ ಯಶವಂತರಿಗೆ ಕಂಡ ಏಕೈಕ ಪರಿಹಾರ ತಂಪು ಹವೆ ಚಿಮ್ಮಿಸುವ ಏರ್ ಕಂಡೀಶನರ್!


ಈಗ ಕುಟುಂಬದ ಜೀವನ ಶೈಲಿಯೇ ಬದಲಾಗಿದೆ. ಎಲ್ಲರೂ ದಿನದ ತಂತಮ್ಮ ಕೆಲಸಗಳನ್ನು ಗೆಲುವಿನಿಂದ ಮಾಡಿ ಮುಗಿಸುತ್ತಿದ್ದಾರೆ. ಅಂಕಿತಾ ಮೊದಲಿದ್ದ ಐದು ಮನೆಗಳ ಜೊತೆ ಇನ್ನೆರಡು ಮನೆಗಳ ಕೆಲಸ ಒಪ್ಪಿಕೊಂಡಿದ್ದಾಳೆ. ಮಾನೆ ದಿನಕ್ಕೆ ಮಿನಿಮಮ್ ಹತ್ತು ಟ್ರಿಪ್ ಮಾಡುತ್ತಿದ್ದಾನೆ. ಇಡೀ ಕುಟುಂಬ ಎಸಿಯ ತಂಪಿನಲ್ಲಿ ರಾತ್ರಿಯ ಸುಖ ನಿದ್ದೆ ಮಾಡುತ್ತಿದೆ. ಒಂದೆಡೆ 'ಎ.ಸಿ'ಯ ತಣ್ಣನೆಯ ಗಾಳಿಯಲ್ಲಿ ಭಾರತದ ಸಾಮಾನ್ಯ ಪ್ರಜೆ ನೆಮ್ಮದಿಯ ನಿದ್ರೆಗೆ ಜಾರಿದರೆ, ಇನ್ನೊಂದೆಡೆ ಹಗಲಿನ ಭಾರತ ಬೇಸಿಗೆಯ ಬಿಸಿಯಲ್ಲಿ ಬೇಯುತ್ತಿದೆ. ನಲವತ್ತು ಡಿಗ್ರಿ ಸೆಲ್ಷಿಯಸ್ ಉಷ್ಣಾಂಶ ಜನರ ನಿದ್ದೆ, ಆರೋಗ್ಯ ಎರಡನ್ನೂ ಬಲಿತೆಗೆದುಕೊಳ್ಳುತ್ತಿದೆ. ಉಷ್ಣ ಮಾರುತ ಉತ್ತರ ಭಾರತದ ನೂರಕ್ಕೂ ಹೆಚ್ಚು ಜನರ ಉಸಿರು ನಿಲ್ಲಿಸಿದೆ.

ತಣ್ಣನೆಯ ಬದುಕಿಗೆ ತ್ಯಾಗದ ಬೆಳಕು

ಉಣ್ಣಲು, ಉಡಲು ಕಡಿಮೆಯಾದರೆ ಚಿಂತೆಯಿಲ್ಲ. ಮನೆ ತಂಪಾಗಿರಬೇಕೆಂದು ನಿರ್ಧರಿಸಿ ಜನ ಹವಾನಿಯಂತ್ರಕಗಳ ಮೊರೆಹೋಗುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಈ ದಶಕದ ಕೊನೆಯ ವೇಳೆಗೆ ಹೊಸದಾಗಿ ನೂರು ಕೋಟಿ ಎಸಿ ಘಟಕಗಳು ಮಾರಾಟವಾಗಿ ವಿವಿಧ ಸೈಜಿನ ಮನೆ ಸೇರಲಿವೆ.

ಎ.ಸಿ ಯಂತ್ರಗಳು ಹೊಮ್ಮಿಸುವ ಶಾಖವರ್ಧಕ ಅನಿಲಗಳು ಮನೆಯನ್ನೇನೋ ತಂಪು ಮಾಡುತ್ತವೆ. ಆದರೆ ಭೂಮಿ ಬೇಯಲು ಶುರುವಾಗುತ್ತದೆ. ಹಾಗೋ ಹೀಗೋ ಹಣ ಹೊಂದಿಸಿಕೊಂಡು ಎ.ಸಿ ಖರೀದಿಸಿತ್ತಿರುವ ಅನೇಕರು ನೆಮ್ಮದಿಯ ನಿದ್ದೆ ಮಾಡಿದರೆ ತಾನೇ ಮರುದಿನ ನಮ್ಮ ಕೆಲಸಗಳಿಗೆ ತೆರಳಬಹುದು ಎನ್ನುವ ಮಾತಾಡುತ್ತಿದ್ದಾರೆ. ದೆಹಲಿಯ ಪಿಯೂಷ್ ಹಲ್ದಾರ್ ಕೂಡ ಇದೇ ಅಭಿಪ್ರಾಯ ಮಂಡಿಸಿ, 'ಮಗ ಸಾಲಾರ್ ಹುಟ್ಟಿದಾಗ ದಿನದ ಟೆಂಪರೇಚರ್ 45 ಡಿಗ್ರಿ ದಾಟುತ್ತಿತ್ತು. ಅವನು ಬದುಕಿ ಉಳಿದದ್ದೇ ಹೆಚ್ಚು, ನಾವು ಮನೆಯವರೆಲ್ಲ ಒಂದು ಹೊತ್ತಿನ ಊಟ ಕಡಿಮೆಯಾದರೂ ಚಿಂತೆ ಇಲ್ಲ, ಎಂದು ಮನೆಗೆ ಎ.ಸಿ ಹಾಕಿಸಿದ್ದೇನೆ. ಈಗ ನಾವೆಲ್ಲ ನೆಮ್ಮದಿಯಿಂದ ನಿದ್ರೆ ಮಾಡುತ್ತಿದ್ದೇವೆ' ಎನ್ನುತ್ತಾರೆ.

9ನೇ ಪುಟಕ್ಕೆ...





ಫರ್ಡಿನಾಂಡ್ ಕಿಟೆಲ್ ಸಂಶೋಧಕರಾಗಿ ಮಾಡಿದ ಕೆಲಸಗಳು ಅಬ್ಬಳಿಯದೆ ಉಳಿದಿವೆ. ಅವರ ಕುರಿತು 80 ನಿಮಿಷಗಳ ಪೀರಿಯಡ್ ಸಾಕ್ಷ್ಯಚಿತ್ರ ತಯಾರಾಗಿದೆ. ಇಂಥದೊಂದು ಕೆಲಸ ಮಾಡಲು ಪ್ರೇರಣೆ ಪಡೆದು, ಅದನ್ನು ಆಗುಮಾಡಿದವರೇ ತಮ್ಮ ಅನುಭವವನ್ನು ಅಕ್ಷರರೂಪಕ್ಕೆ ಇಳಿಸಿದ್ದಾರೆ.

ವಾಗರ್ಥದ ಹುಡುಕಾಟದಲ್ಲಿ...

ಪ್ರಶಾಂತ್ ಪಂಡಿತ್

2021ರ ಮೇ ತಿಂಗಳ ಮೈಸೂರಿನ ಬಿಸಿಲಿಗೆ ಬೆವರುತ್ತ, ಅಲ್ಲಿಯವರೆಗೆ ಚಿತ್ರೀಕರಿಸಿ ತಂದ ಫೂಟೇಜನ್ನು ಪರಿಶೀಲಿಸುತ್ತ ಕುಳಿತಿರುವಾಗ ಬಂದ ಈಮೇಲ್‌ನಿಂದ ಏಕಾಗ್ರತೆಗೆ ಭಂಗವಾಯ್ತು. ಅದರ ಲಗತ್ತಿನಲ್ಲಿ ಇದ್ದದ್ದು ನೂರಾಮೂವತ್ತೈದು ವರ್ಷ ಹಳೆಯದಾದ ಪತ್ರವೊಂದರ ಉಲ್ಲೇಖ! ಪತ್ರದ ಒಂದೆರಡು ಸಾಲುಗಳು ಗಮನ ಸೆಳೆಯುವಂತಿತ್ತು. 'ಭೂಮಿಯ ವಾತಾವರಣ ಬದಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಸರಿಯಾಗಿ ಮಳೆಯೇ ಆಗಿಲ್ಲ. ರೈಲ್ವೆ ಆಗಲಿ ಪ್ರಾಪಗಾಂಡ ಆಗಲಿ ಇದನ್ನು ಬದಲಿಸಲಾರದು. ಯಾಕೆಂದರೆ ರೈಲ್ವೆಯು ಕಾಡನ್ನು ನಾಶಮಾಡುತ್ತದೆ ಮತ್ತು ಎತ್ತಿನ ಬಂಡಿಯವನ ಆದಾಯಕ್ಕೆ ಕುತ್ತು ತರುತ್ತದೆ. ಅದು ಅವರದೇ ಭೂಮಿಯ ಸಂಪತ್ತನ್ನು ಕಸಿದು ಬ್ರಿಟಿಷರ ಬೊಕ್ಕಸ ತುಂಬಿಸುತ್ತದೆ'. ಹೀಗೆ ಸಾಗಿತ್ತು ಆ ಪತ್ರದ ಕಳಕಳಿಯ ಸಾಲುಗಳು. ರೈಲು ಆಧುನಿಕ ಬದುಕಿಗೆ ಮುಖ್ಯವಾದರೂ ಕಾಡನ್ನೂ ಜನಸಾಮಾನ್ಯರ ಬದುಕನ್ನೂ ಅದು ಒಟ್ಟಿಗೇ ನಾಶ ಮಾಡುತ್ತಿರುವುದರ ಬಗ್ಗೆ ಕಳಕಳಿ ಹಾಗೂ ಆಳುವವರ ಪ್ರಾಪಗಾಂಡದ ಬಗೆಗಿನ ಕಟು ವಿಮರ್ಶೆ ನನ್ನ ಗಮನ ಸೆಳೆಯಿತು. ಅಂದಹಾಗೆ ನಮ್ಮ ಈ ಕಾಲಕ್ಕೆ ಕನ್ನಡಿ ಹಿಡಿದ ಹಾಗಿರುವ ಆ ಪತ್ರ ಬರೆದದ್ದು 1886ರಲ್ಲಿ! ಜರ್ಮನಿಯ ಅಜ್ಜಿಯ ಮನೆಯಲ್ಲಿದ್ದುಕೊಂಡು ಓದುತ್ತಿದ್ದ ತಮ್ಮ ಮಕ್ಕಳಾದ ಗಾಟ್‌ಫ್ರೀಡ್ ಮತ್ತು ಕಾರ್ಲ್‌ಗೆ ಆ ಪತ್ರ ಬರೆದದ್ದು ಧಾರವಾಡದಲ್ಲಿ ನಿಘಂಟಿನ ಕೆಲಸದಲ್ಲಿ ತೊಡಗಿದ್ದ ಫರ್ಡಿನಾಂಡ್ ಕಿಟೆಲ್! ಬ್ರಿಟಿಷ್ ಸರ್ಕಾರದ ಕೆಳಗೆ ಕೆಲಸ ಮಾಡುತ್ತಿದ್ದರೂ ಅದರ ಕಾರ್ಯವೈಖರಿಯ ಬಗ್ಗೆ ಕಿಟೆಲ್ ತಮ್ಮ ನಿಷ್ಠುರ ಅಭಿಪ್ರಾಯ ದಾಖಲಿಸಿದ್ದಾರೆ. ಇಂದು ಅಂತಹ ವಿದ್ವಾಂಸರನ್ನು ಕಷ್ಟಪಟ್ಟು ಹುಡುಕಬೇಕಾಗಿದೆ.

2020ರ ಜೂನ್ ತಿಂಗಳಲ್ಲಿ ಕಿಟೆಲ್ ಕುರಿತು ಚಿತ್ರ ತಯಾರಿಸುವ ನಿಟ್ಟಿನಲ್ಲಿ ಕೈಗೊಂಡ ಸಂಶೋಧನೆ ಒಂದು ಹಂತ ತಲುಪಿ, ಚಿತ್ರಕತೆಯ ನೀಲನಕ್ಷೆಗೆ ತಯಾರಿ ನಡೆಸಿದ್ದಾಗ ಆಗತಾನೆ ತಲೆಯೆತ್ತಿದ್ದ ಕೋವಿಡ್ ಎಷ್ಟೆಲ್ಲಾ ಸಮಸ್ಯೆಗಳನ್ನು ತಂದೊಡ್ಡಬಹುದು ಎಂಬ ಕಲ್ಪನೆಯೇ ಇರಲಿಲ್ಲ. ಸಾಲದ್ದಕ್ಕೆ ಇಲ್ಲಿ, ಕರ್ನಾಟಕದಲ್ಲಿ ಕನ್ನಡ-ಇಂಗ್ಲೀಷ್ ನಿಘಂಟು ತಯಾರಿಸಿದ ವಿದ್ವಾಂಸ ಎಂದೇ ಖ್ಯಾತರಾದ ಕಿಟೆಲ್‌ರ ಬದುಕಿನ ಬಗ್ಗೆ, ನಿಘಂಟಿನ ಹೊರತಾಗಿ ಅವರ ವೈಯಕ್ತಿಕ ಬದುಕಿನ ಬಗ್ಗೆ, ಉಳಿದ ಕೆಲಸಗಳ ಬಗ್ಗೆ ಅಷ್ಟಾಗಿ ವಿವರವಾದ ದಾಖಲೆಗಳು ಇಲ್ಲ. ಶ್ರೀನಿವಾಸ ಹಾವನೂರ ಅವರು ಬರೆದ ಪುಸ್ತಕಗಳಲ್ಲಿ ಕೆಲ ಬಿಡಿ ವಿವರಗಳಿವೆ ಅಷ್ಟೇ. ಉಳಿದಂತೆ ಬಾಸೆಲ್‌ನ (ಈಗಿನ ಸ್ವಿಟ್ಜರ್‌ಲೆಂಡ್) ಪತ್ರಾಗಾರದಲ್ಲಿ ಆ ಕಾಲದ ಅಮೂಲ್ಯ ದಾಖಲೆಗಳ ಭಂಡಾರ ಲಭ್ಯವಿವೆ ಎಂದು ತಿಳಿದು ಅವರನ್ನು ಸಂಪರ್ಕಿಸಿದಾಗ 'ಆ ಕಾಲದ ಸಾವಿರಾರು ಪತ್ರಗಳು, ದಾಖಲೆಗಳು ಇವೆ. ತಾಸಿನ ಲೆಕ್ಕದಲ್ಲಿ ಹಣ ಪಾವತಿಸಿ ಪಡೆದುಕೊಳ್ಳಿ' ಎಂಬ ಉತ್ತರ ಬಂತು. ಇದು ಒಂದು ಸಂಶೋಧನಾ ಸಂಸ್ಥೆಯೋ, ವಿಶ್ವವಿದ್ಯಾಲಯವೋ ಮಾಡಬೇಕಾದ ಕೆಲಸ, ನಮಗಲ್ಲ ಅನ್ನಿಸಿದರೂ ಕಿಟೆಲ್‌ರಿಗೆ ಸಂಬಂಧಿಸಿದ ಕೆಲವು ಪತ್ರಗಳನ್ನಾದರೂ ಪಡೆದುಕೊಳ್ಳೋಣ ಎಂದು ಕೇಳಿದಾಗ ತಿಳಿದದ್ದು ಅವೆಲ್ಲ ಹಳೆಯ ಜರ್ಮನ್ ನುಡಿಯಲ್ಲಿ (ನಮ್ಮ ಹಳೆಗನ್ನಡದ ಹಾಗೆ) ಇವೆ ಮತ್ತು ಅವನ್ನು ಪಡೆದರೂ ಮೊದಲು ಈಗ ಬಳಕೆಯಲ್ಲಿರುವ ಜರ್ಮನ್ ನುಡಿಗೆ ಅನುವಾದಿಸಿ ನಂತರ ಇಂಗ್ಲಿಷಿಗೆ ಅನುವಾದಿಸಿದರೆ ಮಾತ್ರ ಉಪಯೋಗವಾಗಬಹುದು ಎಂದು ತಿಳಿಯಿತು. ಇವೆಲ್ಲ ಯಾರ ನೆರವೂ ಇಲ್ಲದೆ ಚಿತ್ರ ತಯಾರಿಸ ಹೊರಟ ನಮಗಲ್ಲ ಎಂದು ಸುಮ್ಮನಾಗಬೇಕಾಯಿತು. ಒಂದೆರಡು ಕಡೆ ಹಣಕಾಸಿನ ನೆರವು ಕೋರಿದರೂ ಕೋವಿಡ್‌ನ ಅತಂತ್ರ ಸ್ಥಿತಿಯಿಂದಾಗಿ ಎಲ್ಲೂ ಏನೂ ಗಿಟ್ಟಲಿಲ್ಲ. ಕನ್ನಡದ ಕೆಲಸಕ್ಕಾಗಿ ಇರುವ ವಿಶ್ವವಿದ್ಯಾಲಯಗಳು ಈಗಲಾದರೂ ಇಂತಹ ಹೊಣೆಯನ್ನು ಕೈಗೆತ್ತಿಕೊಂಡರೆ ಹೊಸಗನ್ನಡ ಆರಂಭಕಾಲದ ಅಮೂಲ್ಯ ದಾಖಲೆಗಳು ನಮ್ಮದಾಗಲಿವೆ.

ಭಾರತದಲ್ಲಿ ಚಿತ್ರೀಕರಣ ಮುಗಿಸಿ 2021ರ ಅಕ್ಟೋಬರ್‌ನಲ್ಲಿ ಜರ್ಮನಿಗೆ ಹೋಗಿ ಅಲ್ಲಿ ಅವರ ಹುಟ್ಟೂರು ರೆಸ್ಟರ್‌ಹಾಫೆ, ಕನ್ನಡ ನಿಘಂಟಿನ ಕೆಲಸ ಮಾಡಿದ ಕಾಲ್ವ್ ಮತ್ತು ಟ್ಯುಬಿಂಗೆನ್‌ನಲ್ಲಿ ಚಿತ್ರೀಕರಣ ಮುಂದುವರಿಸಿದೆವು. ಕಾಸೆಲ್ ಬಳಿಯ ಸ್ಟುಡಿಯೋ ಒಂದರಲ್ಲಿ ಚಿತ್ರದ ಸಂಪೂರ್ಣ ಧ್ವನಿ ಮುದ್ರಣ ಮಾಡಿದ್ದು ಮರೆಯಲಾಗದ ಅನುಭವ. ಕಿಟೆಲ್ ತಮ್ಮ ಕೊನೆಗಾಲವನ್ನು ಕಳೆದ ಟ್ಯುಬಿಂಗೆನ್‌ಗೆ ಹೋಗಿ ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಅವರಿಗೆ 1896ರಲ್ಲಿ ಕೊಟ್ಟ ಡಾಕ್ಟರೇಟ್ ಪದವಿಯನ್ನು ನೋಡುವಾಗ ರೋಮಾಂಚನವಾಗಿತ್ತು. ಇದು ಕನ್ನಡದ ಕೆಲಸ ಮಾಡಿದ್ದಕ್ಕಾಗಿ ಕೊಡಲಾದ ಮೊಟ್ಟ ಮೊದಲ ಡಾಕ್ಟರೇಟ್! ಅಲ್ಲಿ ಮಲಯಾಳಂ-ಇಂಗ್ಲಿಷ್ ನಿಘಂಟು ತಯಾರಿಸಿದ ಹರ್ಮನ್ ಗುಂಡರ್ಟ್ ಕುರಿತಾಗಿ ಪ್ರತ್ಯೇಕ ವಿಭಾಗವೇ ಇದ್ದು, ಕೇರಳದ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿಗಳು ಬಂದು ಅಧ್ಯಯನ ಮಾಡುತ್ತಾರೆ.

11ನೇ ಪುಟಕ್ಕೆ...


ವಿಮರ್ಶಕ ಜಿ.ಎಚ್. ನಾಯಕರು ಇತ್ತೀಚೆಗಷ್ಟೆ ಅಗಲಿದರು. ತರಗತಿಯಲ್ಲಿ ಅವರ ಪಾಠ ಕೇಳಿದ ಹಾಗೂ ಅವರನ್ನು ಸಾಹಿತ್ಯಿಕವಾಗಿಯೂ ಓದಿಕೊಂಡ ವಿದ್ಯಾರ್ಥಿಯೇ ಕಟೆದ ವ್ಯಕ್ತಿಚಿತ್ರ ಇಲ್ಲಿದೆ.

ಘನತೆವೆತ್ತ ಮೇಷ್ಟ್ರು, ಲೇಖಕ, ನಾಗರಿಕ

ರಹಮತ್ ತರೀಕೆರೆ


ನಾನು ಕನ್ನಡ ಎಂ.ಎ. ಓದಲು ಮೈಸೂರಿನ ಮಾನಸಗಂಗೋತ್ರಿಗೆ ಹೋಗಲು ಇದ್ದ ಪ್ರಮುಖ ಆಕರ್ಷಣೆಗಳಲ್ಲಿ, ಪ್ರಭುಶಂಕರ, ಪುಣೇಕರ, ಚನ್ನಯ್ಯ, ಜಿ.ಎಚ್.ನಾಯಕ ಮೊದಲಾದ ಪ್ರಸಿದ್ಧ ವಿದ್ವಾಂಸರ ಬಳಿ ಕಲಿಯಬಹುದು ಎಂಬುದೂ ಒಂದು. ನಾಯಕರದು ಆಗ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ದೊಡ್ಡ ಹೆಸರು. ಅವರು ತೆಗೆದುಕೊಂಡ ಮೊದಲ ತರಗತಿ ನೆನಪಾಗುತ್ತಿದೆ. ಗೌರವರ್ಣದ ಎತ್ತರದಾಳು. ನಲವತ್ತೈದು ದಾಟಿದ ಪ್ರಾಯ. ಎಣ್ಣೆಹಾಕಿ ಹಿಂದಕ್ಕೆ ಬಾಚಿದ ತಲೆಕೂದಲು. ಹೊಳೆವ ಕಂಗಳು. ಚಂದದ ದಂತಪಂಕ್ತಿ ಕಾಣಿಸುವ ಹಾಸ. ರಸಪ್ರಸಂಗ ಹೇಳುತ್ತ ಸ್ವತಃ ಕೆಂಪಗಾಗುವ ಮುಖ. ತಮ್ಮ ಅಳ್ತನ, ಪಾಠ, ವೈಚಾರಿಕತೆ, ಹಾಸ್ಯಪ್ರಜ್ಞೆ, ವಿಶ್ವಾಸಪೂರ್ವಕ ಗುಣಗಳಿಂದ ಅವರು ನಮ್ಮ ಹೀರೊ ಆಗಿಬಿಟ್ಟರು.

ನಾಯಕರು ನಮಗೆ ಮೊದಲ ವರ್ಷ ಟಿ.ಎಸ್.ಎಲಿಯಟ್‌ನ 'ಟ್ರೆಡಿಶನ್ ಆ್ಯಂಡ್ ಇಂಡಿವಿಜ್ಯುವಲ್ ಟೆಲೆಂಟ್' ಪ್ರಬಂಧವನ್ನೂ ಎರಡನೇ ವರ್ಷ ಕಾರಂತರ ಕಾದಂಬರಿಗಳನ್ನೂ ಹೇಳಿದರು. ಎಲಿಯಟ್, ಅವರಿಗೆ ಪ್ರಿಯ ಚಿಂತಕನಾಗಿದ್ದ. ಲೇಖಕರಿಗೆ ಸಾಹಿತ್ಯ ಪರಂಪರೆಯಲ್ಲಿರುವ ಸತ್ವವು ಆನುವಂಶಿಕವಾಗಿ ಬರುವುದಿಲ್ಲವೆಂದೂ, ಶ್ರಮ-ಶ್ರದ್ಧೆಗಳಿಂದ ಅನುಸಂಧಾನಿಸುತ್ತ ಅದನ್ನು ಗಳಿಸಿಕೊಳ್ಳಬೇಕೆಂದೂ, ಬಳಿಕ ಅದು ವ್ಯಕ್ತಿಪ್ರತಿಭೆಯ ಕುಲುಮೆಯಲ್ಲಿ ಮರುಸೃಷ್ಟಿಗೊಂಡು ಹೊಸತನ್ನು ಸೃಷ್ಟಿಸುತ್ತದೆಯೆಂದೂ ಆತ ಪ್ರತಿಪಾದಿಸುತ್ತಾನೆ. ನಾಯಕರು ಎಲಿಯಟ್‌ನ ಪ್ರತಿ ಸಾಲನ್ನೂ ಓದುತ್ತ, ಅಲ್ಲಿರುವ ಸಾಹಿತ್ಯತತ್ವವನ್ನು ಪಂಪ, ಬೇಂದ್ರೆ, ಅಡಿಗರ ನಿದರ್ಶನಗಳ ಮೂಲಕ ವಿಶ್ಲೇಷಿಸುತ್ತ, ಕರ್ನಾಟಕದ ವಿದ್ಯಮಾನಗಳನ್ನು ಲಗತ್ತಿಸುತ್ತ ಪಾಠ ಮಾಡಿದರು. ಅವರ ಉಪನ್ಯಾಸವು ಹಲಸಿನ ಹಣ್ಣನ್ನು ಹುಶಾರಾಗಿ ಕೊಯ್ದು ತೊಳೆತೆಗೆದು ತಿನ್ನಿಸುವಂತಿತ್ತು. ಕೆಲವೊಮ್ಮೆ ರಭಸವಿಲ್ಲದೆ ಗುಡ್ಡಗಳ ನಡುವೆ ವಿರಾಮಭಾವದಲ್ಲಿ ಹರಿದು ಕಡಲನ್ನು ಕೂಡುವ ಅಘನಾಶಿನಿ ಹೊಳೆಯಂತೆ. ಅವರ ವ್ಯಕ್ತಿತ್ವದಲ್ಲಿ ಇನ್ನೊಂದು ಪ್ರಭಾವಳಿಯಿತ್ತು.



ಅಧ್ಯಾಪಕರಾಗಿದ್ದಾಗ ಪ್ರೊ. ಜಿ.ಎಚ್.ನಾಯಕ

ಅದು, ಯೂನಿವರ್ಸಿಟಿ ರಾಜಕಾರಣದಲ್ಲಿ, ಜಾತಿ ಮತ್ತು ವಶೀಲಿಯ ಮೂಲಕ ಮೇಲೇರುವ ಒಳಮಾರ್ಗವನ್ನು ತೊರೆದು, ದಿಟ್ಟನಿಲುವುಗಳ ಮೂಲಕ ಅಧಿಕಾರಸ್ಥರನ್ನು ಎದುರುಹಾಕಿಕೊಂಡು, ನ್ಯಾಯವಾಗಿ ಸಿಗಬೇಕಾದ ಬಡ್ತಿಗಳನ್ನು ಕಳೆದುಕೊಂಡು, ವಿದ್ಯಾರ್ಥಿಗಳಿಗೆ ಪ್ರಿಯ ಪ್ರಾಧ್ಯಾಪಕನಾಗುವ ಅಪೂರ್ವ ಮಾದರಿ ನಿರ್ಮಿಸಿದ್ದು.



ಜಿ.ಎಚ್.ನಾಯಕ

ನಾಯಕರು ಸಾಹಿತ್ಯ ಕೃತಿ ಮತ್ತು ತತ್ವಗಳ ಬಗ್ಗೆ ಚರ್ಚಿಸಿದರೂ, ಅವರ ವಿಮರ್ಶೆಯು ಸಮಾಜ ಮತ್ತು ಬಾಳನ್ನು ಕುರಿತ ಅವರ ಲೋಕದೃಷ್ಟಿಯ ಭಾಗವಾಗಿ ಹೊರಳಿಕೆ ಪಡೆಯುತ್ತಿತ್ತು. ಸಾಹಿತ್ಯ ಪಾಠದ ಜತೆಯಲ್ಲಿ ಮನಸ್ಸನ್ನು ರೂಪಿಸಲು ಸಾಹಿತ್ಯ ಅಧ್ಯಾಪಕರಿಗೆ ಸಿಗುವ ಈ ವಿಶೇಷ ಸವಲತ್ತನ್ನು ಅವರು ಚೆನ್ನಾಗಿ ಬಳಸಿಕೊಂಡು, ವಿದ್ಯಾರ್ಥಿಗಳ ಸಾಹಿತ್ಯಿಕ ಮತ್ತು ಸಾಮಾಜಿಕ ಸಂವೇದನೆಯನ್ನು ರೂಪುಗೊಳಿಸುತ್ತಿದ್ದರು. ವೈಚಾರಿಕತೆ ವಿಷಯದಲ್ಲಿ ವಜ್ರದ ಕಠಿಣತೆಯನ್ನೂ ಮನುಷ್ಯ ಸಂಬಂಧಗಳ ವಿಷಯದಲ್ಲಿ ಕುಸುಮದ ಮೃದುತ್ವವನ್ನೂ ಅವರ ವ್ಯಕ್ತಿತ್ವ ಒಳಗೊಂಡಿತ್ತು. ಅವರು ರೂಪಿಸಿದ 'ವಿನಯ'ದ ಪರಿಕಲ್ಪನೆಯಲ್ಲಿ ಈ ಎರಡು ಆಯಾಮಗಳು ಮಿಳಿತವಾಗಿವೆ. ಎಲಿಯಟ್‌ನ ಚಿಂತನೆಯಲ್ಲಿರುವ ವೈಯಕ್ತಿಕತೆ, ನವ್ಯದವರಿಗೆ ಪ್ರಿಯವಾದ ಮೌಲ್ಯಾದರ್ಶ. ನಾಯಕರು (ತೇಜಸ್ವಿ ಕೂಡ) ವ್ಯಕ್ತಿಯ ಸ್ವಾತಂತ್ರ್ಯದ ಮತ್ತು ಸೃಜನಶೀಲ ಸೀಮೋಲ್ಲಂಘನೆಯ ಈ ಪ್ರಶ್ನೆಯನ್ನು, ಸಮಾಜವನ್ನು ಪ್ರಭಾವಿಸುವ ಬೌದ್ಧಿಕ ಹೊಣೆಗಾರಿಕೆಯನ್ನಾಗಿ ವಿಸ್ತರಣೆ ಮಾಡಿದರು. ಸಾಹಿತ್ಯವನ್ನು ಪೂರ್ವಗ್ರಹ ಮತ್ತು ಮಮಕಾರಗಳಿಲ್ಲದೆ ಮುಖಾಮುಖಿಯಾಗುವ ವಿಧಾನ ಕಲಿಸುವ ಹೊತ್ತಲ್ಲೇ, ಲೋಕವನ್ನು ನಿಷ್ಠುರ ವಿಮರ್ಶನ ಪ್ರಜ್ಞೆಯಿಂದ ನೋಡಬೇಕು ಮತ್ತು ವೈಯಕ್ತಿಕವಾಗಿ ಪ್ರಾಮಾಣಿಕವಾಗಿ ಬದುಕಬೇಕು ಎಂದು ನಾಯಕರು ವಿವರಿಸುತ್ತಿದ್ದರು. ಅವರ ಸಾಹಿತ್ಯಬೋಧೆ, ತತ್ವಚಿಂತನೆ, ಸಮಾಜಮುಖಿ ಆಕ್ಟಿವಿಸಂ ಮತ್ತು ವೈಯಕ್ತಿಕ ಬದುಕಿನ ನಡುವೆ ಜೈವಿಕ ಸಂಬಂಧವಿತ್ತು. ಅವರ ವ್ಯಕ್ತಿತ್ವವನ್ನು ವೈಚಾರಿಕ ಮಾನವತಾವಾದ, ಜಾತ್ಯತೀತತೆ, ಸೃಜನಶೀಲ ಕಲಾಸಂವೇದನೆ, ವಿಮರ್ಶನ ನಿಷ್ಠುರತೆಗಳ ಸಂಗಮವೆನ್ನಬಹುದು. ಈ ಅರ್ಥದಲ್ಲಿ ಅವರೊಬ್ಬ ಸಂವಿಧಾನವಾದಿ. ಹೀಗಾಗಿಯೇ ಅವರಿಗೆ ಅಡಿಗ-ಅನಂತಮೂರ್ತಿಯವರ ಗಾಢಪ್ರಭಾವದಿಂದ ಬಿಡಿಸಿಕೊಂಡು, ಬಾಳಿನ ಎರಡನೇ ಹಂತದಲ್ಲಿ ಅಂಬೇಡ್ಕರ್ ಮತ್ತು ದಲಿತ ಚಳುವಳಿಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಯಿತು.

ನಾಯಕರು ಅಧ್ಯಾಪಕರಾಗಿ, ವಿಮರ್ಶಕರಾಗಿ ಸಾಹಿತ್ಯದ ಗಂಭೀರ ಓದುಗರಾಗಿದ್ದರು. ಅವರ ಶಿಷ್ಯರಾಗಿ ನಾವು ಅವರ ಕೃತಿನಿಷ್ಠ ವಿಮರ್ಶೆಯ ಮಾದರಿಯಿಂದ ಗಾಢವಾಗಿ ಪ್ರಭಾವಿತವಾದೆವು. ಆದರೆ ಜಿ.ರಾಜಶೇಖರ-ಡಿ.ಆರ್.ನಾಗರಾಜ್ ಅವರ ವಿಮರ್ಶೆಯ ರುಚಿ ಹತ್ತಿದ ಬಳಿಕ, ಅವರ ವಿಮರ್ಶೆಯಲ್ಲಿದ್ದ ಆಸಕ್ತಿ ಕ್ಷೀಣಿಸಿತು. ಅದು 'ನಿಷ್ಪಕ್ಷಪಾತವಾದ ಸಮತೋಲನದ ಮೌಲ್ಯಮಾಪನ ಪ್ರಜ್ಞೆಯ ಅತಿಯೆಚ್ಚರದಲ್ಲಿ, ಸಾಹಿತ್ಯದ ಖುಷಿಯನ್ನು ಮತ್ತು ಸಾಮಾಜಿಕ ರಾಜಕೀಯ ಚಿಂತನೆಯ ಆಯಾಮವನ್ನು ಅದು ಕಡಿಮೆಗೊಳಿಸಿಕೊಂಡಿದೆ; ಪಂಪ, ರನ್ನ, ಬೇಂದ್ರೆ, ಕಾರಂತ, ಅಡಿಗ, ತೇಜಸ್ವಿ, ಅನಂತಮೂರ್ತಿ ಮೊದಲಾದ ಕೆಲವೇ ಲೇಖಕರತ್ತ ಸುಳಿದಾಡುತ್ತಿದೆ; ಅಭಿಜಾತವಾದಿ ಪ್ರಜ್ಞೆಯಿಂದ ಹುಟ್ಟಿದ ಎಲಿಯಟ್‌ನ ಮೇಜರ್-ಮೈನರ್ ಎಂಬ ಎದುರಾಳಿ ಪರಿಕಲ್ಪನೆಗಳ ಮೂಲಕ, ಕನ್ನಡದ ವಿಶಾಲ ವಾಙ್ಮಯ ಸೃಷ್ಟಿಸಿರುವ ಮಂಟೆಸ್ವಾಮಿ ಕಾವ್ಯದಿಂದ ಹಿಡಿದು ದೇವಚಂದ್ರನ 'ರಾಜಾವಳಿ ಕಥಾಸಾರ'ದಂತಹ ಸಾಂಸ್ಕೃತಿಕ ಪಠ್ಯಗಳನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ' ಎಂದು ಅನಿಸತೊಡಗಿತು. ನಾಸ್ತಿಕವಾದಿ ಪಾಶ್ಚಿಮಾತ್ಯ ವೈಚಾರಿಕತೆಯಿಂದ ರೂಪುಗೊಂಡ ಚೌಕಟ್ಟುಗಳಿಗೆ ಸಿಗದೆ ಕೆಲವು ಸಾಂಸ್ಕೃತಿಕ ಲೋಕಗಳು ಹೊರಗುಳಿದುಬಿಡುತ್ತವೆ. ಮಹಾ ವೈಚಾರಿಕರಾದ ಕುವೆಂಪು, ಲಂಕೇಶ್, ದೇವನೂರ, ತೇಜಸ್ವಿ ಈ ಕೊರತೆಯನ್ನು ತಮ್ಮ ಕಲಾಕೃತಿಗಳ ಮೂಲಕ ದಾಟಿದರು. ವಿಮರ್ಶೆ ವಿಚಾರ ಪ್ರಕಾರಗಳಲ್ಲಷ್ಟೆ ಕೆಲಸ ಮಾಡುವವರಿಗೆ ಈ ದಾಟುವ ಅವಕಾಶ ಹೆಚ್ಚು ಸಿಗುವುದಿಲ್ಲ.

ನಾಯಕರ ಸಾರ್ವಜನಿಕ ವ್ಯಕ್ತಿತ್ವವು ಅವರ ಸಾಹಿತ್ಯ ವಿಮರ್ಶೆಯಲ್ಲಿ ಇರುವುದಕ್ಕಿಂತ ಹೆಚ್ಚು ಬಹುಮುಖಿಯಾಗಿತ್ತು. ಅವರೊಬ್ಬ ಕನ್ನಡ ಹೋರಾಟಗಾರರಾಗಿದ್ದರು (ಗೋಕಾಕ ಚಳವಳಿಯಲ್ಲಿ ನಾವೆಲ್ಲ ಒಂದು ದಿನ ಬಯಲು ಸೆರೆಮನೆಯಲ್ಲಿದ್ದೆವು); ವಿಚಾರವಾದಿ ಚಳವಳಿಯ ಪ್ರಮುಖ ಚಿಂತಕರಾಗಿದ್ದರು; ಎಷ್ಟೇ ಆಪ್ತರಿದ್ದರೂ ವೈಭವದ ಸಂಪ್ರದಾಯಸ್ಥ ವರದಕ್ಷಿಣೆಯ ಮದುವೆಗಳಿಗೆ ಹೋಗುತ್ತಿರಲಿಲ್ಲ; ತಬ್ಬಲಿಗಳನ್ನು ಸಾಮಾಜಿಕ ಹಿಂಸೆಯಿಂದ ರಕ್ಷಿಸುವ ಮೈಸೂರಿನ 'ಒಡನಾಡಿ' ಸಂಸ್ಥೆ ಜತೆಗೆ ಅವರಿಗೆ ಲಗತ್ತಿತ್ತು; 'ದ್ವೇಷಬಿಟ್ಟು ದೇಶಕಟ್ಟು' ಹಾಗೂ ದಲಿತ ಚಳುವಳಿಯಲ್ಲಿ ಗುರುತಿಸಿಕೊಂಡಿದ್ದರು.

10ನೇ ಪುಟಕ್ಕೆ...

ನೋಡುಬಾರಾ ಕಬೀರ್‌ವಾಡಾ!

ಡಾ. ಕೆ.ಎಸ್.ಚೈತ್ರಾ

ತೀರ್ಥಯಾತ್ರೆ

ಭಾರತೀಯ ಅಧ್ಯಾತ್ಮ ಪರಂಪರೆಯ ಜೊತೆಗೆ ಸಾಹಿತ್ಯದಲ್ಲೂ ಸಂತ ಕಬೀರರದ್ದು ಮಹತ್ವದ ಸ್ಥಾನ. ಅಸಮಾನತೆಯ ವಿರುದ್ಧ ಸಿಡಿದೆದ್ದು ಶೋಷಣೆಯನ್ನು ಅತ್ಯಂತ ಕಟುವಾಗಿ ಟೀಕಿಸಿದರೂ ಸಾಮಾನ್ಯ ಜನರೊಂದಿಗೆ ಬೆರೆತು ವಿಶ್ವಾಸ ಗಳಿಸಿದ ಕವಿ, ಸಂತ, ಗುರು ಮತ್ತು ಮಾನವೀಯತೆಯ ಸಾಕಾರ ಮೂರ್ತಿ ಕಬೀರರು. ಲೋಕಸಂಚಾರಿಯಾಗಿದ್ದ ಕಬೀರರು ಭಾರತದಲ್ಲಿ ಅಷ್ಟೇ ಅಲ್ಲ ಮಧ್ಯಪ್ರಾಚ್ಯ ರಾಷ್ಟ್ರದ ಮೆಕ್ಕಾ, ಪೆಶಾವರ್, ಲಾಹೋರ್, ಕಾಬುಲ್ ಹೀಗೆ ಸಾಕಷ್ಟು ದೂರ ಪ್ರವಾಸವನ್ನು ಕೈಗೊಂಡಿದ್ದರು ಎಂದು ಹೇಳಲಾಗುತ್ತದೆ. ನಿಖರವಾಗಿ ಅವರ ಪಯಣದ ಹಾದಿಯನ್ನು ಗುರುತಿಸಲು ಸಾಧ್ಯವಿಲ್ಲವಾದರೂ ಭಾರತದಲ್ಲಿ, ಗುಜರಾತ್ ಅವರು ಸಂದರ್ಶಿಸಿದ ಪ್ರಮುಖ ಸ್ಥಾನವಾಗಿತ್ತು. ಗ್ಯಾನಿ ಸಾಹೇಬ್, ನಿರ್ವಾಣ್‌ಜಿ ಮಹಾರಾಜ್ ಮುಂತಾದ ಧಾರ್ಮಿಕ ಗುರುಗಳೊಡನೆ ಅವರ ಭೇಟಿ ನಡೆದಿತ್ತು. ಕಬೀರರ ಜೀವನ ಮತ್ತು ಬೋಧನೆ ಆಧಾರಿತ 'ಕಮಲ್ ಬೋಧ್' ಕೃತಿಯಲ್ಲಿ ಈ ಬಗ್ಗೆ ಉಲ್ಲೇಖವಿದೆ. ಹಾಗೆ ಅವರು ಸಂದರ್ಶಿಸಿದ್ದ ಸಮಯದಲ್ಲಿ ಕೆಲಕಾಲ ತಂಗಿದ್ದ ಪುಣ್ಯಭೂಮಿ ದೊಡ್ಡ ಆಲದ ಮರವಿರುವ ಕಬೀರ್ ವಾಡಾ! ಗುಜರಾತಿನ ಭರೂಚ್ ನಗರದಿಂದ ಹದಿನೈದು ಕಿಮೀ ದೂರದಲ್ಲಿ, ನರ್ಮದಾ ನದಿಯ ತೀರದಲ್ಲಿ ಇರುವ ಪ್ರಸಿದ್ಧ ಧಾರ್ಮಿಕ ಹಾಗೂ ಪ್ರವಾಸಿ ಕೇಂದ್ರವಿದು. ವಾಡ್ ಎಂದರೆ ಗುಜರಾತಿಯಲ್ಲಿ ಆಲದ ಮರ ಎಂದರ್ಥ.



ದೊಡ್ಡಾಲದ ಮರ!

ವಡೋದರದಿಂದ ಸುಮಾರು ಅರವತ್ತೈದು ಮೈಲಿ ದೂರದಲ್ಲಿರುವ ಶುಕ್ಲತೀರ್ಥದಲ್ಲಿ ಎರಡು ಸಾವಿರ ವರ್ಷಗಳಷ್ಟು ಪುರಾತನ ಶಿವಮಂದಿರವಿದೆ. ಇಲ್ಲಿಂದ ನರ್ಮದಾ ನದಿಯಲ್ಲಿ ದೋಣಿಯ ಮೂಲಕ ಕಬೀರ್ ವಾಡಾ ತಲುಪಬಹುದು. ಪ್ರತಿ ಅರ್ಧ ಗಂಟೆಗೊಮ್ಮೆ ದೋಣಿ ಸಂಚಾರ ಲಭ್ಯವಿದೆ. ದೋಣಿ ಪಯಣಕ್ಕೆ ಸುಮಾರು ನೂರು ರೂಪಾಯಿ ಶುಲ್ಕ. ಭರೂಚ್‌ನ ಸಮೀಪದ ಮಂಗಳೇಶ್ವರ ಎನ್ನುವ ಹಳ್ಳಿಯ ಪಕ್ಕದಲ್ಲಿ ನರ್ಮದಾ ನದಿ ಎರಡು ಕವಲಾಗಿ ಹರಿದು ಮಧ್ಯದಲ್ಲೊಂದು ದ್ವೀಪ ನಿರ್ಮಾಣವಾಗಿದೆ. ಅದೇ ಕಬೀರ್ ವಾಡಾ. ಮೂರೂವರೆ ಎಕರೆ ವಿಸ್ತೀರ್ಣದಲ್ಲಿ ಹರಡಿ ನಿಂತಿದೆ ಈ ವಿಶಾಲ ಆಲದ ಮರ. ಇದನ್ನು ನೋಡುವುದೇ ಕಣ್ಣಿಗೆ ಹಬ್ಬ. ಇಲ್ಲಿನ ಪ್ರಶಾಂತ-ಸ್ವಚ್ಛ ಪರಿಸರ ಮತ್ತು ನದಿತೀರದಿಂದ ಬೀಸುವ ಗಾಳಿ ಪ್ರಕೃತಿ ಪ್ರಿಯರಿಗೆ ಖುಷಿಯನ್ನು ನೀಡುತ್ತದೆ. ಮರದ ನಡುವಲ್ಲಿ ಅಲ್ಲಲ್ಲಿ ಮಕ್ಕಳ ಆಟಕ್ಕೆ ಅನುಕೂಲ ಮಾಡಿರುವ ಸಾಧನಗಳು, ವೀಕ್ಷಿಸಲು ಬೆಂಚುಗಳ ವ್ಯವಸ್ಥೆ, ತಿಂಡಿಗಳನ್ನು ಮಾರುವ ಸಣ್ಣಪುಟ್ಟ ಅಂಗಡಿಗಳು ಇವೆಲ್ಲವೂ ಪ್ರವಾಸಿಗರಿಗೆ ಅಚ್ಚುಮೆಚ್ಚು. ಎಲ್ಲಕ್ಕಿಂತ ಮಿಗಿಲಾಗಿ ಕಬೀರರು ವಾಸವಾಗಿದ್ದ ಸ್ಥಳ ಎನ್ನುವಂಥದ್ದು ಧನ್ಯತಾಭಾವವನ್ನು ಮೂಡಿಸುತ್ತದೆ. ಇದೇ ದ್ವೀಪದಲ್ಲಿಯೇ ಕಬೀರರ ಮೂರ್ತಿಯನ್ನು ಇಟ್ಟಿರುವ ಕಮಲ ವಿನ್ಯಾಸದ ದೇವಸ್ಥಾನವು ಇದೆ. ಎರಡು ಅಂತಸ್ತಿನ ಈ ದೇಗುಲದಲ್ಲಿ ಕಬೀರರಿಗೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ಸುತ್ತಲೂ ಗೋಡೆಗಳಲ್ಲಿ ಹಾಕಲಾಗಿದೆ.



ಕಬೀರ್ ವಾಡಾ ಬಳಿಯಿರುವ ದೊಡ್ಡಾಲದ ಮರ

> ಭಾರತೀಯ ಅಧ್ಯಾತ್ಮ ಪರಂಪರೆಯ ಜೊತೆಗೆ ಸಾಹಿತ್ಯದಲ್ಲೂ ಸಂತ ಕಬೀರರದ್ದು ಮಹತ್ವದ ಸ್ಥಾನ. ಅಸಮಾನತೆಯ ವಿರುದ್ಧ ಸಿಡಿದೆದ್ದು ಶೋಷಣೆಯನ್ನು ಅತ್ಯಂತ ಕಟುವಾಗಿ ಟೀಕಿಸಿದರೂ ಸಾಮಾನ್ಯರೊಂದಿಗೆ ಬೆರೆತ ಕವಿ, ಸಂತ, ಗುರುವಿನ ವಾಡೆಯೊಂದು ಗುಜರಾತ್‌ನ ವಡೋದರದಿಂದ ಸುಮಾರು ಅರವತ್ತೈದು ಮೈಲಿ ದೂರದಲ್ಲಿ ನರ್ಮದೆ ತಟದಲ್ಲಿದೆ...


ದಂತ ಕಥೆ

ಒಂದು ದಂತಕಥೆಯ ಪ್ರಕಾರ ಈ ಸ್ಥಳದಲ್ಲಿ ಸಂತ ಕಬೀರರು ಹಲವು ಕಾಲ ತಂಗಿದ್ದು ಧ್ಯಾನ ಮಾಡುತ್ತಿದ್ದರು. ಆಗ ಅವರು ಹಲ್ಲುಜ್ಜಲು ಬಳಸಿ ಬಿಸಾಡಿದ ಒಣ ಮಸ್ವಾಕ್ (ಗೋಣ ಮರದ) ಕಡ್ಡಿಯು ಅವರ ಮಹಿಮೆಯಿಂದಾಗಿ ಚಿಗುರಿ ಈ ಬೃಹತ್ ಆಲದ ಮರವಾಯಿತು. ಮತ್ತೊಂದು ಹೀಗಿದೆ; ಸುಮಾರು ಐದು ನೂರು ವರ್ಷಗಳ ಹಿಂದೆ ಶುಕ್ಲತೀರ್ಥ ಎನ್ನುವ ಈ ಪುಟ್ಟ ಹಳ್ಳಿಯಲ್ಲಿ ಕೆಲವೇ ಮನೆಗಳಿದ್ದವು. ಅಲ್ಲಿ ವಾಸವಾಗಿದ್ದ ಬ್ರಾಹ್ಮಣ ಸಹೋದರರಾದ ಜೀವ ಮತ್ತು ತತ್ವಜರಿಗೆ ಧಾರ್ಮಿಕ ಪ್ರವಚನಗಳನ್ನು ಆಲಿಸಿ, ಬಲು ದುರ್ಲಭವಾದ ಮಾನವ ಜನ್ಮವನ್ನು ಸಫಲಗೊಳಿಸಿಕೊಳ್ಳಬೇಕಾದರೆ ಪರಿಪೂರ್ಣ ಸಂತನ ಕರುಣೆ ಅಗತ್ಯ ಎಂಬುದನ್ನು ಅರಿತಿದ್ದರು. ಆದರೆ ಅಂತವರನ್ನು ಹುಡುಕುವುದೆಲ್ಲಿ? ಹಾಗಾಗಿಯೇ ತಾವೇ ಒಂದು ನಿರ್ಧಾರಕ್ಕೆ ಬಂದರು. ಆಲದ ಮರದ ಒಣಗಿದ ರೆಂಬೆಯನ್ನು ಮನೆಯ ಮುಂದಿನ ಖಾಲಿ ಜಾಗದಲ್ಲಿ ನೆಟ್ಟರು. ತಮ್ಮಲ್ಲಿಗೆ ಬರುವ ಎಲ್ಲಾ ಧಾರ್ಮಿಕ ಗುರುಗಳು ಸಂತರ ಪಾದವನ್ನು ತೊಳೆಯುವ ಕ್ರಮ ಮೊದಲಿನಿಂದಲೂ ಜಾರಿಯಲ್ಲಿತ್ತು. ಅಂತಹ ಪವಿತ್ರ ಪಾದಜಲವನ್ನು ಈ ರೆಂಬೆಗೆ ಹಾಕಿದಾಗ ಯಾರ ಪುಣ್ಯ ಬಲದಿಂದ ಒಣಗಿದ ರೆಂಬೆ ಚಿಗುರುಗುವುದೋ ಅವರು ಪರಿಪೂರ್ಣ ಸಂತ. ಅಂತವರಿಂದ ದೀಕ್ಷೆಯನ್ನು ತೆಗೆದುಕೊಳ್ಳೋಣ ಎಂದು ನಿರ್ಧರಿಸಿದರು. ಅದೇ ಪ್ರಕಾರ ಎಲ್ಲಾ ಧಾರ್ಮಿಕ ಗುರು/ಸಂತರ ಪಾದವನ್ನು ತೊಳೆದು ಆ ನೀರನ್ನು ರೆಂಬೆಗೆ ಹಾಕಿದರೂ ಚಿಗುರುವ ಬದಲು ಅದು ಕೊಳೆತು ನಾರಲಾರಂಭಿಸಿತು. ಅನೇಕ ವಾರಗಳ ಕಾಲ ಇದು ನಡೆದಾಗ ಸಹೋದರರು ಚಿಂತೆಗೀಡಾದರು. ಆಗ ಬಂದವರು ಕಬೀರ. ಅವರ ಪಾದ ಜಲದಿಂದ ಒಣಗಿದ ರೆಂಬೆ ಚಿಗುರಿ ಹಸಿರಾಗಿ ನಳನಳಿಸಿತು. ಪರಿಪೂರ್ಣ ಸಂತನನ್ನು ಕಂಡ ಸಹೋದರರು ಕಬೀರರನ್ನು ತಮ್ಮ ಗುರುವಾಗಿ ಸ್ವೀಕರಿಸಿ ದೀಕ್ಷೆಯನ್ನು ಪಡೆದರು. ಚಿಗುರಿದ ಆ ರೆಂಬೆ ಈಗಿನ ದೊಡ್ಡಾಲದ ಮರ!!

ಈ ಕಥೆ ಕೇಳುತ್ತಿದ್ದಾಗ **'ದೊಡ್ಡವರಾದರೆ ಏನು ಬಂತು? ಖರ್ಜೂರದ ಮರದಂತೆ! ದಾರಿಹೋಕರಿಗೆ ನೆರಳಿಲ್ಲ, ಹಣ್ಣೂ ಬಲು ದೂರ..'** ರಾಮಕೃಷ್ಣಾಶ್ರಮದಲ್ಲಿ ಕೇಳಿದ್ದ ಕಬೀರರ ದೋಹೆ ನೆನಪಿಗೆ ಬಂತು. ಈ ಕರೋನಾದ ನಂತರ ಬರುವ ಜನರ ಸಂಖ್ಯೆ ಹೆಚ್ಚುತ್ತಿದೆ. ತಿಂದು-ಕುಡಿದು ಅಲ್ಲಲ್ಲೇ ಬಿಸಾಡಿ, ಮರವನ್ನು ಜಗ್ಗಿ-ಮುರಿದು ಪರಿಸರವನ್ನೇ ನಾಶ ಮಾಡುತ್ತಿದ್ದಾರೆ. ಹೀಗೆ ಮುಂದುವರಿದರೆ ಇದು ಗಲೀಜ್‌ವಾಡಾ ಆಗುತ್ತದೆ' ಎಂದರು ಜೊತೆಗಿದ್ದ ಗೈಡ್. ಬೇಸರವಾದರೂ, ಇದು ಹೊಸ ವಿಷಯವೇನಲ್ಲ! ಮಾನವತಾವಾದದ ಚಪ್ಪರ ಹಬ್ಬಿಸಿದ ಕಬೀರರನ್ನು ಮನನ ಮಾಡಿಕೊಳ್ಳುತ್ತಲೇ ಈ ಕ್ಷೇತ್ರವನ್ನು ಸ್ವಚ್ಛ, ಸುಂದರವಾಗಿಡುವುದು ನಮ್ಮ ಕರ್ತವ್ಯ ಎನಿಸಿತು.

ಖಾರಿಸಿಂಗ್ ಮತ್ತು ಪೋಂಕ್!

ಗುಜರಾತ್, ಭಾರತದಲ್ಲಿ ಅತಿ ಹೆಚ್ಚು ಕಡ್ಲೆಕಾಯಿ ಬೆಳೆಯುವ ರಾಜ್ಯವಾಗಿದೆ. ಭರೂಚ್, ಕಡಲೆಕಾಯಿಗಳಿಗಾಗಿ ಬಹಳ ಪ್ರಸಿದ್ಧ. ಸೌರಾಷ್ಟ್ರದಲ್ಲಿ ಬೆಳೆಯುವಂತಹ ಕಡಲೆಕಾಯಿ, ನರ್ಮದಾ ನೀರಿನಿಂದಾಗಿ ಅತ್ಯುತ್ತಮ ಗುಣಮಟ್ಟದ್ದು ಎಂದು ಹೇಳಲಾಗುತ್ತದೆ. ಇವುಗಳನ್ನು ಎರಡು ನಿಮಿಷ ಕಾಲ ನೀರಿನಲ್ಲಿ ನೆನೆಸಿ, ನಂತರ ಉಪ್ಪನ್ನು ಬೆರೆಸಿ ಆರರಿಂದ ಏಳು ಗಂಟೆಗಳ ಕಾಲ ಹಾಗೆ ಇಡಲಾಗುತ್ತದೆ. ಆಮೇಲೆ, ಭರೂಚ್ ಸಮೀಪದ ಸಮುದ್ರದ ಮರಳನ್ನು ಬಿಸಿ ಮಾಡಿ ಅದರಲ್ಲಿ ಹುರಿಯಲಾಗುತ್ತದೆ. ಇದಕ್ಕೆ ಗುಜರಾತಿಯಲ್ಲಿ ಖಾರಿಸಿಂಗ್ ಎಂದು ಕರೆಯಲಾಗುತ್ತದೆ ಇವುಗಳಲ್ಲಿ ಬೆಳ್ಳುಳ್ಳಿ, ಪುದಿನಾ, ಎಳನೀರು, ಚಾಕಲೇಟ್, ಲಿಂಬು ಹೀಗೆ ವಿವಿಧ ಸ್ವಾದದ ಕಡಲೆಕಾಯಿಗಳು ಲಭ್ಯವಿದೆ. ಪೋಂಕ್, ಚಳಿಗಾಲದಲ್ಲಿ ಗುಜರಾತಿಗಳು ತಿನ್ನುವ ಮತ್ತೊಂದು ಖಾದ್ಯ. ಜೋಳ ಅಥವಾ ಗೋಧಿಯ ಹಸಿ ಕಾಳುಗಳುಳ್ಳ ತೆನೆಯನ್ನು ಇದ್ದಿಲ ಮೇಲೆ ಸುಟ್ಟು ಕಾಳು ಉಜ್ಜಿ ಬೇರ್ಪಡಿಸುತ್ತಾರೆ. ಅದನ್ನು ಸೇವ್, ನಿಂಬೆರಸ, ಬೆಳ್ಳುಳ್ಳಿ ಚಟ್ನಿ ಮತ್ತು ಸಕ್ಕರೆಯ ಹರಳುಗಳೊಂದಿಗೆ ಸೇವಿಸಲಾಗುತ್ತದೆ. ಪ್ರೊಟೀನ್ ಸಾಕಷ್ಟು ಹೊಂದಿರುವ ಇದು ಚಳಿಗಾಲದಲ್ಲಿ ದೇಹಕ್ಕೆ ಶಕ್ತಿಯ ಜೊತೆಗೆ ಬಾಯಿಗೆ ರುಚಿಯನ್ನು ನೀಡುವ ಆಹಾರವಾಗಿದೆ.



ಜರ್ಮನಿಯಲ್ಲಿ ಯಕ್ಷಗಾನದ ಕಂಪು

ಅವಿನಾಶ್ ಬಿ.

ಜರ್ಮನಿಯಲ್ಲಿದ್ದುಕೊಂಡು ದೇಶದ ವಿವಿಧ ರಾಜ್ಯಗಳಲ್ಲಿ ಯಕ್ಷಗಾನವನ್ನು ಯಕ್ಷಗಾನೀಯವಾಗಿಯೇ ಉಳಿಸಿಕೊಳ್ಳಲು ಸದ್ದಿಲ್ಲದೆ ಶ್ರಮಿಸುತ್ತಿದೆ 'ಯಕ್ಷಮಿತ್ರರು ಜರ್ಮನಿ' ಹೆಸರಿನ ಪುಟ್ಟ ತಂಡ.

ಮ್ಯೂನಿಕ್‌ನ ಸಿರಿಗನ್ನಡ ಸಂಘದ ಜೊತೆ 'ಯಕ್ಷಮಿತ್ರರು ಜರ್ಮನಿ' ಸಹಯೋಗದಲ್ಲಿ ಜೂ.25ರ ಭಾನುವಾರ ಅಲ್ಲಿ 'ಲವ-ಕುಶ' ಎಂಬ ಆಖ್ಯಾನವೊಂದು ಪ್ರದರ್ಶನವಾಗುತ್ತಿದೆ. ಇದರ ವಿಶೇಷವೆಂದರೆ, ಕನ್ನಡನಾಡಿನ ಯಕ್ಷಗಾನ ಕಲಾವಿದರ ಮಕ್ಕಳು, ಯಕ್ಷಗಾನದ ಅಭಿಮಾನಿಗಳು ಸೇರಿಕೊಂಡು ಜರ್ಮನಿಯಲ್ಲಿ ಈ ಯಕ್ಷಗಾನ ಪ್ರದರ್ಶನ ನೀಡುತ್ತಿದ್ದಾರೆ. ಏಳು ವರ್ಷಗಳಿಂದ ಯಕ್ಷಮಿತ್ರರು ತಂಡವನ್ನು ಕಟ್ಟಿಕೊಂಡು ಮುನ್ನಡೆಸುತ್ತಿರುವವರು ಮಾಸ್ತಿಕಟ್ಟೆ ಮೂಲದ ಅಜಿತ್ ಪ್ರಭು ತಲ್ಲೂರು, ಅಪೂರ್ವ ಬೆಳೆಯೂರು ಹಾಗೂ ನರೇಂದ್ರ ಶೆಣೈ ಎಂಬ ಟೆಕ್ಕಿಗಳು. ಅಜಿತ್ ಪ್ರಭು ಅವರ ದೊಡ್ಡಪ್ಪ ಸುರೇಂದ್ರ ಪ್ರಭು ಹುಲಿಕಲ್‌ನಲ್ಲಿ ಮೇಳ ಕಟ್ಟಿ ಹಲವಾರು ಕಲಾವಿದರನ್ನು ಬೆಳೆಸಿದವರು. ಇದೇ ಮೇಳದಲ್ಲಿ ಅಜಿತ್ ಸಣ್ಣ ಬಾಲಕನಿರುವಾಗಲೇ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಲು ಕಲಿತದ್ದು. ಅಪೂರ್ವ ಬೆಳೆಯೂರು ಅವರು ಹಿರಿಯ ಯಕ್ಷಗಾನ ಕಲಾವಿದ ಕೃಷ್ಣಮೂರ್ತಿ ಬೆಳೆಯೂರು ಅವರ ಪುತ್ರ. ಇವರಿಬ್ಬರೂ ಮ್ಯೂನಿಕ್‌ನಲ್ಲಿ ಡಾಯ್ಚೆ (Deutsche) ಬ್ಯಾಂಕ್‌ನಲ್ಲಿ ಉದ್ಯೋಗಿಗಳು. ಇವರಿಬ್ಬರಿಗೆ ಬೆಂಬಲವಾದವರು ನರೇಂದ್ರ ಶೆಣೈ. ಹೆಸರಾಂತ ಯಕ್ಷಗಾನ ಕಲಾವಿದ ಆರ್ಗೋಡು ಮೋಹನದಾಸ ಶೆಣೈಯವರ ಅಣ್ಣನ ಮಗ.

ಬಡಗುತಿಟ್ಟು ಯಕ್ಷಗಾನದ ಆರೇಳು ವೇಷಗಳ ಸೆಟ್ ಈ ತಂಡದವರಲ್ಲಿದೆ. ಕನಿಷ್ಠ ಎರಡು ತಿಂಗಳಿಗೊಂದಾದರೂ ಕಾರ್ಯಕ್ರಮ ನೀಡುತ್ತಿದ್ದಾರೆ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಂತೂ ಈ ತಂಡದ ಸದ್ದಿಲ್ಲದ ಕೈಂಕರ್ಯ ಗರಿಗೆದರುತ್ತದೆ. ಅಜಿತ್ ಅವರೇ ಹೇಳುವಂತೆ, 'ಇವೆಲ್ಲ ದುಡ್ಡಿಗಾಗಿ ಅಲ್ಲ, ನಮ್ಮ ಒಳಗಿರುವ ಯಕ್ಷಗಾನದ ತುಡಿತಕ್ಕಾಗಿ'. ಅಜಿತ್ ಏಳೆಂಟು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಟಾಟಾ ಕಂಪನಿಯಲ್ಲಿ ಉದ್ಯೋಗಕ್ಕಿದ್ದರು. ಇವರ ಜೊತೆ ಸಾಲಿಗ್ರಾಮ ಮಕ್ಕಳ ಮೇಳದಲ್ಲಿ ವೇಷ ಹಾಕಿ ಅನುಭವವಿದ್ದ ಕೋಟದ ಶಶಿಧರ ನಾಯರಿ ಇದ್ದಾರೆ. ಜೊತೆಗೆ, ಕಟೀಲು ಮೇಳದ ಭಾಗವತರಾದ ಪುತ್ತೂರು ರಮೇಶ್ ಭಟ್ಟರ ಪುತ್ರ ಶ್ರೀಹರಿ ಎಚ್.ಆರ್. (ಇವರು ತಾಯ್ನಾಡಲ್ಲಿರುವಾಗ ತೆಂಕು ತಿಟ್ಟಿನ ಪ್ರಮುಖ ಪಾತ್ರಗಳನ್ನೆಲ್ಲ ನಿರ್ವಹಿಸಿದವರು) ಇದ್ದಾರೆ. ನಾಟಕ ರಂಗಭೂಮಿಯ ಹಿನ್ನೆಲೆಯಿರುವ ಸುಷ್ಮಾ ಅವರೂ ಜೊತೆಗೂಡಿದ್ದಾರೆ. ನರೇಂದ್ರರ ಮಗಳು ಖುಷಿ ಶೆಣೈ ಹಾಗೂ 6 ವರ್ಷದ ಬಾಲಕ, ಕೋಟದ ಆದಿಶೇಷ ಕೂಡ ಈ ತಂಡದಲ್ಲಿ ಯಕ್ಷಗಾನಾಭ್ಯಾಸಿಗಳಾಗಿದ್ದಾರೆ.



ಯಕ್ಷಮಿತ್ರರು, ಜರ್ಮನಿ- ಪ್ರದರ್ಶಿಸಿದ ಭಸ್ಮಾಸುರ-ಮೋಹಿನಿ ಪ್ರಸಂಗದ ದೃಶ್ಯ

ಕಾಂತಾರ ಕನ್ನಡ ಚಲನಚಿತ್ರ ಬಂದಮೇಲೆ ಕನ್ನಡೇತರರು, ಜರ್ಮನಿವಾಸಿಗಳೂ ಯಕ್ಷಗಾನದ ಬಗೆಗೆ ಆಸ್ಥೆ ತೋರುತ್ತಿದ್ದಾರಂತೆ.

ಮ್ಯೂನಿಕ್ ಸಿರಿಗನ್ನಡ ಕೂಟವು ಪ್ರತಿವರ್ಷ ಸಹಾಯಾರ್ಥ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕಳೆದ ವರ್ಷವೂ ಇವರ ಜೊತೆಗೂಡಿದ್ದ ಯಕ್ಷಮಿತ್ರರು, ಲಂಕಾದಹನ ಯಕ್ಷಗಾನ ಪ್ರದರ್ಶಿಸಿದ್ದರು. ಈ ವರ್ಷ ಬಡ ವಿದ್ಯಾರ್ಥಿಗಳ ಹಾಗೂ ಭಾರತದಲ್ಲಿರುವ ಯಕ್ಷಗಾನ ಕಲಾವಿದರೊಬ್ಬರಿಗೆ ನೆರವು ನೀಡುವುದಕ್ಕಾಗಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಇದು ಸೇವಾರ್ಥವಾಗಿರುವುದರಿಂದ ಟಿಕೆಟ್ ಇದೆ. ಈ ರೀತಿ ಚಾರಿಟಿ ಕಾರ್ಯಕ್ರಮಗಳಲ್ಲಿ ಸಂಗ್ರಹವಾದ ಮೊತ್ತವನ್ನು ಬೇರಾವುದೋ ಎನ್‌ಜಿಒಗಳಿಗೆ ಕೊಡುವುದಕ್ಕಿಂತ, ಅರ್ಹ ಮತ್ತು ಅಗತ್ಯವಿರುವ ಬಡ ಯಕ್ಷಗಾನ ಕಲಾವಿದರಿಗೆ ನೀಡುವುದು ಒಳ್ಳೆಯದಲ್ಲವೇ ಎಂಬ ಸಲಹೆಯನ್ನು ಮ್ಯೂನಿಕ್ ಸಿರಿಗನ್ನಡ ಕೂಟವೂ ಒಪ್ಪಿಕೊಂಡಿದೆ. ಸಂಗ್ರಹವಾದರೂ- ಆಗದಿದ್ದರೂ ನಿರ್ದಿಷ್ಟ ಮೊತ್ತವನ್ನು ಸಹಾಯದ ಅಗತ್ಯವಿರುವ ಯಕ್ಷಗಾನ ಕಲಾವಿದರಿಗೆ ನೀಡಬೇಕೆಂಬ ನಿರ್ಧಾರ ಯಕ್ಷಮಿತ್ರರು ತಂಡದ್ದು.

ಜೂ.25ರ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹವ್ಯಾಸಿ ಕಲಾವಿದ ರಾಮಕೃಷ್ಣ ಭಟ್ ರಾಮನ ಪಾತ್ರದಲ್ಲಿ, ಅಜಿತ್ ಪ್ರಭು ಕುಶನಾಗಿ, ಅಪೂರ್ವ ಬೆಳೆಯೂರು ಲವನಾಗಿ, ಶಶಿಧರ ನಾಯರಿ ಶತ್ರುಘ್ನ, ಸುಷ್ಮಾ ರವೀಂದ್ರ ಅವರು ಸೀತೆಯ ಪಾತ್ರ ನಿರ್ವಹಿಸಲಿದ್ದಾರೆ. ಉಳಿದಂತೆ ಶ್ರೀಹರಿ, ಅರವಿಂದ್, ಖುಷಿ ಶೆಣೈ, ಆದಿಶೇಷ ಕೂಡ ರಂಗದಲ್ಲಿ ವಟುಗಳಾಗಿ, ಬಾಲಗೋಪಾಲರಾಗಿ ಕಾಣಿಸಿಕೊಳ್ಳಲಿದ್ದಾರೆ. ಹಿಮ್ಮೇಳಕ್ಕೆ ಸದ್ಯಕ್ಕೆ ರೆಕಾರ್ಡೆಡ್ ಸಿ.ಡಿ ಬಳಸುತ್ತಿದ್ದಾರೆ. ತಮ್ಮದೇ ಹಿಮ್ಮೇಳ ತಂಡ ಕಟ್ಟಬೇಕೆಂಬ ಇರಾದೆಯಿದೆ. ಯಕ್ಷಗಾನವನ್ನು ಮತ್ತಷ್ಟು ವಿಸ್ತರಿಸಬೇಕೆಂಬ ಪ್ರಾಮಾಣಿಕ ಹೆಬ್ಬಯಕೆಯಿದೆ.

ಬೇಯುತ್ತಿದೆ ಭೂಮಿ...

8ನೇ ಪುಟದಿಂದ...

ದೆಹಲಿಯ ಪಹಾರ್‌ಗಂಜ್‌ನ ಕೊಳೆಗೇರಿಯ ನರೇಶ್ ತಟಾವೆಟ್, 'ಮನೆಗೆ ತ್ರೀ ಸ್ಟಾರ್ ಎ.ಸಿ ತಂದಿದ್ದೇನೆ, ಮೊದಲೆಲ್ಲ ನೆಂಟರಿಷ್ಟರು ಮನೆಗೆ ಬರಲು ಅಳುಕುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು, ಎರಡು ದಿನ ಇದ್ದು ಹೋಗುತ್ತೇವೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ. 'ಬೈಕು, ಸ್ಕೂಟರ್ ತ್ಯಾಗ ಮಾಡಿ ಎ.ಸಿ ಹಾಕಿಸಿದ್ದೇವೆ' ಎನ್ನುವ ಕರ್‌ಮ್‌ವೀರ್ ನೈವಾಲ್, 'ಎ.ಸಿ ತಂದ ಮನೆಯವರಿಗೆ ವಠಾರದ ಇತರರೇ ಸಿಹಿ ಹಂಚಿ ಸಂಭ್ರಮಿಸುವುದನ್ನು ಪ್ರತಿ ನಿತ್ಯ ನೋಡುತ್ತಿದ್ದೇವೆ. ಮಕ್ಕಳು ಕಾಯಿಲೆ ಬೀಳುತ್ತಿಲ್ಲ, ನಮಗಿನ್ನೇನು ಬೇಕು' ಎಂದೂ ಕೇಳುತ್ತಾರೆ.

ಧಗೆ ಹೆಚ್ಚಿದಂತೆ ಎ.ಸಿ ಕೊಳ್ಳುವವರ ಸಂಖ್ಯೆಯೂ ಏರುತ್ತಿದೆ. ಕೊಳ್ಳುಗರಿಗೆ ಅನುಕೂಲವಾಗಲೆಂದು ಉತ್ಪನ್ನದ ಮೇಲಿನ ತೆರಿಗೆಯನ್ನು ಶೇ 28ರಿಂದ ಶೇ 18ಕ್ಕಿಳಿಸಿರುವ ಮಾರಾಟ ಕಂಪನಿಗಳು ಜನರು ಫೈವ್‌ಸ್ಟಾರ್ ರೇಟಿಂಗ್ ಇರುವ ಯುನಿಟ್‌ಗಳನ್ನು ಖರೀದಿಸುವಲ್ಲಿ ಆಸಕ್ತಿ ತೋರುವಂತೆ ಮಾಡುವುದು ತಮ್ಮೆಲ್ಲರ ಜವಾಬ್ದಾರಿ ಎನ್ನುತ್ತಾರೆ. ಹವಾನಿಯಂತ್ರಕ ತಯಾರಕ ಜಪಾನ್‌ನ ಡೈಕಿನ್, ಹಯರ್‌ನಂಥ ಕಂಪನಿಗಳವರು ಏರುತ್ತಿರುವ ಬೇಡಿಕೆಯನ್ನು ಪೂರೈಸಲು ತಾವು ಸಿದ್ಧ, ಆದರೆ ತಯಾರಿಕೆಯ ಹಂತದಲ್ಲಿ ಶುದ್ಧ ವಿದ್ಯುತ್‌ನ ಬಳಕೆಯಾಗುತ್ತಿಲ್ಲ. ಹಾಗಾಗಿ ಭೂಮಿಯ ಬಿಸಿ ಹೆಚ್ಚಿಸುವುದನ್ನು ತಡೆಯುವಲ್ಲಿ ವಿಫಲರಾಗುತ್ತಿದ್ದೇವೆ ಎನ್ನುತ್ತಾರೆ. ಇಲ್ಲಿ ಗಾಳಿಯನ್ನು ತಂಪಾಗಿಸಲು ಬಳಸುವ ಹೈಡ್ರೋ ಫ್ಲೋರೋ ಕಾರ್ಬನ್‌ಗಳು (HFC) ಇಂಗಾಲದ ಡೈ ಆಕ್ಸೈಡ್‌ಗಿಂತ ಸಾವಿರ ಪಟ್ಟು ವಾತಾವರಣದ ಬಿಸಿಯನ್ನು ಹೆಚ್ಚಿಸುತ್ತವೆ.

ಹಳೆಯ ಚಿಂತನೆ, ಹೊಸ ಕೆಲಸ

ಎ.ಸಿಗಳಲ್ಲಿ ಬಳಸುವ ರಸಾಯನಿಕಗಳಿಂದ ಓಝೋನ್ ಪದರಕ್ಕೆ ಅಪಾಯವಿದೆ ಎಂದು ಸಂಶೋಧನೆಯಾದ ಮೇಲೆ 1987ರಲ್ಲಿ ಸಭೆ ಸೇರಿ ಮಾಂಟ್ರಿಯಲ್ ಒಪ್ಪಂದಕ್ಕೆ ಸಹಿ ಹಾಕಿದ ಎಲ್ಲ ದೇಶಗಳ ನಾಯಕರು 'ಆಯಿತು ಸಿಎಫ್‌ಸಿ ಮತ್ತು ಬಿಎಫ್‌ಸಿಗಳ ಬಳಕೆ ನಿಲ್ಲಿಸಿ ವಿಜ್ಞಾನಿಗಳು ಶಿಫಾರಸು ಮಾಡಿರುವ ಹೈಡ್ರೋ ಕ್ಲೋರೋ ಫ್ಲೋರೋ ಕಾರ್ಬನ್ (HCFC) ಬಳಸುತ್ತೇವೆ' ಎಂದರು. ಸುಧಾರಿತ ರಾಷ್ಟ್ರಗಳು 2004ರಲ್ಲಿ ಸಿಎಫ್‌ಸಿ ಮತ್ತು ಬಿಎಫ್‌ಸಿಗಳ ಉತ್ಪಾದನೆ ಮತ್ತು ಬಳಕೆಯನ್ನು ನಿಷೇಧಿಸಿದವು. ನಾವು ಅದನ್ನು ಮಾಡಿದ್ದು 2010ರಲ್ಲಿ. ಆ ವೇಳೆಗೆ ಎಚ್‌ಸಿಎಫ್‌ಸಿ ಅಂದರೆ ಹೈಡ್ರೋ ಕ್ಲೋರೋ ಫ್ಲೋರೋ ಕಾರ್ಬನ್‌ಗಳೂ ಸುರಕ್ಷಿತವಲ್ಲ ಮತ್ತು ಅವುಗಳಿಂದ ಓಝೋನ್ ಪದರಕ್ಕೆ ತಕ್ಕಮಟ್ಟಿಗೆ ಅಪಾಯವಿದೆ ಎಂದು ತಿಳಿಯಿತು. ಅವು ಕಾರ್ಬನ್ ಡೈ ಆಕ್ಸೈಡ್‌ಗಿಂತ ಸಾವಿರಾರು ಪಟ್ಟು ಹೆಚ್ಚು ಭೂಮಿ ಬಿಸಿ ಮಾಡುವ ಶಾಖವರ್ಧಕಗಳು ಎಂದು ಗೊತ್ತಾದಾಗ 'ಊದುವುದನ್ನು ಕೊಟ್ಟು ಒದರುವುದನ್ನು ತೆಗೆದುಕೊಂಡಂತಾಯಿತು'. ಹವಾನಿಯಂತ್ರಕಗಳಲ್ಲಿ ಬಳಸುವ ಶೀತಕಾರಕ ರಸಾಯನಿಕಗಳ ನಿಯಂತ್ರಣದ ರೂಪುರೇಷೆಗಳನ್ನು ನಿರ್ಧರಿಸಲು 2016ರಲ್ಲಿ ರುವಾಂಡದ ಕಿಗಳಿಯಲ್ಲಿ 170 ದೇಶಗಳ ಸಭೆ ನಡೆಯಿತು. ಸಭೆ 2030ರ ವೇಳೆಗೆ ಎಚ್‌ಸಿಎಫ್‌ಸಿಗಳ ಬಳಕೆಯನ್ನು ಹಂತ ಹಂತವಾಗಿ ಸಂಪೂರ್ಣವಾಗಿ ನಿಷೇಧಿಸಬೇಕೆಂದು ನಿರ್ಧರಿಸಿದಾಗ 81 ದೇಶಗಳು ಮಾತ್ರ ಸಹಿ ಮಾಡಿದವು. ಭಾರತ, ಚೀನಾ ಮತ್ತು ಅಮೆರಿಕ 'ಸದ್ಯಕ್ಕೆ ಸಾಧ್ಯವಿಲ್ಲ ಕ್ರಮೇಣ ಮಾಡುತ್ತೇವೆ' ಎಂದು ಭರವಸೆ ನೀಡಿ ಸುಮ್ಮನಾದವು.

ವಾಸ್ತವದ ಬಿಸಿ

ಕಿಗಳಿ ಒಪ್ಪಂದ ಈಗ ಜಾರಿಯಲ್ಲಿದೆ. ಶೀತಲೀಕರಣ ಉದ್ಯಮಗಳಲ್ಲಿ ಎಚ್‌ಸಿಎಫ್‌ಸಿಗಳ ಬಳಕೆ ಅತ್ಯಧಿಕವಾಗಿದ್ದು, ಬೆಳೆಯನ್ನು ಕಾಪಾಡುವ ಕೋಲ್ಡ್ ಸ್ಟೋರೇಜ್ ಮತ್ತು ಎ.ಸಿ, ರೆಫ್ರಿಜರೇಟರ್‌ಗಳಿಗೆ ಅದು ಬೇಕೇ ಬೇಕು. ಅದಕ್ಕಾಗಿ ಇಂಡಿಯ ಕೂಲಿಂಗ್ ಆಕ್ಷನ್ ಪ್ಲಾನ್- ICAPನ್ನು ಪ್ರಾರಂಭಿಸಿರುವ ಕೇಂದ್ರ ಸರ್ಕಾರ ಇನ್ನು ಇಪ್ಪತ್ತು ವರ್ಷಗಳಲ್ಲಿ ಶೀತಲೀಕರಣ ಉದ್ಯಮದ ಬೇಡಿಕೆ ಎಂಟು ಪಟ್ಟು ಹೆಚ್ಚಲಿದೆ. ಹದಿನೈದು ವರ್ಷಗಳಲ್ಲಿ ಎಚ್‌ಸಿಎಫ್‌ಸಿ ಮೇಲಿನ ನಮ್ಮ ಅವಲಂಬನೆ ಸ್ವಲ್ಪ ಕಡಿಮೆಯಾಗಬಹುದು ಎಂದಿದೆ. ಸಂಪೂರ್ಣ ನಿಷೇಧಕ್ಕೆ 2050ರವರಿಗೂ ಸಮಯ ಹಿಡಿಯಬಹುದು ಎಂಬ ಅಂದಾಜಿದೆ. ಈಗ ನಮ್ಮ ಫ್ರಿಜ್ ಮತ್ತು ಎ.ಸಿಗಳಲ್ಲಿ ಎಚ್‌ಸಿಎಫ್‌ಸಿ-22 ಕ್ಲೋರೋ ಡೈಫ್ಲೋರೋ ಮೀಥೇನ್ ಸಂಯುಕ್ತವನ್ನು ಬಳಸುತ್ತಿದ್ದೇವೆ. ಇದರ ಉತ್ಪಾದನೆಯ ಜೊತೆಗೆ ಬೈಪ್ರಾಡಕ್ಟಾಗಿ ಹೊಮ್ಮುವ ಎಚ್‌ಸಿಎಫ್‌ಸಿ-23 ಕ್ಲೋರೋ ಟ್ರೈಫ್ಲೋರೋ ಮೀಥೇನ್ ಸಂಯುಕ್ತ ಭೂಮಿಯ ಶಾಖ ವರ್ಧಿಸುವುದರಿಂದ ನಾವೂ ಬೇರೆ ಮಾರ್ಗ ಹುಡುಕಬೇಕಿದೆ. ಸಿಎಫ್‌ಸಿ, ಎಚ್‌ಸಿಎಫ್‌ಸಿಗಳ ಬದಲಿಗೆ ಅತ್ಯುತ್ತಮ ಶೀತಕಾರಕಗಳು ಮತ್ತು ಕಡಿಮೆ ಶಾಖವರ್ಧಕಗಳಾದ ಬುಟೇನ್ ಮತ್ತು ಪ್ರೊಪೇನ್‌ಗಳನ್ನು ಬಳಸುವ ಅವಕಾಶವಿದೆ. ಆದರೆ ಬಳಸಲು ಪರವಾನಗಿ ಇಲ್ಲ. ಅಲ್ಲದೆ ಇವು ತೀವ್ರವಾಗಿ ದಹಿಸುವ ಗುಣ ಹೊಂದಿರುವುದರಿಂದ ಬಳಸುವಾಗ ಭಾರಿ ಎಚ್ಚರಿಕೆ ವಹಿಸಬೇಕಾಗುತ್ತದೆ.

ಕಳೆದ ನಾಲ್ಕು ದಶಕಗಳಿಂದ ಉಪಖಂಡದ ಅನೇಕ ಭಾಗಗಳಲ್ಲಿ ನಡು ಹಗಲಿನ ಉಷ್ಣಾಂಶ 45-50 ಡಿಗ್ರಿ ತಲುಪಿರುವುದು ದಾಖಲಾಗಿದೆ. ಪ್ರತಿ ಒಂದು ಡಿಗ್ರಿ ಉಷ್ಣಾಂಶ ಹೆಚ್ಚಾದಂತೆ ಉತ್ಪಾದನಾ ಸಾಮರ್ಥ್ಯ ಶೇ 2ರಷ್ಟು ಕಡಿಮೆಯಾಗುತ್ತದೆ. ಕಳೆದ 30 ವರ್ಷಗಳಲ್ಲಿ ಭಾರತದ ಶೇ 1ರಷ್ಟು ಜಿಡಿಪಿ ಕುಸಿದಿದೆ ಎನ್ನುವ ಆರ್ಥಿಕ ತಜ್ಞ ಇ.ಸೋಮನಾಥನ್ ಏರಿದ ಉಷ್ಣದಿಂದ 3,200 ಕೋಟಿ ಡಾಲರ್ ನಷ್ಟ ಸಂಭವಿಸಿದೆ ಎಂದು ದಾಖಲೆ ನೀಡುತ್ತಾರೆ. ನಾವು ಈಗ ನಡೆಸುತ್ತಿರುವ ಜೀವನಶೈಲಿಯಿಂದ ವರ್ಷಕ್ಕೆ 51 ಬಿಲಿಯನ್ ಟನ್‌ನಷ್ಟು ಇಂಗಾಲದ ಡೈ ಆಕ್ಸೈಡ್ ಹೊಮ್ಮುತ್ತಿದೆ. ಇದರಿಂದ ಭೂಮಿಯ ಉಷ್ಣಾಂಶ 2 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಹೆಚ್ಚಬಹುದೆಂಬ ಅಂದಾಜಿದೆ. ವಿಶ್ವ ಮಟ್ಟದ ಒಪ್ಪಂದಗಳೇನೇ ಇರಲಿ, ನಮ್ಮ ದೈನಂದಿನ ಬದುಕು ನಡೆಯಲು ನಮಗೆ ರಾತ್ರಿಯ ನಿದ್ದೆಯೂ ಇಲ್ಲದಂತಾದರೆ ಯಾವ ನ್ಯಾಯ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಬೇಕಾದ ಅಭಿವೃದ್ಧಿ ಸಂಪಾದಿಸಲು ನೀವು ಭೂಮಿಯನ್ನು ಸಾಕಷ್ಟು ಗಾಸಿಗೊಳಿಸಿದ್ದೀರಿ, ಈಗ ನಮಗೆ ಯಾವುದು ಸರಿ, ಯಾವುದು ತಪ್ಪು ಎಂದು ತಿದ್ದಲು ಬರುತ್ತೀರಾ? ನಮ್ಮ ಜನಸಂಖ್ಯೆಯ ಬೇಡಿಕೆ ಪೂರೈಸಲು ನಾವೂ ಸಹ ಶ್ರಮಿಸುತ್ತಿದ್ದೇವೆ, ಅಲ್ಲಿಯವರೆಗೆ ಒಪ್ಪಂದಗಳ ನಿಭಾವಣೆಗೆ ಕಾಲಾವಕಾಶ ಬೇಕು ಎಂದಿರುವ ನಾವು 2075ಕ್ಕೆ 'ಶೂನ್ಯ ಇಂಗಾಲ' ಸಾಧಿಸುತ್ತೇವೆ ಎಂಬುದು ನಮ್ಮ ಮಾತು.

ಮುನ್ನೋಟ 04-06-2023 ರಿಂದ 10-06-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಗೆಳೆತನಕ್ಕೆ ಸಂಬಂಧಿಸಿದ ವಿಷಯದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಿ. ದಿನಸಿ ವರ್ತಕ ಒಟ್ಟೊಟ್ಟಿಗೆ ಹೆಚ್ಚಿನ ಬಂಡವಾಳವನ್ನು ಈಗ ಹೂಡುವುದು ಬೇಡ. ಸಾಧು ಸಂತರ ದರ್ಶನಕ್ಕಾಗಿ ದೂರದೂರಿಗೆ ಹೋಗಿ ಬರುವಿರಿ. ಹಲವಾರು ಅವಕಾಶಗಳು ನಿಮ್ಮೆದುರಿಗಿದ್ದರೂ ಕೂಡ ಗೊಂದಲದಿಂದ ಆಯ್ಕೆ ಮಾಡಿಕೊಳ್ಳಲು ವಿಫಲವಾಗುವಿರಿ. ವೃತ್ತಿಯಲ್ಲಿ ದೂರದ ಊರಿಗೆ ವರ್ಗಾವಣೆಯಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಅತಿಯಾದ ಆತ್ಮಗೌರವ ನಿಮ್ಮಲ್ಲಿ ಇರುತ್ತದೆ. ಸಂಗೀತಗಾರನಿಗೆ ಅಥವಾ ನಾಟ್ಯಗಾರರಿಗೆ ಉತ್ತಮ ವೇದಿಕೆಯ ಜೊತೆಗೆ ಉತ್ತಮ ಸಂಭಾವನೆ ಸಿಗುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಸ್ನೇಹಿತರೊಡನೆ ಕೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರಿಗೆ ಅಭಿವೃದ್ಧಿಯ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮುದ್ರಣ ವೃತ್ತಿಯಲ್ಲಿ ಇರುವವರಿಗೆ ಕೈ ತುಂಬಾ ಕೆಲಸ ಬರುವ ಸಾಧ್ಯತೆ ಇದೆ. ನಿಮ್ಮ ಕೆಲವೊಂದು ತೊಂದರೆಗಳು ತನ್ನಿಂದ ತಾನೇ ಉಪಶಮನಗೊಳ್ಳಲಿದೆ. ನ್ಯಾಯವಾದಿಗಳಿಗೆ ಅವರ ಕೆಲಸಗಳಲ್ಲಿ ಜಯ ಸಿಗುತ್ತದೆ. ಕುಟುಂಬದಲ್ಲಿ ಮಹತ್ವದೆನಿಸುವ ವಿಚಾರಗಳ ದೀರ್ಘಸಮಾಲೋಚನೆ ನಡೆಯುವುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸ್ವಂತ ಹೋಟೆಲ್ ಪ್ರಾರಂಭಿಸುವ ಕೆಲವರ ಆಸೆ ಈಡೇರುತ್ತದೆ. ಆತ್ಮ ಗೌರವ ಕಾಪಾಡಿಕೊಳ್ಳಲು ಕುಟುಂಬದವರೊಡನೆ ದಿಢೀರ್ ಹೊಂದಾಣಿಕೆಯನ್ನು ಮಾಡಿಕೊಳ್ಳುವಿರಿ. ಪ್ರೇಮಿಗಳು ಭಿನ್ನಾಭಿಪ್ರಾಯದಿಂದ ದೂರವಾಗುವ ಸಾಧ್ಯತೆ ಇದೆ. ಅನವಶ್ಯಕ ವಿವಾದಗಳಿಂದ ದೂರ ಉಳಿಯುವುದು ನಿಮಗೆ ಒಳ್ಳೆಯದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಓದುವ ಅವಕಾಶ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರು ಹೆಚ್ಚು ಅಭ್ಯಾಸ ಮಾಡಬೇಕು. ತಂದೆಯಿಂದ ವ್ಯವಹಾರದ ಬಗ್ಗೆ ಸಲಹೆ ಸೂಚನೆಗಳು ಹಾಗೂ ಸಹಾಯ ದೊರೆಯುತ್ತದೆ. ಹೈನುಗಾರಿಕೆ ಮಾಡುವವರಿಗೆ ಉತ್ತಮ ಸಂಪಾದನೆ ಇರುತ್ತದೆ. ಆಸ್ತಿ ಸಂಬಂಧಿತ ವಿಚಾರದಲ್ಲಿ ಮುನ್ನಡೆ ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ಕೆಲವು ದೋಷಾರೋಪಗಳು ಕೇಳಿ ಬರಬಹುದು. ಮರದ ವ್ಯಾಪಾರ ಮಾಡುವವರಿಗೆ ಸಾಕಷ್ಟು ಲಾಭವಿದೆ. ಮರದ ಕೆತ್ತನೆ ಕೆಲಸವನ್ನು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸೋದರಿಯರಿಂದ ನಿಮ್ಮ ಕೆಲಸಕ್ಕೆ ಪ್ರೋತ್ಸಾಹ ದೊರೆಯುತ್ತದೆ. ಹಣ ಹೂಡಿಕೆ ವಿಚಾರದಲ್ಲಿ ಸಾಕಷ್ಟು ಎಚ್ಚರವಿರಲಿ. ಮಕ್ಕಳ ಅಭಿವೃದ್ಧಿ ಕುರಿತು ಹೆಚ್ಚಿನ ಚಿಂತೆ ಕಾಣುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಅತಿಯಾದ ಆಲಸಿತನ ನಿಮ್ಮನ್ನು ಆವರಿಸಿಕೊಳ್ಳಬಹುದು. ಹಣದ ಒಳಹರಿವು ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ನಿಮ್ಮ ನಡವಳಿಕೆಯಿಂದ ಸ್ನೇಹಿತರನ್ನು ಗೆಲ್ಲುವಿರಿ. ಕೃಷಿಕರಿಗೆ ಕೃಷಿಯಿಂದ ಹೆಚ್ಚು ಆದಾಯವಿದೆ. ಅನಾರೋಗ್ಯ ಪೀಡಿತರ ಸ್ಥಿತಿ ಉತ್ತಮಗೊಳ್ಳುತ್ತದೆ. ಅತಿಯಾದ ವಾಗ್ವಾದ ನಿಮ್ಮ ಘನತೆಗೆ ಧಕ್ಕೆ ತರಬಹುದು. ಸೂಕ್ಷ್ಮ ವಿಚಾರಗಳಲ್ಲಿ ಹಿರಿಯರ ಮಾರ್ಗದರ್ಶನದಂತೆ ನಡೆಯುವುದು ಉತ್ತಮ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವೃತ್ತಿಯಲ್ಲಿ ಹೊಸ ಜವಾಬ್ದಾರಿಗಳನ್ನು ಹೊರಲು ಸಿದ್ಧರಾಗಬೇಕಾಗಿದೆ. ಮನೆಯವರ ಒಳಿತಿಗಾಗಿ ಹೊಸ ಆದಾಯದ ಮೂಲಗಳನ್ನು ಹುಡುಕುವಿರಿ. ಕೃಷಿ ಸಂಬಂಧಿತ ಕೆಲಸ ಕಾರ್ಯಗಳು ವೇಗವಾಗಿ ಸಾಗುತ್ತವೆ. ರಾಜಕೀಯ ವ್ಯಕ್ತಿಗಳು ಸ್ಥಾನಮಾನ ಪಡೆಯಲು ಹಿಂಬಾಲಕರನ್ನು ಬಳಸಿಕೊಳ್ಳುವರು. ನಿಮ್ಮ ಮಕ್ಕಳಿಂದ ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ,ಹಾಗಾಗಿ ಖರ್ಚಿಗೆ ಕಡಿವಾಣ ಹಾಕಿರಿ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಹೊಸ ಯೋಜನೆಗೆ ಸ್ಪಷ್ಟ ರೂಪವನ್ನು ನೀಡಲು ಈಗ ಕಾಲ ಕೂಡಿ ಬರುತ್ತದೆ. ವಿದ್ಯಾರ್ಥಿಗಳಿಗೆ ಸಾಕಷ್ಟು ಉತ್ತಮ ಕಾಲ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ದೊರೆಯುತ್ತವೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಕುಟುಂಬದಲ್ಲಿ ಹೊಸ ಸಂತೋಷ ಮೂಡುವ ಸಾಧ್ಯತೆ ಇದೆ. ಸಾಹಿತ್ಯ ರಚನೆಕಾರರಿಗೆ ಉತ್ತಮ ಸಾಹಿತ್ಯ ರಚನೆ ಮಾಡುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಣ ನಿರ್ವಹಣೆಯಿಂದ ಕುಟುಂಬದಲ್ಲಿ ಆರ್ಥಿಕ ಸ್ಥಿರತೆಯನ್ನು ಕಾಣುವಿರಿ. ಸ್ನೇಹಿತರಲ್ಲಿನ ಭಯವನ್ನು ಹೋಗಲಾಡಿಸಿ ಅವರು ಮುನ್ನುಗ್ಗುವಂತೆ ಮಾಡುವಲ್ಲಿ ಯಶಸ್ವಿಯಾಗುವಿರಿ. ಪ್ರಾಪಂಚಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವಾರು ಪುಸ್ತಕಗಳನ್ನು ಓದುವಿರಿ. ಧನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ವಿದೇಶದಲ್ಲಿ ನೆಲಸಿರುವವರಿಗೆ ಸಿರಾಸ್ತಿಯನ್ನು ಮಾಡುವ ಯೋಗವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕಳೆದು ಹೋಗಿದ್ದ ವಸ್ತು ಒಂದು ದೊರೆತು ಸಂತಸಪಡುವಿರಿ. ತಂದೆ ನಿಮ್ಮ ಆರ್ಥಿಕ ಸಹಾಯಕ್ಕೆ ಜೊತೆ ನಿಲ್ಲುವರು. ಅದ್ಭುತವಾದ ಹೊಸ ಆಲೋಚನೆಗಳನ್ನು ಗೆಳೆಯರೊಡನೆ ಹಂಚಿಕೊಂಡು ಕಾರ್ಯರೂಪಕ್ಕೆ ತರಲು ಯತ್ನಿಸುವಿರಿ. ಸಿವಿಲ್ ಇಂಜಿನಿಯರ್‌ಗಳಿಗೆ ಉತ್ತಮ ಕೆಲಸ ಕಾರ್ಯಗಳು ದೊರೆಯುತ್ತವೆ. ಉಪವೃತ್ತಿಯಿಂದ ಹೆಚ್ಚಿನ ಧನ ಸಂಪಾದನೆ ಆಗಬಹುದು. ವೃತ್ತಿಯಲ್ಲಿದ್ದ ಗೊಂದಲಗಳು ಪರಿಹಾರವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮನೆ ಮಾಡುವ ಬಗ್ಗೆ ಸಾಕಷ್ಟು ಆಲೋಚಿಸಿ ಕಾರ್ಯಪ್ರವೃತ್ತರಾಗುವಿರಿ. ಧನ ಆದಾಯವು ತೃಪ್ತಿಕರವಾಗಿರುತ್ತದೆ. ಇತರರ ಭಾವನೆಗಳನ್ನು ಅರಿತು ಅದಕ್ಕೆ ಗೌರವ ಕೊಡುವುದು ಉತ್ತಮ. ಇಂಧನ ಮಾರಾಟಗಾರರಿಗೆ ಸಾಕಷ್ಟು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರಿಸಲು ಸಹಾಯ ದೊರೆಯುತ್ತದೆ. ಆದಾಯದಷ್ಟೇ ಖರ್ಚು ಇರುವುದರಿಂದ ಖರ್ಚಿಗೆ ಕಡಿವಾಣ ಹಾಕುವುದು ಮುಖ್ಯ.

ಪದಬಂಧ 2792



ಮೇಲಿನಿಂದ ಕೆಳಕ್ಕೆ

1. ಕನ್ನಡಿಗರ ಸಡಗರ ಸಂಭ್ರಮಕ್ಕೆ ಸಿಗುವ ನವಂಬರ್ ಒಂದು 4
2. ಸಂಗಸ್ನೇಹಗಳಿಂದ ವರ್ತನೆಯಲ್ಲಿ ಉಂಟಾಗುವ ಲೋಪ 6
3. ಸಿನಿಮಾಗಳಲ್ಲಿ ಮಿನುಗುವ ನಕ್ಷತ್ರಗಳ ಜಗತ್ತು 4
4. ರೋಗ ಮತ್ತು ಬೇನೆಯಿಂದ ನಿರಂತರ ಒದ್ದಾಟ 4
7. ಛತ್ರಪತಿ ಶಿವಾಜಿ ಕಟ್ಟಿದ ರಾಜ್ಯ 3
9. ಲುಕ್ಸಾನು ಮಾಡುವ ಕೈ 4
12. ತಲೆಕೆಳಕಾದ ಈ ಶ್ವಪಚ ಋಷಿಯ ಮಗಳನ್ನು ಮನಸ್ಸಿನಿಂದ ಸ್ಮರಣೆ 3
13. ಸತ್ಯವಾದ ನಮ್ಮ ವಿಷ್ಣುವಿನ ಒಳಮನಸ್ಸು 4
15. ಮಾತಿನಲ್ಲಿ ಹೇಳಿದ ನಮ್ಮ ದೇಶದ ಪುರಾಣ 6
16. ಸಂಕಲ್ಪಮಾಡಿ ದೇವರಿಗಿಟ್ಟ ಮುಡಿಪು 3
18. ಜೈನರ ಮೊದಲ ಆರಾಧ್ಯ ಮೂರ್ತಿ 4
19. ಇಹ ಸಂಸಾರದಲ್ಲಿ ಬರುವ ದೇಹ ಬಾಧೆ ಬೇನೆ 4
21. ಮನಕ್ಕೆ ಸಂತಸನೀಡುವ ಕಾಡಿನಂಚಿನ ದ್ರಾವಿಡ ಬೆಟ್ಟ 4

ಎಡದಿಂದ ಬಲಕ್ಕೆ

1. ಅರಸರ ಅಂಗಳದ ಬಿಳಿ ಹಕ್ಕಿ ಈಗ ರಸ್ತೆಗಿಳಿದಿದೆ 4
3. ಅಮ್ಮನಾಗುವ ಅನುಭವ 3
5. ಶ್ರೀಚೆನ್ನ ಸೋಮೇಶ್ವರಾ..ಇದರ ಪೂರ್ವೋಕ್ತಿ 4
6. ಮತ್ತೆ ಬಂದು ದೀರ್ಘವಾಗಿ ಹಿಂದುಮುಂದಾದ ಮತಿಭ್ರಂಶ 3
8. ಇದು ರಾಮ ಸೀತೆಯರಿಗೆ ಹದಿನಾಲ್ಕು ವರ್ಷ 4
10. ನಾಟಕ ಸೂತ್ರಧಾರಿಯ ಮೋಸದ ಮುಖ 3
11. ದೋಣಿಯಲ್ಲೇ ಪ್ರಯಾಣ ಮಾಡುವವನನ್ನು ಹೀಗೆನ್ನಬಹುದೆ 3
13. ಪಟ್ಟು ಹಿಡಿದಿದ್ದನ್ನು ಬಿಡುವುದಿಲ್ಲವೆಂಬ ಮೊಂಡುತನ 2
14. ಶುದ್ಧವಲ್ಲದೆ ಬೆರೆಕೆಯಾದದ್ದು 3
15. ವರಿಯಲ್ಲಿ ಸಿಗುವ ಹೂಗೊಂಚಲು 3
16. ಹಿಂದಿಯ ಹಸಿರು 2
17. ಬಂಗಾರದ ಜಿಂಕೆಯಾದ ಮಾಯಾವಿ 3
18. ಮುಂಗಾರು ಬೀಳುತ್ತಲೇ ಶುರುವಾಗುವ ವ್ಯವಸಾಯ 3
20. ಮಾನವರಲ್ಲಿ ಶ್ರೇಷ್ಠ 4
22. ಗೆಳತಿ-ನಾಯಕ ಮನೆತನದ ಚೆನ್ನಮ್ಮ ರಾಣಿಯ ರಾಜ್ಯ 3
23. ದೇಹದ ವ್ಯಾಧಿಯನ್ನು ಹೊಡೆದೋಡಿಸುವವ 4
24. ಹೊಳೆಯುವ ಹರಳಿನಂತಿರುವ ದೇಹ ಭಾಗ 3
25. ತಲೆ ಸಿಡಿದುಹೋಗುವಂತಹ ಎಲ್ಲಿಲ್ಲದ ನೋವು 4

ಪದಬಂಧ ಉತ್ತರ -2791

ಮೇಲಿಂದ ಕೆಳಕ್ಕೆ

1. ಮುತ್ತುರಾಜ 2.ತ್ರಿಕಾಲ 3.ನಾರದ 4.ವಿವಾಹಿತೆ 6.ನಶ್ವರ 7.ಜಾತಿ 9.ಮಮ 11.ಗಗನಚರ 13.ಪದವಿನ್ಯಾಸ 14.ಶುದ್ಧಜೀವನ 16.ಮರುದಿವಸ 19.ಚರಾಚರ 20.ಕಸಿ 22.ಮಾನಸ 23.ಬಡಿ 24.ದಿಗಂಬರ 26.ಹಿಮಜ 27.ಕರಗು

ಎಡದಿಂದ ಬಲಕ್ಕೆ

1. ಮುಖ್ಯಮಂತ್ರಿ 3.ನಾಡದೇವಿ 5.ಕಾಸಿನಸರ 7.ಜಾಲ 8.ಮದ 10.ಜಗತಿ 13.ಪರಶು 15.ಮಮತೆ 17.ನವ್ಯಕವಿ 18.ಜೀವನದಿ 19.ಚರಕ 21.ಸಮಾನ 23.ಬಸದಿ 25.ಸಿಹಿ 27.ಕಡಿ 28.ಮಹಾಸಮರ 29.ರವಿತೇಜ 30.ಗುಹೇಶ್ವರ

'ನೀನು ಚೆಲ್ಲಿದ ಬಣ್ಣದಿಂದ ಚಿತ್ರ ಚಂದವಾಯಿತು...

ಕೋಡಿಬೆಟ್ಟು ರಾಜಲಕ್ಷ್ಮಿ

'ಇಲ್ಲಿ ನೋಡಿ, ಚಿಕ್ಕಂದಿನಲ್ಲಿ ಕೆರೆಯ ನೀರು ಮುಟ್ಟಿದ್ದಕ್ಕೆ ನಂಗೆ ಮೇಲ್ಜಾತಿಯವರು ಹೊಡೆದ ಗುರುತು ಈಗಲೂ ಇದೆ' ಎಂದು ತಮ್ಮ ಉದ್ದನೆಯ ಹಿಂಡುಗೂದಲನ್ನು ತಳ್ಳಿ, ನೆತ್ತಿಯಲ್ಲಿರುವ ಗಾಯದ ಗುರುತೊಂದನ್ನು ತೋರಿಸುತ್ತ ಮಧುಬನಿ ಕಲಾವಿದ ಶ್ರವಣ್ ಪಾಸ್ವಾನ್ ಮುಗುಳುನಕ್ಕರು.

'ಸಹಜ ಬಣ್ಣಗಳಿಂದ ಮಾಡುವ ಈ ಮಧುಬನಿ ಕಲಾಕೃತಿಯಲ್ಲಿ ಹೇಗೆ ರಾಮಾಯಣದ ಕಥೆಗಳಿವೆಯೋ, ಹಾಗೇಯೇ ಈ ಬಣ್ಣಗಳೆಡೆಯಲ್ಲಿ ದಲಿತವರ್ಗದ ಇತಿಹಾಸವೂ ಇದೆ. ಬಣ್ಣಗಳನ್ನು ನಾವೇ ತಯಾರಿಸುತ್ತೇವೆ. ಈ ಪ್ರಕೃತಿಯು ಆ ಮಟ್ಟಿಗೆ ನಮಗೆ ಯಾವುದೇ ಮೋಸ ಮಾಡಲಿಲ್ಲ. ಪಾರಿಜಾತದ ತೊಟ್ಟು, ಕಡುಗುಲಾಬಿ ಬಣ್ಣದ ಸಂಜೆಮಲ್ಲಿಗೆಯ ಎಸಳು, ನಮ್ಮೂರಲ್ಲಿ ಸಿಗುವ ಕರಿಬೀಜ..ಹೀಗೆ ಬಣ್ಣಗಳನ್ನು ಮಾಡುವುದೊಂದು ದೀರ್ಘವಾದ ಕಾಯಕ. ಹಸಿರೆಂದರೆ ಬರೀ ಒಂದೇ ನಮೂನೆ ಹಸಿರಲ್ಲ. ಕೆಂಪೆಂದರೆ ಬರೀ ಕೆಂಪಲ್ಲ. ಕೆಳಜಾತಿ ಎಂದು ಗುರುತಿಸಿಕೊಂಡ ನಮ್ಮವರ ವಿಭಿನ್ನ ಅನುಭವಗಳಂತೆ, ಈ ಬಣ್ಣಗಳು. ಹೊಳಪು.. ಮಸುಕು..ಎಲ್ಲವೂ ಭಿನ್ನ. ಕೆಲವೊಮ್ಮೆ ಇವೆಲ್ಲ ಪದಗಳಿಗೆ ನಿಲುಕುವುದೇ ಅಲ್ಲ ಎಂದು ಅನಿಸುತ್ತದೆ. ಹೌದು ಮತ್ತೆ, ಪದಗಳಿಗೆ ನಿಲುಕದೇ ಇರುವುದಕ್ಕೆ ದೇವರು ನಮಗೆ ಈ ಕಲೆಯ ಕೌಶಲವನ್ನು ದಯಪಾಲಿಸಿದ್ದಾನೆ..' ಎಂದು ಮಾತನಾಡುತ್ತ ಆಡುತ್ತ ಶ್ರವಣ್ ಎತ್ತಲೋ ದಿಟ್ಟಿಸಲಾರಂಭಿಸುತ್ತಾರೆ.

> 'ಸಹಜ ಬಣ್ಣಗಳಿಂದ ಮಾಡುವ ಮಧುಬನಿ ಕಲಾಕೃತಿಯಲ್ಲಿ ಹೇಗೆ ರಾಮಾಯಣದ ಕಥೆಗಳಿವೆಯೋ, ಹಾಗೆಯೇ ಈ ಬಣ್ಣಗಳೆಡೆಯಲ್ಲಿ ದಲಿತವರ್ಗದ ಇತಿಹಾಸವೂ ಇದೆ' ಎನ್ನುವ ಕಲಾವಿದ ಶ್ರವಣ್ ಪಾಸ್ವಾನ್ ಅವರ ಬದುಕಿನ ಆಸಕ್ತಿದಾಯಕ ಕಥೆ ಇಲ್ಲಿದೆ...

ಪುಟ್ಟದೊಂದು ಪೋನಿಟೇಲ್ ಜುಟ್ಟು ಕಟ್ಟಿಕೊಂಡ ಶ್ರವಣ್ ಅವರದು ಎತ್ತರದ ವ್ಯಕ್ತಿತ್ವ, ಕೌಶಲದಲ್ಲಿಯೂ.,ಆಲೋಚನೆಯಲ್ಲಿಯೂ. ಬದುಕಿನ ಅನುಭವ ಶ್ರೀಮಂತವಾದುದು. ಅವರ ಬಾಲ್ಯ, ಯೌವ್ವನ, ಹೋರಾಟ, ಯಶಸ್ಸು, ಸೋಲು...ಏನೇ ಆಗಲಿ, ಅದರಲ್ಲಿ ಬಣ್ಣಗಳ ಪಾತ್ರವಿದೆ. ಅವರ ಬದುಕಿನಲ್ಲಿ ಅಕ್ಕ, ತಮ್ಮ, ಅಣ್ಣ..ತಂಗಿ, ತಂದೆ ತಾಯಿ ಎಂಬ ಸಂಬಂಧಗಳು ಇರುವಂತೆಯೇ 'ಬಣ್ಣ'ಎಂಬುದೊಂದು ಸಂಬಂಧಿಯೇ ಆಗಿದೆಯೇನೋ.

ಜಾತಿ ತಾರತಮ್ಯವು ಬಾಲ್ಯದಲ್ಲಿ ತೊಡಕಾಗಿದ್ದರೂ, ಅದನ್ನೇ ಊರುಗೋಲಾಗಿಸಿಕೊಂಡು ಅವರು ಪುಟಿದೆದ್ದು ಬದುಕು ಕಟ್ಟಿಕೊಂಡಿದ್ದಾರೆ. 'ಈ ಮಧುಬನಿ ಕಲಾಕೃತಿಗಳ ಯಶಸ್ಸು ಮತ್ತು ಆಕರ್ಷಣೆಯ ದೆಸೆಯಿಂದಾಗಿ ಮೇಲ್ಜಾತಿಯವರು ಎಂದು ಗುರುತಿಸಿಕೊಂಡವರು ನಮ್ಮ ಬಳಿಗೆ ಬರಲಾರಂಭಿಸಿದರು. ಎಲೆಗಳು ಮತ್ತು ಹೂವುಗಳಿಂದ, ತರಕಾರಿಯ ಸಿಪ್ಪೆಗಳಿಂದ ಬಣ್ಣಗಳನ್ನು ತಯಾರಿಸುವ ಕೌಶಲವನ್ನು ನಮ್ಮಿಂದ ಕಲಿತುಕೊಳ್ಳತೊಡಗಿದರು. ಕಲಿಯುವ ಈ ದೀರ್ಘ ಪ್ರಕ್ರಿಯೆಯೇ ಅಸ್ಪೃಶ್ಯತೆಯನ್ನು ಹೋಗಲಾಡಿಸಿರಬೇಕು. ಯಾಕೆಂದರೆ ಕಲಿಯುವುದಕ್ಕೆ ನಮ್ಮ ಬಳಿಗೆ ಬಂದ ಮೇಲ್ಜಾತಿಯವರು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದಿಲ್ಲ. ಅವರಾಗಿಯೇ ನಮ್ಮ ಮನೆಗೆ ಬಂದಮೇಲೆ ಅಸ್ಪೃಶ್ಯತೆಯ ಮಾತೆಲ್ಲಿ.. ಕಲೆಯೊಂದು ತನ್ನ ಶಕ್ತಿಯಿಂದಲೇ ಅಸ್ಪೃಶ್ಯತೆಯನ್ನು ತೊಡೆದು ಹಾಕುತ್ತಿದೆಯಲ್ಲಾ ಎಂದು ನಾನು ಎಷ್ಟೋ ಬಾರಿ ಅಚ್ಚರಿಪಟ್ಟಿದ್ದೇನೆ. ಹಾಗೆಂದು ಇಂದಿಗೂ ನಮ್ಮನ್ನು ಕೀಳು ಜಾತಿಯವರೆಂದು ಬಗೆಯುವ ಮನಸ್ಥಿತಿ ಪೂರ್ತಿ ಬದಲಾಗಿದೆ ಎನ್ನುವಂತಿಲ್ಲ' ಎನ್ನುವ ಶ್ರವಣ್ ಅಂತರಂಗದಲ್ಲಿ ಬದಲಾವಣೆಯ ಕಥೆಗಳ ಕಣಜವೇ ಇದೆ.



ಕಲಾಕೃತಿ

'ಈಗೇನೋ ಯಶಸ್ಸು ದೊರೆಯಿತು ಎಂದ ಮಾತ್ರಕ್ಕೆ, ನಾನು ಅನುಭವಿಸಿದ ನೋವುಗಳು ಮಾಸುವುದಿಲ್ಲ. ಕೇರಳದಲ್ಲೊಮ್ಮೆ ನಡೆದ ಕಾರ್ಯಾಗಾರದಲ್ಲಿ ಮಹಾಭಾರತ ಕುರಿತು ಚಿತ್ರಗಳನ್ನು ಬಿಡಿಸುವಂತೆ ಹೇಳಿದರು. ನನಗೋ, ಕೆರೆಯಲ್ಲಿ ಮಿಂದಿರುವುಕ್ಕೆ ಹೊಡೆಸಿಕೊಂಡ ಅವೇ ನೆನಪುಗಳೇ ಆ ಹೊತ್ತಿನಲ್ಲಿ ಕಾಡಲಾರಂಭಿಸಿತು. ಇನ್ನೇನು ಚಿತ್ರ ಬರೆಯುವುದಕ್ಕಾಗುವುದಿಲ್ಲ ಎಂದು ಕೈ ಚೆಲ್ಲುತ್ತಿದ್ದೆನೋ ಏನೋ. ಕಣ್ಣ ಹನಿಯನ್ನೇ ಚಿತ್ರವಾಗಿಸುವ ಉದ್ದೇಶದಿಂದ ಕುಂಚವೆತ್ತಿಕೊಂಡೆ. ನೋವುಗಳೆಲ್ಲ ಚಿತ್ರಗಳಾಗಿ ಮೂಡಿಬಂದವು. ಮಹಾಭಾರತವಾದರೇನಾಯಿತು, ಜಾತಿಯ ದೆಸೆಯಿಂದ ಅವಮಾನಿತರಾದವರು ಅಂದೂ ಇದ್ದರಲ್ಲ! ಅಂದು ನಾನು ಬಿಡಿಸಿದ ಚಿತ್ರಕ್ಕೆ ಲಲಿತಕಲಾ ಅಕಾಡೆಮಿ ಪ್ರಶಸ್ತಿ ದೊರೆಯಿತು.' ಎನ್ನುತ್ತಾರೆ. ಅವರಿಗೆ ಕಾಳಿದಾಸ್ ಸಮ್ಮಾನ್, ವಿದ್ಯಾಪತಿ ಪುರಸ್ಕಾರಗಳೂ ಸಂದಿವೆ. ಬಿಹಾರದ ಮಧುಬನಿ ಜಿಲ್ಲೆಯ ಜಿತ್‌ವಾರ್‌ಪುರ್ ಅವರ ಹುಟ್ಟೂರು. ಅವರ ಕಲಾಕೃತಿಗಳು ಜಪಾನ್, ಜರ್ಮನಿ, ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಚೀನಾ, ಆಸ್ಟ್ರೇಲಿಯಾ ಸೇರಿದಂತೆ ಅನೇಕ ದೇಶಗಳಲ್ಲಿ ಪ್ರದರ್ಶನಗೊಂಡಿವೆ. ಮಾರಾಟವಾಗುತ್ತಿವೆ. ಗೋದ್ನಾ ಕಲೆಯ ಮೌಲ್ಯವರ್ಧನೆ ಮಾಡುವ ಶ್ರವಣ್ ಹೆಸರು ಈಗ ಅಂತರರಾಷ್ಟ್ರೀಯವಾಗಿ ಗುರುತಿಸಿಕೊಂಡಿದೆ.

ಶ್ರವಣ್ ಅವರದ್ದು ಪಾಸ್ವಾನ್ ಎಂಬ ಬುಡಕಟ್ಟು ಜನಾಂಗಕ್ಕೆ ಸೇರಿದ ಕುಟುಂಬ. ಅವರ ಅಮ್ಮ ಉರ್ಮಿಳಾದೇವಿ ಅದ್ಭುತವಾದ ಗೋದ್ನಾ ಕಲಾವಿದೆ. ಅವರೇ ಮಗನಿಗೆ ಗುರುವೂ ಹೌದು. ಸಹಕಲಾವಿದೆಯೂ ಹೌದು. ಉರ್ಮಿಳಾದೇವಿ ಅವರಿಗೆ ಗೋದ್ನಾ ಕಲಾಜಗತ್ತಿನ ದಂತಕತೆಯೆಂದೇ ಪ್ರಸಿದ್ಧರಾದ ಚಾನೋದೇವಿ ಮತ್ತು ರೌದೀ ಪಾಸ್ವಾನ್ ಗುರುಗಳು. ಮಿಥಿಲಾ ಶೈಲಿಯನ್ನು ಸೀತಾದೇವಿ ಅವರಿಂದ ಕಲಿತರು. ಮಧುಬನಿ ಕಲಾಕೃತಿಗಳಲ್ಲಿ ಮಿಥಿಲಾ ಲೋಕಚಿತ್ರಗಳು ರಾಮಾಯಣ ಮಹಾಭಾರತದ ಕಥೆಗಳನ್ನು ಹೇಳಿದರೆ, ಗೋದ್ನಾ ಕೆಲಯು ಬಿಹಾರದ ಜನಪದ ಕಥೆಗಳ ನಾಯಕ ರಾಜಾ ಶೈಲೇಶನ ಕಥೆಗಳನ್ನು ಗೋದ್ನಾ ಕಲೆಯು ಹೇಳುತ್ತದೆ. ಅಂದಹಾಗೆ ಗೋದ್ನಾ ಎಂದರೆ ಹಚ್ಚೆಯ ಮೂಲಕ ಅರಳುವ ಚಿತ್ರಗಳು. ಸೂಜಿಯ ಮೊನೆಯಲ್ಲಿ ಅರಳುತ್ತಿದ್ದ ಕಲಾಕೃತಿಗಳನ್ನು, ಬಟ್ಟೆಯ ಮೇಲೆ ತಯಾರಿಸಿದಾಗ ಕಲಾ ಜಗತ್ತು ಅದರ ಸೌಂದರ್ಯವನ್ನು ಕಂಡು ಬೆರಗಾಯಿತು. ಸೆಗಣಿ ನೀರಿನಲ್ಲಿ ಅದ್ದಿದ ಮಸುಕು ಹಸಿರು ಬಣ್ಣದ ಬಟ್ಟೆಯಲ್ಲಿ ಗೋದ್ನಾಕಲೆಯು ಸುಂದರವಾಗಿ ಮೂಡುವುದನ್ನು ನೋಡುವುದೇ ಚಂದ. ಚಿತ್ರಗಳ ಆ ಪಟಕ್ಕೆ ಕಥೆಗಳೂ ಸುತ್ತಿಕೊಂಡು ಒಟ್ಟುಕಲಾಕೃತಿಯು ಜೀವದಳೆದು ಗೋಡೆಯೇರಿದಾಗ ಕಲಾವಿದನ ಮನದಲ್ಲೂ ಖುಷಿ. ಕಲಾರಸಿಕರಲ್ಲೂ ಸಂತೃಪ್ತಿ.

ಶ್ರವಣ್ ಅವರ ಅಮ್ಮ ಉರ್ಮಿಳಾದೇವಿ ತಾಳ್ಮೆಯ ಸಾಕಾರ ಮೂರ್ತಿ. ಹಗಲೆಲ್ಲ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ಮಾಡಿ ದಣಿದುಮನೆಗೆ ಬರುತ್ತಿದ್ದರು. ಬಳಿಕ ಕಲಾಕೃತಿಗಳನ್ನು ಮಾಡಲು ಬಣ್ಣಗಳನ್ನೂ ಕ್ಯಾನ್‌ವಾಸ್ ಅನ್ನೂ ಸಿದ್ಧಮಾಡಿಟ್ಟುಕೊಳ್ಳುತ್ತಿದ್ದರು. ಇತ್ತಲಿನ ಮೂಲೆಯಲ್ಲಿ ಅವರು ಚಿತ್ರ ಬರೆಯುತ್ತಿದ್ದಂತೆಯೇ ಅತ್ತಲಿಂದ ಬಣ್ಣಗಳನ್ನು ಚೆಲ್ಲುತ್ತಾ ಚಿತ್ರಗಳನ್ನು ಹಾಳುಮಾಡುತ್ತಿದ್ದ ಪುಟಾಣಿ ಶ್ರವಣ್. ಆದರೆ ಮಗನ ಮೇಲೆ ಎಂದೂ ಸಿಟ್ಟುಮಾಡಿಕೊಳ್ಳದ ಉರ್ಮಿಳಾದೇವಿ, ಚೆಲ್ಲಿದ ಬಣ್ಣಗಳನ್ನು ತಮ್ಮ ಕಲ್ಪನೆಯಲ್ಲಿ ಮತ್ತಷ್ಟು ಸುಂದರವಾಗಿ ಅರಳಿಸುತ್ತ ಕಲಾಕೃತಿಯೊಂದನ್ನು ಸಿದ್ಧಪಡಿಸಿಯೇ ಬಿಡುತ್ತಿದ್ದರು ಮತ್ತು ಹೇಳುತ್ತಿದ್ದರು: 'ನೋಡು..ನೀನು ಬಣ್ಣ ಚೆಲ್ಲಿದ್ದಕ್ಕೇ ಈ ಕಲಾಕೃತಿ ಇಷ್ಟು ಚಂದವಾಯಿತು!' ಅದಕ್ಕೆ ರಾಜ್ಯ ಪುರಸ್ಕಾರ ಬಂದದ್ದೂ ಹೌದುಬಿಡಿ..ಎನ್ನುವ ಶ್ರವಣ್‌ಗೆ ಬಾಲ್ಯವೆಂದರೆ ಅಮ್ಮನೊಡನೆ ಬಣ್ಣಗಳ ಜೊತೆಗೆ ಆಟವಾಡಿದ ದಟ್ಟ ನೆನಪುಗಳು. ಈಗ ಮಗಳು ಉಜಾಲಾ ಕುಮಾರಿ ಮತ್ತು ಅಳಿಯ ಸಂತೋಷ್ ಕುಮಾರ್ ಪಾಸ್ವಾನ್ ಕೂಡ ಗೋದ್ನಾ ಕಲೆಯನ್ನು ಕಲಿತು, ದೇಶದಾದ್ಯಂತ ಕಲಾಪ್ರದರ್ಶನಗಳನ್ನು ನೀಡುತ್ತ ಶ್ರವಣ್ ಅವರಿಗೆ ಸಾಥ್ ನೀಡುತ್ತಿದ್ದಾರೆ.



ಮಂಗಳೂರಿನ ಕೊಡಿಯಾಲ್ ಗುತ್ತು ಮನೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಕಲಾವಿದರಾದ ಶ್ರವಣ್ ಪಾಸ್ವಾನ್, ಸಂತೋಷ್ ಕುಮಾರ್ ಪಾಸ್ವಾನ್ ಮತ್ತು ಉಜಾಲಾ ಕುಮಾರಿ –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಬಹುತ್ವದ ಪ್ರೀತಿ ಹುಟ್ಟಿಸುವ ಕವಿತೆಗಳು


ಡಾ.ನಿಂಗಪ್ಪ ಮುದೇನೂರು

ವಿಮರ್ಶೆ

ವಿಶಾಲ್ ಮ್ಯಾಸರ್ ಮೂಲತಃ ವಿಜ್ಞಾನದ ವಿದ್ಯಾರ್ಥಿ. ಇನ್ನೂ ಆತನಿಗೆ ಇಪ್ಪತ್ತರ ಪ್ರಾರಬ್ಧದ ಪ್ರಾಯ! ಆದರೆ ಆತನ ಒಡಲೊಳಗೆ ತುಂಬಿರುವುದು ವರ್ತಮಾನದ ಆರದ ಕಿಚ್ಚು. 'ಬಟ್ಟೆಗಂಟಿದ ಬೆಂಕಿ' ಎಂಬುವ ಅರಿವಿನ ಕಾವ್ಯವ ಹೊತ್ತು ಸಾಗಿದ ಈ ಪರಿ 1970-80ರ ಕನ್ನಡ ದಲಿತ ಬಂಡಾಯದ ಕಾಲಮಾನವನ್ನು ನೆನಪಿಸುವಂತಿದೆ.

ಬಹುತ್ವದ ಕುರಿತು ಮಾತನಾಡುತ್ತಿರುವ ಈ ಹೊತ್ತಿನಲ್ಲಿ ಈ ಹುಡುಗ- 'ಬಟ್ಟೆಗಂಟಿದ ಬೆಂಕಿ ಆರುವುದು ಬೇಡ ಹೊತ್ತಿ ಉರಿಯುವುದು ಬೇಡ ನನ್ನ ಹಾದಿಗೆ ದೀಪವಾದರೆ ಅಷ್ಟೇ ಸಾಕು' ಎನ್ನುವ ಸದಾಶಯದ ಮಾತುಗಳನಾಡುತ್ತಿರುವುದು ಒಂದು ಮಹತ್ವದ ಬೆಳವಣಿಗೆ.

ತನ್ನ ಪ್ರಿಯ ಯೌವನಗಳಲ್ಲಿ ಕಳೆದುಹೋಗದೆ ಸಾಮಾಜಿಕ ಬಿಕ್ಕಟ್ಟುಗಳಿಗೆ, ಬದುಕಿನ ಅಸಹಾಯಕತೆಗೆ, ತನ್ನ ಸುತ್ತಲ ಕೇರಿಯ ಮಂದಿಯ ಶೋಚನೀಯ ಬದುಕಿಗೆ, ಅವರೊಳಗಿನ ಮೌಢ್ಯಕ್ಕೆ, ಗುಲಾಮಿತನಕ್ಕೆ, ಇನ್ನೂ ಜೀವಂತವಿರುವ ಅಸ್ಪೃಶ್ಯತೆಗೆ, ದೇವದಾಸಿ ಪದ್ಧತಿಗೆ, ಧರ್ಮಾಂಧತೆ, ಜಾತೀಯತೆ, ಪ್ರಭುತ್ವದ ಸರ್ವಾಧಿಕಾರ, ಯುದ್ಧದ ಭೀಕರತೆಗೆ ಒಡಲಗೊಂಡು ಬರೆಯುವ ಈ ಹುಡುಗನ ಕಾವ್ಯ ನಿಗಿ ಕೆಂಡದತಿದೆ. ಆದರೆ ನಾವಿಲ್ಲಿ ತಣ್ಣಗೆ ಕುಳಿತು ಮೈ ಮನ ಕಾಯಿಸಿಕೊಳ್ಳುವಂತಿಲ್ಲ. ಆದರೂ ಬೆಂಕಿ ಬೆಳಕಾಗುವ ಪರಿಯಂತೆ ಹಲವು ರೂಪಾಂತರಗಳನ್ನು ಇಲ್ಲಿನ ಕವಿತೆಗಳು ಕಂಡಿವೆ ಮತ್ತು ವರ್ತಮಾನವನ್ನು ಕಾಣಿಸಿವೆ. ಅಲ್ಲಲ್ಲಿ ಕಾವ್ಯ ಮೃದುಗೊಳ್ಳುವುದಕ್ಕೆ, ಹದವಾಗಿ ಸಾಂಗತ್ಯಗೊಳ್ಳುವುದಕ್ಕೆ ಪ್ರೇಮಕವಿತೆಗಳು ಬೇಕು. ಅಂತಹ ಕೆಲವು ಝಳಕು ಈ ಕೃತಿಯಲ್ಲಿವೆ.



ಬಟ್ಟೆಗಂಟಿದ ಬೆಂಕಿ
ಕವಿ: ವಿಶಾಲ್ ಮ್ಯಾಸರ್,
ಪ್ರ: ದುಡಿಮೆ ಪ್ರಕಾಶನ, ಬಳ್ಳಾರಿ
ಸಂ: 6363 612 399
ಪು: 64 ₹80

ವಿಶಾಲನ ಕುಟುಂಬದೊಳಗಿನ ಅಜ್ಜಿಯ ಹಾಡು, ತಾಯಿಯವರ ಪದ, ಬಾಲ್ಯದ ಮಳೆ, ಕಾಮಣ್ಣನ ಹಾಡ್ಗತೆ ಈ ಎಲ್ಲಾ ಪರಂಪರೆಯ ಲಯಗಳು ಈ ಕೃತಿಗೆ ದಕ್ಕಿವೆ. ಜನಪದ ಪರಂಪರೆಯನ್ನು 'ಕಣಜ' ಎಂದು ನಂಬುವ ಈ ಕಾವ್ಯದ ಹುಡುಗ ಚಂದದ ಬಾಲ್ಯದ ಬೆಳಕನ್ನು ಅರಿವಾಗಿಸಿಕೊಂಡವ. ಬಯಲಲ್ಲಿ ಬಯಲಾಗುವ ಅವ್ವನನ್ನು ಕಾಣಿಸುವುದೇ ಇಲ್ಲೊಂದು ಸೋಜಿಗ.

'ಮಯ್ಯ ತುಂಬಾ ಕನ್ನಡಿಯ ಸೀರೆ ಉಟ್ಟು ತಿಂಗಳದ ಚುಕ್ಕೆಗಳ ಬೆಳದಿಂಗಳ ಸೆರೆಗಲ್ಲಿ ತೋರಿಸುವ ದಿನವೂ...ಮಯ್ಯ ಮುರಿದು ಕುಡುಗೋಲು ಹಿಡಿದು ಜಗದ ಕಳೆ ಕಿತ್ತು ಬಿಸಿಲು ಎರವಲು ತರುವ' ಈ ಅವ್ವ ಜಗದ ಅವ್ವಂದಿರಿಗಿಂತ ಭಿನ್ನ ಮತ್ತು ಅವಳು ಎಲ್ಲಿಯೂ ದಾಖಲಾಗದೆ ಬಯಲಲ್ಲಿ ಬಯಲಾಗುವಳು.

ಇನ್ನೊಂದೆಡೆ ಇದೇ ಕವಿ ವಿಶಾಲ್, 'ನಾನೊಂದು ರೂಪಕ ಹುಡುಗಿ/ನನ್ನವರ ನೋವಿಗೆ, ನಿನ್ನವರ ತುಳಿತಕ್ಕೆ' ಎನ್ನುವ ಸರಳ ಸಾಲುಗಳ ಮೂಲಕ ಎಚ್ಚರದ ಧ್ವನಿಯೊಂದನ್ನು ಬಹು ದೂರ ದಾಟಿಸುತ್ತಾರೆ.

ನಗುವಿಲ್ಲದ ಬುದ್ಧನನ್ನು ಷೋಕೇಶಿನಲ್ಲಿ ಇಟ್ಟುಕೊಂಡು ಸಂಭ್ರಮಿಸುವ ಹುಸಿ ವರ್ತಮಾನದ ನಡುವೆ ಮತ್ತೊಮ್ಮೆ ನಗುವ ಬುದ್ಧನಿಗಾಗಿ ಕಾಯುವ ಭರವಸೆಯ ಕಣ್ಣೊಂದು ಇಲ್ಲಿನ ಕವಿತೆಗಳಿಗೆ ಮೂಡಿದೆ. ಹಾಗೆಂದೇ, ಈ ಸಂಕಲನದ ಮುನ್ನುಡಿಯಲ್ಲಿ ಕನ್ನಡದ ವಿವೇಕವಾಗಿರುವ ಬರಗೂರು ರಾಮಚಂದ್ರಪ್ಪನವರು ವಿಶಾಲ್ ಮ್ಯಾಸರ್ ಅವರಿಗೆ ಇರುವ ಕಾವ್ಯಾಭಿವ್ಯಕ್ತಿಯ ಆಸಕ್ತಿ ಅಪರಮಿತವಾಗಿದೆ ಎಂದು ಸರಿಯಾಗಿ ಗುರುತಿಸಿದ್ದಾರೆ. 'ನಾನು ಇದ್ದಿಲು' ಎನ್ನುವ ಕವಿತೆಯಲ್ಲಿ ವಿಶಾಲ್ ಮ್ಯಾಸರ್ ಹೇಳುವುದು ಇಷ್ಟು: 'ಇದ್ದಿಲು ನಾನು/ಕಪ್ಪೆಂದರೆ ಕಪ್ಪು/ಕತ್ತಲೆಯು ನಾಚುವಷ್ಟು ಬದುಕೋ ಚಂದ್ರನಿಲ್ಲದ ರಾತ್ರಿ...'

ಈ ಬಗೆಯ ಪ್ರತಿಮಾ ರೂಪಕದ ಮೂಲಕ ಮಾತನಾಡುವ ಈ ಕವಿತೆ ಅಂತರ್ಯದಲ್ಲಿ ಕವಿಯ ತಣ್ಣನೆಯ ಅಗ್ಗಿಷ್ಟಿಗೆಯೊಂದನ್ನು ಪ್ರೀತಿಯಲ್ಲಿ ಅದ್ದಿ ತೆಗೆದಂತಿದೆ. ಇಂಥಲ್ಲೂ ಕವಿ 'ಕನಸು ಕಾಣುವ ಹೊತ್ತಲ್ಲ ಗೆಳತಿ/ವಾಸ್ತವತೆ ಬೆನ್ನಟ್ಟಿ ಬರುತ್ತಿದೆ ನನ್ನನ್ನು, ನಿನ್ನನ್ನು, ಅವನನ್ನು, ಇವಳನ್ನು ಅಷ್ಟೇ ಏಕೆ ಇಡೀ ದೇಶವನ್ನು' ಎಂದು ಬರೆಯಬಲ್ಲ. ಹಾಗೆ ಅಜಾನ್ ಕೂಗಿಗೆ ಸೆರಗು ಹೊದೆವ ಅವ್ವನನ್ನು, ಶವಯಾತ್ರೆಗೆ ಹೆಗಲು ಕೊಡುತ್ತಿದ್ದ ಕರೀಂ ಸಾಬನನ್ನು, ದಮನಿತರ ಸೋಗೆ ಬಿಲದಲ್ಲಿ ಕ್ಯಾಂಡಲ್ ಬೆಳಗಿದ ಪೀಟರ್‌ನನ್ನು ಹುಡುಕುವ ಬಗೆ, ಅಕ್ಕನು ತನ್ನ ಅರಿವ ದಾರಿಯ ದೈವಿಕ ಬೆಳಕು ಚೆನ್ನಮಲ್ಲಿಕಾರ್ಜುನನನ್ನು ಹುಡುಕುವ ಪರಿಗಿಂತಲೂ ತುಂಬಾ ವಿವೇಕವುಳ್ಳದ್ದು.

ಸಂತರು ನುಡಿದ ಸಾಮಾಜಿಕ ಎಚ್ಚರದ ನುಡಿ ನೂಲನ್ನು ಹಿಡಿದು ಮಾನವತೆಯ ಎಡೆ ಹಾಕುವ ಕಾರ್ಯವನ್ನು ಈ ಕವಿ ಮತ್ತು ಈ ಕಾವ್ಯ ಮಾಡಿರುವುದರಿಂದ ಈ ಕೃತಿಗೊಂದು ಸಾರ್ಥಕ್ಯ ಒದಗಿನಿಂತಿದೆ. ಇಂತಹ ಜೀವಮಿಡಿತದ ಕೃತಿ ಪ್ರಕಟಿಸಿದ ದುಡಿಮೆ ಪ್ರಕಾಶನಕ್ಕೂ, ಮುಖಪುಟ ವಿನ್ಯಾಸಗೊಳಿಸಿದ ಸೃಜನ್ ಅವರಿಗೂ ಅಭಿನಂದನೆಯನ್ನು ಹೇಳಲೇಬೇಕು. 'ಬಾ ಕವಿತೆ ಬೇಲಿ ಇಲ್ಲದ ಬಯಲನ್ನೊಮ್ಮೆ ಸುತ್ತು ಹಾಕೋಣ' ಎನ್ನುವ ಮುಕ್ತತೆಯ, ಸ್ವಚ್ಛಂದದ ಬಹುತ್ವದ ಪ್ರೀತಿ ಹುಟ್ಟಿಸಿದ ಕವಿತೆ ಬರೆದ ಭರವಸೆಯ ಮಿತ್ರ ವಿಶಾಲ್ ಮ್ಯಾಸರ್ ಅವರನ್ನು ಆತನ ಕವಿತೆಯೊಂದಿಗೆ ಆತ್ಮವಿಶ್ವಾಸದಿಂದ ನಾವುಗಳು ಬರಮಾಡಿಕೊಳ್ಳಬೇಕು ಮತ್ತು ಅವರ ಮುಂದಿನ ಕಾವ್ಯದ ಹೊಸ ಕಥನದ ನೋಟಕ್ಕೆ ಎದೆಹನಿಯನುಣಿಸಬೇಕು.

ಘನತೆವೆತ್ತ ಮೇಷ್ಟ್ರು...

8ನೇ ಪುಟದಿಂದ...

ಕುವೆಂಪು ಸಾಹಿತ್ಯದ ಮೇಲೆ ನಿಷ್ಠುರ ವಿಮರ್ಶೆ ಮಾಡಿದ್ದಕ್ಕೆ ಅವರನ್ನು ಕುವೆಂಪು ವಿರೋಧಿ ಮತ್ತು ಅಡಿಗರ ಬಣದವರು ಎನ್ನಲಾಗಿತ್ತು. ಆದರೆ ಕುವೆಂಪು ಅವರ ನಿರಂಕುಶಮತಿಯಂತಹ ವೈಚಾರಿಕ ಮೌಲ್ಯಗಳನ್ನು ಬದುಕಿದವರಲ್ಲಿ ನಾಯಕರು ಒಬ್ಬರಾಗಿದ್ದರು. ಕಳೆದ ಅರ್ಧಶತಮಾನದಲ್ಲಿ ನಾಗರಿಕ ಸಮಾಜ ರೂಪಿಸಲು ಮತ್ತು ಮೈಸೂರಿನ ಸಾಂಸ್ಕೃತಿಕ ಹದುಳ ಕಾಪಾಡಲು ನಡೆದ ಬಹುತೇಕ ಸಭೆ/ಧರಣಿ/ಮುಷ್ಕರಗಳಲ್ಲಿ ಅವರ ಹಾಜರಾತಿ ಇರುತ್ತಿತ್ತು. ಅವರ ಮನೆಯಂತೂ ಅನುಭವ ಮಂಟಪದಂತೆ ಸಮಾಲೋಚನ ಸಭೆಯ ವೇದಿಕೆಯಾಗಿತ್ತು. ಅವರೆಲ್ಲ ಸಾರ್ವಜನಿಕ ಚಟುವಟಿಕೆಗಳಲ್ಲಿ ಮಡದಿ ಮೀರಾ ಜತೆಯಲ್ಲಿದ್ದರು.

ಮೈಸೂರಿಗೆ ಹೋದಾಗಲೆಲ್ಲ ನನ್ನಿಷ್ಟದ ಮನೆ 'ಪ್ರೀತಿ'ಗೆ ಹೋಗುತ್ತಿದ್ದೆ. ಅಲ್ಲಿಗೆ ಹೋಗುವುದು ಎಂದರೆ ನಾಯಕರ ಹರಟೆಯನ್ನೂ ಮೀರಕ್ಕ ತಯಾರಿಸುತ್ತಿದ್ದ ಉತ್ತರ ಕನ್ನಡ ಶೈಲಿಯ ಮೀನೂಟವನ್ನೂ ಸವಿವ ಅವಕಾಶವೂ ಆಗಿತ್ತು. ಊಟವಾದ ಬಳಿಕ ಮೂಡು ಬಂದರೆ, ಮೇಷ್ಟರು ಬೇಂದ್ರೆಯವರ ಕವನಗಳನ್ನು ಹಾಡುವರು. ಯಾರದ್ದೊ ಕಾಲೆಳೆಯುತ್ತ ತಮಾಷೆಯ ಪ್ರಸಂಗ ಹೇಳುವರು. ನಾನೊಮ್ಮೆ ಅವರ ಸುದೀರ್ಘ ಸಂದರ್ಶನ ಮಾಡಿದೆ. ಅವರು ಅದರ ಕರಡನ್ನು ತಿದ್ದಿ ಒಂದೊಂದು ಪದವನ್ನು ಆಭರಣದಲ್ಲಿ ಹರಳನ್ನು ಕೂರಿಸಲು ಚಿನಿವಾರ ತೋರುವ ಎಚ್ಚರದಂತೆ ತಿದ್ದಿಕೊಟ್ಟರು. ಖಚಿತತೆಗೆ ಇಷ್ಟೊಂದು ರಿಸ್ಕ್ ತೆಗೆದುಕೊಳ್ಳವುದುಂಟೇ? ನನಗೆ ಸೋಜಿಗ. ಅವರು ಮಹತ್ವಾಕಾಂಕ್ಷೆಯಿಂದ ಬರೆದ ಆತ್ಮಕಥೆ 'ಬಾಳು' ಚಾರಿತ್ರಿಕವಾಗಿ ಮಹತ್ವದ್ದಾಗಿದೆ. ತನ್ನ ಖಾಚಿತ್ಯದ ಹಂಬಲದಿಂದ ದಾಖಲಾತಿಯಾಗಿದೆ. ಆದರೆ ಬಾಳನ್ನು ಹಿಂತಿರುಗಿ ಲಹರಿಯಲ್ಲಿ ನೋಡುವಾಗ ಹುಟ್ಟುವ ಕಲ್ಪನಾವಿಲಾಸ ವಿನೋದಪ್ರಜ್ಞೆಗಳನ್ನು ತಪ್ಪಿಸಿಕೊಂಡು ಬಡವಾಗಿದೆ ಅನಿಸುತ್ತದೆ. ನವರತ್ನ ರಾಮರಾಯರ 'ಕೆಲವು ನೆನಪುಗಳು' ಜತೆಯಲ್ಲಿಟ್ಟು ನೋಡಿದರೆ ಈ ಅಂಶ ಹೊಳೆಯುತ್ತದೆ.

ಕೆಲವು ತಿಂಗಳ ಹಿಂದೆ ಗುರುಗಳನ್ನು ಕಾಣಲು ಬಾನು ಜತೆ ಹೋದೆ. ಹೋಗಬಾರದಿತ್ತು ಅನಿಸಿತು. ಒಂದು ಕಾಲಕ್ಕೆ ಸ್ಫುರದ್ರೂಪಿಯಾಗಿದ್ದ ನಾಯಕರು ಸೊರಗಿ ಬತ್ತಿಯಾಗಿದ್ದರು. ಮೀರಕ್ಕ ಕೂಡ ಸೊರಗಿದ್ದರು. ಹಿಂದಿನ ಕಳೆಯಿರಲಿಲ್ಲ. ಸ್ಮೃತಿ ನಷ್ಟವಾಗಿತ್ತು. ನಾಯಕರ ಮಗಳು ಕೀರ್ತಿ 'ಅಪ್ಪ ರಹಮತ್ ಬಂದಿದ್ದಾರೆ' ಎಂದರು. 'ರಾಮತ್ ಬಂದಿದಾರಾ? ನಾನೇನು ಮಾಡಬೇಕು?' ಎಂದು ಅವಸರದಲ್ಲೆಂಬಂತೆ ತೊದಲುತ್ತ ಹಾಲಿಗೆ ಬಂದು ಕೂತರು. ಇದ್ದಷ್ಟೂ ಹೊತ್ತು ಅವರು ನನ್ನ ಮುಖ ನೋಡಲೇ ಇಲ್ಲ. ಒಳಗೆ ಜೀವ ಧಗಧಗಿಸುತ್ತಿದೆ ಎಂಬಂತೆ, ಮುನಿಸಿಕೊಂಡ ಮಗುವಿನಂತೆ, ಎದುರುಗೋಡೆಯ ಯಾವುದೊ ಬಿಂದುವಿನತ್ತ ದುರದುರನೆ ದಿಟ್ಟಿಸುತ್ತ ಕೂತರು. ಹೋಗಿ ಬರುತ್ತೇನೆಂದು ಕೈಮುಗಿದರೂ ಸ್ಪಂದನೆಯಿಲ್ಲ. ಮೇಲೆ ಕಡಲಂತೆ ಶಾಂತವಾಗಿ ಕಂಡರೂ ಆಳದಲ್ಲಿ ತಮ್ಮ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲಿಲ್ಲ ಎಂಬ ನೋವಿನ ಕಹಿ, ಸುಪ್ತಪ್ರಜ್ಞೆಯಲ್ಲಿ ಹೊಯ್ದಾಡುತ್ತ ಉಳಿದುಬಿಟ್ಟಿತೇ? ಹಾಲಿನ ಒಂದು ಮೂಲೆಯ ಸೋಫಾದಲ್ಲಿ ಅವರು ಯಾವಾಗಲೂ ದೇಹವನ್ನು ಚೆಲ್ಲಿಕೊಂಡಂತೆ ಕೂರುತ್ತಿದ್ದರು. ಅದಕ್ಕೆ ಸಮೀಪವಾಗಿ ಇನ್ನೊಂದು ಮೂಲೆಯಲ್ಲಿದ್ದ ಬೆತ್ತದ ಕುರ್ಚಿಯಲ್ಲಿ ನನ್ನಂತಹ ಸಾವಿರಾರು ಜನ ಕೂತು ಅವರನ್ನು ಕೇಳಿಸಿಕೊಳ್ಳುತ್ತಿದ್ದೆವು. ಈ ಜಾಗದಲ್ಲಿ ಎಷ್ಟೊಂದು ಚರ್ಚೆ ಹರಟೆ ಹಾಡು ಹಾಸ್ಯಪ್ರಸಂಗಗಳು ಜರುಗಿದವು! ಈಗ ಅದೇ ಜಾಗದಲ್ಲಿ ಕೂತು ಪಟ ತೆಗೆಸಿಕೊಂಡೆವು. ಅದು ಹಗಲಿನ ಚಂದಿರನಂತೆ ಬಸವಳಿದಿದೆ.

ಒಂಬತ್ತು ದಶಮಾನ ತನ್ನ ದುಡಿಮೆ ಬದ್ಧತೆ ಪ್ರಾಮಾಣಿಕತೆಗಳಿಂದ ಪಾಠಮಾಡಿದ ಮೇಷ್ಟ್ರು, ಬರೆದ ಲೇಖಕ, ಬದುಕಿದ ಸಂಸಾರಿ, ಚಳವಳಿಗಳಲ್ಲಿ ಭಾಗವಹಿಸಿದ ಸಾರ್ವಜನಿಕ ವ್ಯಕ್ತಿ, ಹಲವರ ಬಾಳಿಗೆ ನೈತಿಕ ಬೆಂಬಲ ಒದಗಿಸಿದ 'ನಿಜದನಿ' (1935-2023) ಕಣ್ಮರೆಯಾದಂತಾಗಿದೆ. 'ನಿಜದನಿ' ಅವರ ಪುಸ್ತಕದ ಹೆಸರೂ ಹೌದು. ಸುದ್ದಿ ತಿಳಿದು, ದುಗುಡದಿಂದ ಕೃತಜ್ಞತೆಯಿಂದ ಅವರ 'ವಿನಯ ವಿಮರ್ಶೆ' ಎಂಬ ಪುಟ್ಟಲೇಖನ ಓದಿದೆ. ಅದು ತನ್ನ ಬರೆಹ ಮತ್ತು ಬದುಕು ಹೇಗಿರಬೇಕೆಂದು ವ್ಯಕ್ತಿಯೊಬ್ಬ ರಚಿಸಿಕೊಂಡ ಸಂವಿಧಾನದಂತೆ; ಕಲಾಸಂವೇದನೆ ಪ್ರಜಾಪ್ರಭುತ್ವವಾದಿ ವಿಚಾರವಾದಿ ಜಾತ್ಯತೀತ ಮೌಲ್ಯಗಳ ಪ್ರಣಾಳಿಕೆಯಂತೆ; ನಡೆ-ನುಡಿಗಳ ನಡುವೆ ಬಿರುಕಾಗದಂತೆ ಬದುಕಲು ಬಹಳ ಬೆಲೆ ತೆತ್ತಿರುವ ಆದರ್ಶವಾದಿಯ ಉಯಿಲಿನಂತೆ ತೋರಿತು.


ಮೊದಲ ಓದು

ಬಹುರೂಪಿ ಬಿಡುಗಡೆ

ಭಾಷೆ–ಊಟ ಭಿನ್ನವಾದ ಎರಡು ಕುಟುಂಬಗಳ ಎರಡು ಕೂಸುಗಳು ಜೊತೆಯಾಗುತ್ತವೆ. ಹಾಗೆ ಕಂದಮ್ಮಗಳು ಜೊತೆಯಾದಾಗ – 'ಅಮ್ಮಾ ಅಂದವು, ಅಜ್ಜೀ ಎಂದವು / ನುಡಿ ನಲಿಯಿತು.' 'ನುಡಿ' ಹೆಸರಿನ ಪದ್ಯದ ಈ ನುಡಿಚಿತ್ರ, ವಿದ್ಯಾರಶ್ಮಿ ಪೆಲತ್ತಡ್ಕರ 'ಕೆರೆ–ದಡ' ಸಂಕಲನದ ಬಹುತೇಕ ಕವಿತೆಗಳ ಹಂಬಲದಂತೆ ಕಾಣಿಸುತ್ತದೆ. ಜೀವನದ ದಂದುಗಗಳನ್ನು ಮಗುವಿನ ಮುಗ್ಧತೆಯ ಶಕ್ತಿಯಲ್ಲಿ ದಾಟಿ, ಬಿಡುಗಡೆಯನ್ನು ಹಂಬಲಿಸುವ ರಚನೆಗಳು ಈ ಸಂಕಲನದಲ್ಲಿವೆ.

ಇಲ್ಲಿನ ಬಿಡುಗಡೆ ಭೌತಿಕ–ಮಾನಸಿಕ ರೂಪದ್ದೂ ಹೌದು, ತಾತ್ವಿಕ ನೆಲೆಗಟ್ಟಿನದೂ ಹೌದು. ಮಗುವಿನ ಸಿಂಗಾರದ ಪ್ರಕ್ರಿಯೆಯನ್ನು ಚಿತ್ರಿಸುವ 'ನವಜಾತ ಕವನ' ಎನ್ನುವ ರಚನೆ, ಸಿಂಗರದ ಸಂಭ್ರಮದ ತುದಿಯಲ್ಲಿ, 'ಇನ್ನೀಗ ನೀನು ಜಗದ ಕೂಸು' ಎನ್ನುತ್ತದೆ. ತಾಯೊಬ್ಬಳ ವಾತ್ಸಲ್ಯದ ಚೌಕಟ್ಟಿನ ವಿಸ್ತರಣೆಯಂತೆ ಕಾಣಿಸುವ ಈ ರಚನೆ, ಮಗುವಿಗೂ ತಾಯಿಗೂ ಒಂದು ಬಗೆಯ ಬಿಡುಗಡೆಯೂ ಹೌದು. 'ನೆಲದಲ್ಲಿ ಸಿಕ್ಕ ನಗೆ' ಕವಿತೆಯನ್ನು ಗಮನಿಸಿ. ಹೂವಿನ ನೆಪದಲ್ಲಿ ಅಜ್ಜಿ–ಅಮ್ಮನ ಕಳ್ಳುಬಳ್ಳಿ ನೆನಪುಗಳನ್ನು ಕವಯಿತ್ರಿಯಲ್ಲಿ ಮೊಳೆಯಿಸುವ ಈ ಕವಿತೆ, ಗಿಡದೊಂದಿಗೆ ಹೂವು ತೊಟ್ಟು ಮುರಿದುಕೊಳ್ಳುವ ಗಳಿಗೆಯನ್ನು – ಅಂಗಿ ಕಳಚಿದ ಹಾಗೆ ತೊಟ್ಟು ಕಳಚುವೆಯಲ್ಲ' ಎಂದು ಉದ್ಗರಿಸುತ್ತ, 'ಬದುಕ ಮೋಹದ ಮರದಲಿರುವವರಿಗೆಲ್ಲ ನಿನ್ನ ದರ್ಶನವಾಗಲೊಮ್ಮೆ' ಎಂದು ಹಂಬಲಿಸುತ್ತ, 'ಬಿಟ್ಟು ಹೊರಡುವುದು ಯಾರಿಗೂ ಕಷ್ಟವಲ್ಲ' ಎನ್ನುವ ಬಿಡುಗಡೆಯ ಅನಿವಾರ್ಯವನ್ನು ಕಾಣಿಸುತ್ತದೆ.

'ಗೌರೀದುಃಖ' ಸಂಕಲನದ ನಂತರದ, ವಿದ್ಯಾರಶ್ಮಿ ಅವರ ಎರಡನೇ ಸಂಕಲನವಿದು. ಮೋಹಕ ಚಿತ್ರಗಳ ಸರಮಾಲೆಯಂತಿರುವ ಈ ಸಂಕಲನದ ರಚನೆಗಳು, ಗ್ರೂಪ್ ಫೋಟೊಕ್ಕಾಗಿ ಹಂಬಲಿಸುವ ಹಾಗೂ ಚದುರಂಗದ ಚೌಕದಿಂದ ಹೊರಬಿದ್ದ ಕಾಯಿಗಳನ್ನು ಮರಳಿ ಚೌಕಕ್ಕೆ ತಂದು 'ನೋಡಲೆಷ್ಟು ಚಂದ' ಎಂದು ಭಾವಿಸುವ ಜೀವಪ್ರೀತಿಯನ್ನು ಸ್ಫುರಿಸುವ ಗುಣ ಹೊಂದಿವೆ.



ಕೆರೆ–ದಡ
ಲೇ: ವಿದ್ಯಾರಶ್ಮಿ ಪೆಲತ್ತಡ್ಕ
ಪ್ರ: ಬಹುರೂಪಿ, ಬೆಂಗಳೂರು.
ಸಂ: 7019182729
ಪು: 72 ₹100

ಪತ್ರಕರ್ತರ ಕೈಪಿಡಿಯಾಗಬಲ್ಲ ಕೃತಿ

ವೃತ್ತಿಯಿಂದ ಅಂಚೆ ಇಲಾಖೆಯಲ್ಲಿದ್ದರೂ ಪತ್ರಿಕೋದ್ಯಮದೊಂದಿಗೆ ನಿರಂತರ ನಂಟು ಹೊಂದಿರುವ ಡಾ.ಅಮ್ಮಸಂದ್ರ ಸುರೇಶ್ ಮಾಧ್ಯಮ, ಪತ್ರಿಕೋದ್ಯಮ ಕುರಿತಾದ ಅಧ್ಯಯನಯೋಗ್ಯ ಕೃತಿಗಳಿಂದಲೇ ಚಿರಪರಿಚಿತರು. ಅವರು ಕನ್ನಡ ಪತ್ರಿಕೋದ್ಯಮವನ್ನು ಸುಮಾರು 2 ಶತಮಾನಗಳಿಂದ ಮುನ್ನಡೆಸಿಕೊಂಡು ಬಂದ ಒಂದಷ್ಟು ಶ್ರೇಷ್ಠ ಪತ್ರಕರ್ತರು, ಸಂಪಾದಕರನ್ನು ಪರಿಚಯಿಸುವ 'ಪತ್ರಿಕೋದ್ಯಮದ ತೇರು ಎಳೆದವರು' ಎಂಬ ನೂತನ ಕೃತಿಯನ್ನು ಪ್ರಕಟಿಸಿದ್ದಾರೆ. ಕನ್ನಡ ಪತ್ರಿಕೋದ್ಯಮಕ್ಕೆ 179 ವರ್ಷಗಳ ಭವ್ಯ ಇತಿಹಾಸವಿದೆ ಎಂದು ಲೇಖಕರು ಕೃತಿಯಲ್ಲಿ ಹೇಳುತ್ತಾರೆ. ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ ಪ್ರಾರಂಭವಾಗಿದ್ದು 1843ರಲ್ಲಿ. ಅಲ್ಲಿಂದ ಇಲ್ಲಿತನಕ ಪತ್ರಿಕೋದ್ಯಮದ ತೇರು ಎಳೆದ ಅನೇಕ ಮಹನೀಯರಿದ್ದಾರೆ. ಅವರ ಕಿರುಪರಿಚಯ ಈ ಕೃತಿಯಲ್ಲಿದೆ.

'ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಮತ್ತು ಪತ್ರಕರ್ತರಿಗೆ ಇದೊಂದು ಅತ್ಯುತ್ತಮ ಪರಾಮರ್ಶನ ಗ್ರಂಥವಾಗಿದೆ. ಸ್ವಾತಂತ್ರ್ಯ ಪೂರ್ವದಿಂದ ಇದುವರೆಗೂ ಪತ್ರಿಕೋದ್ಯಮದಲ್ಲಿ ದುಡಿದ–ದುಡಿಯುತ್ತಿರುವ ಮಹನೀಯರನ್ನು ಪರಿಚಯಿಸುವ ಕೃತಿ' ಎಂದು ಬೆನ್ನುಡಿಯಲ್ಲಿ ಮಾನಸಗಂಗೋತ್ರಿಯ ಡಾ.ಸಿ.ಕೆ.ಪುಟ್ಟಸ್ವಾಮಿಯವರು ಹೇಳುತ್ತಾರೆ. ಮಂಗಳೂರು ಸಮಾಚಾರದ ಪ್ರವರ್ತಕ ಹರ್ಮನ್ ಮೊಗ್ಲಿಂಗ್ ಅವರಿಂದ ಪ್ರಾರಂಭಿಸಿ ಬಿ.ಗಣಪತಿವರೆಗೆ 55 ಪತ್ರಕರ್ತರ ಕುರಿತಾದ ವಿವರ, ಸಾಧನೆಯ ಪರಿಚಯ ಈ ಕೃತಿಯಲ್ಲಿ ಸಿಗುತ್ತದೆ. ಭಾಷ್ಯಂ ಭಾಷ್ಯಾಚಾರ್ಯ, ಡಿ.ಜಿ.ಗುಂಡಪ್ಪ, ಸೀತಾರಾಮಶಾಸ್ತ್ರಿಗಳು, ಸಿದ್ದವನಹಳ್ಳಿ ಕೃಷ್ಣಶರ್ಮರಿಂದ ರಾಜಶೇಖರ್ ಕೋಟಿ, ನಾಗೇಶ್ ಹೆಗಡೆಯವರಂತಹ ಪತ್ರಕರ್ತರ ಮಾಹಿತಿ, ಸಾಧನೆಗಳ ಕಿರುಪರಿಚಯ ಇಲ್ಲಿದೆ.



ಪತ್ರಿಕೋದ್ಯಮದ ತೇರು ಎಳೆದವರು
ಲೇ:ಡಾ.ಅಮ್ಮಸಂದ್ರ ಸುರೇಶ್
ಪ್ರ:ಎನ್.ಕೆ.ಎಸ್.ಪ್ರಕಾಶನ
ಸಂ:9741815817
ಪು: 308 ₹400


ಹಿಂದುತ್ವದ ಅನೇಕತ್ವಕ್ಕೊಂದು ಕನ್ನಡಿ

ಸಾಹಿತ್ಯ ಲೋಕದಲ್ಲಿ ಚಿರಪರಿಚಿತ ಹೆಸರು ಅಜಕ್ಕಳ ಗಿರೀಶ ಭಟ್. ಸಾಹಿತ್ಯ ಜಗತ್ತಿನಲ್ಲಿ ರಾಷ್ಟ್ರೀಯತೆ, ಹಿಂದುತ್ವದ ಗಟ್ಟಿ ಧ್ವನಿಯಂತಿರುವ ಅವರು 'ಬಹುವಚನಕ್ಕೊಂದೇ ತತ್ವ' ಎಂಬ ಕೃತಿಯನ್ನು ಹೊರತಂದಿದ್ದಾರೆ. 'ಏಕತ್ವ–ಅನೇಕತ್ವಗಳ ಹಿಂದುತ್ವ' ಎಂಬ ಅಡಿಬರಹ ಹೊಂದಿರುವ ಈ ಹೊತ್ತಿಗೆ ಯಾಕೆ ಈ ಹೊತ್ತಿಗೆ ಎಂಬುದನ್ನು ಲೇಖಕರು ಪೀಠಿಕೆಯಲ್ಲಿಯೇ ಹೇಳಿದ್ದಾರೆ.

'ನಮ್ಮ ಸಂಸ್ಕೃತಿಗಳ ಸ್ವರೂಪವನ್ನು ತಕ್ಕಮಟ್ಟಿಗಾದರೂ ಅರ್ಥ ಮಾಡಿಕೊಳ್ಳಬೇಕು. ಹೀಗೆ ಅರ್ಥ ಮಾಡಿಕೊಳ್ಳುವಲ್ಲಿ ಇರುವ ತೊಡಕುಗಳ ಬಗ್ಗೆ ಈಚಿನ ವರ್ಷಗಳಲ್ಲಿ ಸಾಕಷ್ಟು ಚರ್ಚೆಗಳಾಗುತ್ತಿವೆ. ಸಂಸ್ಕೃತಿಯನ್ನು ಗ್ರಹಿಸುವಲ್ಲಿ ನಮ್ಮ ಶಿಕ್ಷಣ ಪದ್ಧತಿ ಮತ್ತು ಭಾಷೆಯ ಪಾತ್ರ ಬಹಳ ದೊಡ್ಡದು. ಆ ನಿಟ್ಟಿನಲ್ಲಿ ಒಂದಷ್ಟು ಆಧಾರಗಳನ್ನು, ಹೇಳಿಕೆಗಳನ್ನು ಇಟ್ಟುಕೊಂಡು ಈ ಕೃತಿ ರಚಿಸಲಾಗಿದೆ' ಎಂದು ಲೇಖಕರು ಪೀಠಿಕೆಯಲ್ಲಿಯೇ ಹೇಳುತ್ತಾರೆ. ಈ ಕೃತಿ ಏಕೆ ಮತ್ತು ಹೇಗೆ ರಚಿತವಾಗಿದ್ದು ಎಂಬ ಕುರಿತು ಆರಂಭದಲ್ಲಿಯೇ ಹತ್ತು ಸ್ಪಷ್ಟನೆಗಳನ್ನು ನೀಡಿದ್ದಾರೆ. ಕೃತಿಯ ಕೊನೆಗೆ ತಮ್ಮ ಬರಹಗಳಿಗೆ ಆಧಾರವನ್ನು, ಟಿಪ್ಪಣಿಯನ್ನು ನೀಡಿದ್ದಾರೆ.

ಕೃತಿಯಲ್ಲಿ ಒಟ್ಟು15 ಅಧ್ಯಾಯಗಳಿವೆ. ಭಾಷಾಂತರಗೊಂಡ ಪದಗಳು ಮತ್ತು ಪರಿಕಲ್ಪನೆಗಳು ಎಂಬ ಮೊದಲ ಅಧ್ಯಾಯದಲ್ಲಿ 'ಗಾಡ್', 'ರಿಲಿಜನ್' ಇತ್ಯಾದಿ ಪದಗಳ ಕುರಿತಾದ ವಿಶ್ಲೇಷಣೆ, ಅವು ನಮ್ಮ ನಂಬಿಕೆಯನ್ನು ಹೇಗೆ ಕುಗ್ಗಿಸುತ್ತವೆ ಎಂಬ ವಿವರಣೆ ಸಿಗುತ್ತದೆ. ಹಿಂದುತ್ವ ಎಂದರೇನು ಎಂಬ ಅಧ್ಯಾಯ ನೈಜ ಹಿಂದುತ್ವದ ದರ್ಶನ ಮಾಡಿಸುತ್ತದೆ. ರಿಲಿಜನ್, ಹಿಂದೂ ಸಂಪ್ರದಾಯಗಳು ಮತ್ತು ಸೆಕ್ಯುಲರಿಸಂ ಅಧ್ಯಾಯವು ನಂಬಿಕೆ, ಉಪಾಸನೆ ಅಥವಾ ಆರಾಧನೆಗೆ ಸಂಬಂಧಿಸಿದಂತೆ ದೇಶದ ಬಹುಸಂಸ್ಕೃತಿಗಳು ಮತ್ತು ರಿಲಿಜನ್ನುಗಳ ನಡುವೆ ಇರುವ ವ್ಯತ್ಯಾಸವನ್ನು ವಿವರಿಸುತ್ತದೆ. ಹಿಂದುತ್ವದ ಸೆಕ್ಯುಲರಿಸಂನ ಕುರಿತು ವಿವರಿಸುವ ಒಂದು ಗಟ್ಟಿಯಾದ ಅಧ್ಯಾಯವಿದೆ. ಸುಮಾರು 160 ಪುಟದ ಕೃತಿಯಲ್ಲಿ ಪ್ರತಿ ಪುಟವೂ ಅತ್ಯಂತ ಮಾಹಿತಿಯುತವಾಗಿದೆ. ಇಡೀ ಕೃತಿ ಆಳವಾದ ಅಧ್ಯಯನದಿಂದ ರೂಪುಗೊಂಡಿದ್ದು ಎಂಬುದನ್ನು ಅಲ್ಲಿನ ನೀಡಲಾದ ಟಿಪ್ಪಣಿ, ಆಕರ ಗ್ರಂಥಗಳು, ಉಲ್ಲೇಖಗಳು ಹೇಳುತ್ತವೆ.

'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು' ಎಂಬ ಭಗವಾನ್ ಶ್ರೀಕೃಷ್ಣನ ಮಾತಿನೊಂದಿಗೆ ಕೃತಿಯನ್ನು ಪೂರ್ಣಗೊಳಿಸಿದ್ದಾರೆ.



ಬಹುವಚನಕ್ಕೊಂದೇ ತತ್ವ
ಲೇ:ಅಜಕ್ಕಳ ಗಿರೀಶ ಭಟ್
ಪ್ರ:ಸಾಹಿತ್ಯ ಪ್ರಕಾಶನ
ಸಂ:9448110034
ಪು: 160 ₹176



ಇದೋ ನೋಡಿ 'ತೂಟೆದಾರ'





ಅತ್ತೂರು ಮತ್ತು ಕೊಡೆತ್ತೂರು ಗ್ರಾಮಗಳ ಜನರ ನಡುವೆ ನಡೆಯುವ 'ತೂಟೆದಾರ' ಅಗ್ನಿಯುದ್ಧದಂತೇ ಭಾಸವಾಗುತ್ತದೆ

ಕಟೀಲು ಜಾತ್ರಾ ಮಹೋತ್ಸವದ ಮುಖ್ಯ ಆಕರ್ಷಣೆಯೇ ಈ 'ತೂಟೆದಾರ'. ಎರಡು ಗ್ರಾಮಗಳ ಜನರ ನಡುವೆ ನಡೆಯುವ ಈ 'ಅಗ್ನಿಖೇಳಿ'ಯ ಹಿಂದೆ ಕಥೆಯೊಂದಿದೆ...

ಚಿತ್ರ-ಲೇಖನ: ಶಶಿಧರಸ್ವಾಮಿ ಆರ್. ಹಿರೇಮಠ

ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ತಲುಪಿದಾಗ ಮಧ್ಯರಾತ್ರಿ ಹನ್ನೆರಡು ಗಂಟೆ. ಮಧ್ಯರಾತ್ರಿಯಾದರೂ ಇನ್ನೂ ಗಿಜಿಗಿಜಿ ಎನ್ನುತ್ತಿತ್ತು ಆ ಪ್ರದೇಶ. ಭಕ್ತರು ದುರ್ಗಾ ಪರಮೇಶ್ವರಿ ಜಾತ್ರೆಯ ಭಾವಪರವಶತೆಯಲ್ಲಿದ್ದರು. ಅಂದು ಜಾತ್ರೆಯ ಏಳನೇ ದಿನವಾಗಿ 'ತೂಟೆದಾರ' ಅಥವಾ 'ಅಗ್ನಿಖೇಳಿ' ಸೇವೆಯನ್ನು ಕಣ್ತುಂಬಿಕೊಳ್ಳುವ ಕಾತರದಲ್ಲಿದ್ದರು. ಪ್ರತೀ ವರ್ಷ ನಡೆಯುವ ಕಟೀಲು ಜಾತ್ರೆಯ ಕೊನೆಯ ದಿನ ದೇವಿಯ ಅವಭೃತ ಸ್ನಾನ ನಡೆಯುತ್ತದೆ. ಬಳಿಕ ನಡೆಯುವ ಈ ಬೆಂಕಿ ದಿವಟಿಕೆಗಳ ಎರಚಾಟವೇ 'ತೂಟೆದಾರ' ಹರಕೆಯ ಸೇವೆ.

ರಥ ಬೀದಿ 'ರಣರಂಗ'ವಾದಾಗ: ದೇವಾಲಯದ ರಥ ಬೀದಿಯಲ್ಲಿ ನಿಂತ ರಥದ ಮುಂದಿನ ಪ್ರದೇಶದಲ್ಲಿ ಸುತ್ತುವರೆದ ಭಕ್ತರು 'ತೂಟೆದಾರ'ದ ಕಾತುರತೆಯಲ್ಲಿ ನಿಂತಿದ್ದಾರೆ. ಮಧ್ಯದಲ್ಲೇ ಭವ್ಯ ರಥ ಕಂಗೊಳಿಸುತ್ತಿತ್ತು. ಇದ್ದಕ್ಕಿದ್ದಂತೆ ಚೆಂಡೆಯ ಸದ್ದು. ವ್ರತ ನಿಯಮದಲ್ಲಿರುವ ಬರಿ ಮೈಯಲ್ಲಿ ಕೇಸರಿ ಬಣ್ಣದ ಲುಂಗಿಯುಟ್ಟ ನೂರಾರು ಹರಕೆಯ ಸೇವಕರ ಎರಡು ಗುಂಪುಗಳು ಹರ್ಷದಿಂದ ಕೂಗುತ್ತ ಅಲ್ಲಿ ನೆರೆದರು. ತಕ್ಷಣವೇ ಅಲ್ಲಿಗೆ ತೆಂಗಿನ ಗರಿಗಳಿಂದ ಮಾಡಿದ ತೂಟೆ(ಸೂಟೆ)ಗಳನ್ನು ರಾಶಿಯಲ್ಲಿ ಹಾಕಿದರು. ಆ ಕಡೆ ಒಂದು ಗುಂಪು ಈ ಕಡೆ ಗುಂಪು... ಮಧ್ಯದಲ್ಲಿದ್ದ ಹಿರಿಯರು 'ತೂಟೆದಾರ' ಪ್ರಾರಂಭಿಸಲು ಸೂಚಿಸಿದರು. ಆಗ ಇಡೀ ರಥ ಬೀದಿ ರಣರಂಗದಂತೆಯೇ ತೋರಿತು. ಸಿದ್ಧವಿದ್ದ ಸೂಟೆಗಳಿಗೆ ಬೆಂಕಿ ಹಚ್ಚಿ ಎದುರಿದ್ದ ಗುಂಪಿನ ಮೇಲೆ ಎಸೆಯ ತೊಡಗಿದ್ದರು. ಸುತ್ತುವರಿದ ದಟ್ಟ ಹೊಗೆ ಬಿಳಿ ಕಾರ್ಮೋಡದಂತೆ ಆವರಿಸಿತು. ಇದನ್ನು ಸಾಕ್ಷಾತ್ ಅನುಭವಿಸುವಾಗ ಮೈ ಜುಮ್ಮೆನ್ನುತ್ತದೆ.

'ತೂಟೆದಾರ'ದ ಸಂದರ್ಭದಲ್ಲಿ ಎರಡೂ ಊರಿನ ಜನರಿಗೆ ಕುಂಕುಮ ಹಾಗೂ ಹೂವು ನೀಡಲಾಗುತ್ತದೆ. ದೇಹಕ್ಕೆ ಕುಂಕುಮ ಲೇಪನ ಮಾಡಿಕೊಳ್ಳುತ್ತಾರೆ. ಈ ಆಟದ ವೇಳೆ ಯಾವುದೇ ಅನಾಹುತಗಳು ನಡೆದಿಲ್ಲ. ಈ ತೂಟೆದಾರ ಹಿಂದಿನ ಕಾಲದಿಂದಲೂ ನಡೆದು ಬಂದಿರುವ ವಿಶೇಷವಾದ ನಂಬಿಕೆ ಹಾಗೂ ಆಚರಣೆ. ಇದು ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆಯೂ ಹೌದು.



ಅತ್ತೂರು-ಕೊಡೆತ್ತೂರು ಗ್ರಾಮಗಳ ಜನರ ನಡುವಿನ ಬೆಂಕಿ ಆಟ: ಊರಿನ ಜನರಿಗೆ ಕಷ್ಟ ಕಾರ್ಪಣ್ಯಗಳು ಬರಬಾರದೆಂದು ಹರಕೆ ರೂಪದಲ್ಲಿ ಈ ಸೇವೆಯನ್ನು ನಡೆಸಲಾಗುತ್ತದೆ. ತುಳುನಾಡಿನ ಪರಂಪರೆಯ ಪ್ರತೀಕವಾಗಿರುವ ಈ ತೂಟೆದಾರ, ಕಟೀಲು ಸಮೀಪದ ಎರಡು ಮಾಗಣೆಗಳ ಅತ್ತೂರು ಮತ್ತು ಕೊಡೆತ್ತೂರು ಗ್ರಾಮಗಳ ಜನರ ನಡುವೆ ನಡೆಯುತ್ತದೆ. ಈ ಎರಡು ಗ್ರಾಮಗಳನ್ನು ಹೊರತುಪಡಿಸಿ ಬೇರೆಯವರು ಇದರಲ್ಲಿ ಭಾಗವಹಿಸುವಂತಿಲ್ಲ. ತೂಟೆದಾರದಲ್ಲಿ ಭಾಗವಹಿಸುವವರು ಉಪವಾಸದಿಂದ ವ್ರತದಿಂದಿರುತ್ತಾರೆ. ತಾವೇ ತಯಾರಿಸಿದ ಸೂಟೆಯನ್ನು ತರುತ್ತಾರೆ.

ಸ್ನೇಹಿತರಾಗಿರುವ ಅತ್ತೂರು ಮತ್ತು ಕೊಡೆತ್ತೂರು ಜನರು ತೂಟೆದಾರ ಸಂದರ್ಭದಲ್ಲಿ ಮಾತ್ರ ಅಕ್ಷರಶಃ ವೈರಿಗಳಂತೆ ಬೆಂಕಿ ಯುದ್ಧದಲ್ಲಿ ಕಾದಾಡುತ್ತಾರೆ. ಮೂರು ಸುತ್ತು ಬೆಂಕಿಯ ಪಂಜನ್ನು ಎಸೆಯುತ್ತಾರೆ. ಆಯಾ ಗ್ರಾಮದ ಗುತ್ತು ಬರ್ಕೆಯವರು ಇದು ಅತಿರೇಕಕ್ಕೆ ಹೋಗದಂತೆ ಹತೋಟಿಗೆ ತರುತ್ತಾರೆ. 'ತೂಟೆದಾರ' ನೋಡುಗರಿಗೆ ಮನರಂಜನೆಯಾದರೂ ಇದರ ಹಿಂದೆ ಧಾರ್ಮಿಕ ನಂಬಿಕೆಯು ಇದೆ. ಅರುಣಾಸುರನನ್ನು ಸಂಹರಿಸಿದ ದೇವಿ ವಿಜಯಿಯಾಗಿ ಬರುವ ವೇಳೆ ಈ ರೀತಿ ಬೆಂಕಿಯಿಂದ ಸ್ವಾಗತ ಕೋರುವುದು ಎಂಬ ಪ್ರತೀತಿ ಇದೆ. ಈ ಭಯಂಕರ ಹೋರಾಟದಲ್ಲಿ ಯಾರು ಹಿಂದಕ್ಕೆ ಸರಿಯುತ್ತಾರೋ ಅವರು ಸೋಲುತ್ತಾರೆ. ಹಾಗಾಗಿ ಗೆಲ್ಲುವ ಛಲದಿಂದಲೇ 'ತೂಟೆದಾರ' ನಡೆಸುತ್ತಾರೆ.

ಹದಿನೈದರಿಂದ ಇಪ್ಪತ್ತು ನಿಮಿಷಗಳ ಕಾಲ ರಥ ಬೀದಿಯಲ್ಲಿ ನಡೆಯುವ ಈ ಬೆಂಕಿ ಕಾಳಗ ನೋಡುಗರಲ್ಲಿ ಮೈ ಜುಮ್ಮೆನ್ನಿಸುತ್ತದೆ. ಈ ಕಾಳಗ ಸಮಾಪ್ತಿಯಾದ ನಂತರ ಕೆಳಗೆ ಬಿದ್ದಿರುವ ಸೂಟೆಗಳನ್ನು ನಾಲ್ಕಾರು ರಾಶಿ ಮಾಡಿ ಬೆಂಕಿ ಹಾಕುತ್ತಾರೆ. ನಂತರ ಅತ್ತೂರು-ಕೊಡೆತ್ತೂರು ಗ್ರಾಮಗಳ ಜನರು ಜೊತೆಯಾಗಿ ದೇವಸ್ಥಾನದ ಒಳಗೆ ಪ್ರವೇಶಿಸಿ ದೇವಿಯ ಆಶೀರ್ವಾದ ಪಡೆಯುತ್ತಾರೆ.

ವಾಗರ್ಥದ ಹುಡುಕಾಟದಲ್ಲಿ...

8ನೇ ಪುಟದಿಂದ...

ಹಾಗೆಯೇ ಜರ್ಮನಿಯ ವಿದ್ಯಾರ್ಥಿಗಳು ಕೇರಳಕ್ಕೆ ಹೋಗಿ ಮಲಯಾಳಂ ನುಡಿ ಮತ್ತು ಕಲೆಗಳ ಅಭ್ಯಾಸ ಮಾಡುತ್ತಿದ್ದಾರೆ ಎಂದು ತಿಳಿಯಿತು. 'ಕನ್ನಡಕ್ಕಾಗಿ ಇಷ್ಟೆಲ್ಲಾ ಕೆಲಸ ಮಾಡಿದ ಕಿಟೆಲ್ ಬಗ್ಗೆ ಇಲ್ಲಿ ಯಾಕೆ ಯಾರಿಗೂ ಹೆಚ್ಚಿಗೆ ತಿಳಿದಿಲ್ಲ, ಇಲ್ಲೇಕೆ ವ್ಯವಸ್ಥಿತ ಅಧ್ಯಯನ ನಡೆದಿಲ್ಲ?' ಎಂದು ಕೇಳಿದಾಗ 'ನೀವೇ ಯಾಕೆ ಅದನ್ನು ಶುರುಮಾಡಬಾರದು?' ಎಂಬ ಉತ್ತರ ಬಂತು! ನಮ್ಮ ವಿಶ್ವವಿದ್ಯಾಲಯಗಳಿಗೆ ಇಂತಹ ಅಧ್ಯಯನಗಳಲ್ಲಿ ಆಸಕ್ತಿ ಇದ್ದಿದ್ದರೆ ಕನ್ನಡದ ಪರಿಸ್ಥಿತಿ ಹೀಗಿರುತ್ತಿರಲಿಲ್ಲ. ಕಿಟೆಲ್ ಕುರಿತು ವಸ್ತುನಿಷ್ಠವಾದ, ವಿವರವಾದ ಅಧ್ಯಯನ ಮತ್ತು ಸಂಶೋಧನೆ ಏನಿದ್ದರೂ ಶ್ರೀನಿವಾಸ ಹಾವನೂರರೊಂದಿಗೇ ಕೊನೆಗೊಂಡಿದೆ.

ಉದಾಹರಣೆಗೆ ಕಿಟೆಲ್ ಕನ್ನಡ ನಾಡಿಗೆ ಮೊದಲು ಬಂದಿಳಿದದ್ದು ಧಾರವಾಡದಲ್ಲಿ ಎಂದು ಕೆಲವರು ದಾಖಲಿಸಿದ್ದರೆ, ಅವರು ಮೊದಲು ಮಂಗಳೂರಿಗೆ ಬಂದರು ಎಂದು ಇನ್ನು ಕೆಲವರು ದಾಖಲಿಸಿದ್ದಾರೆ. ಆದರೆ ಸ್ವಲ್ಪ ಆಳವಾಗಿ ಹುಡುಕಿದರೆ ತಿಳಿಯುವುದು ಕಿಟೆಲ್ ಮೊದಲು ಬಂದಿಳಿದದ್ದು ಹೊನ್ನಾವರದಲ್ಲಿ! ಜರ್ಮನಿಯಿಂದ ಹೊರಟ ಮಿಷನರಿಗಳ ತಂಡ ಕುದುರೆ, ಒಂಟೆ ಮತ್ತು ಹಡಗಿನಲ್ಲಿ ಪ್ರಯಾಣ ಮಾಡುತ್ತ ಯುರೋಪು, ಈಜಿಪ್ಟ್ ದಾಟಿ ಮೂರು ತಿಂಗಳ ಪ್ರಯಾಣದ ನಂತರ ಮುಂಬಯಿಗೆ ಬರುವಷ್ಟರಲ್ಲಿ 21ರ ಹರೆಯದ ಕಿಟೆಲ್ ಮಿದುಳು ಜ್ವರಕ್ಕೆ ತುತ್ತಾಗಿ ಬಳಲಿದ್ದರು. ಒಂದೆರಡು ದಿನ ಮುಂಬಯಿಯ ರೇವಿನಲ್ಲೇ ಉಳಿದು, ಮುಂದೆ ಹೋಗಲೇಬೇಕಾದ ಅನಿವಾರ್ಯದಲ್ಲಿ ಅವರೆಲ್ಲ ಮಂಗಳೂರಿನ ಕಡೆಗೆ ಹೊರಟಿದ್ದರು. ಆದರೆ ಹೊನ್ನಾವರಕ್ಕೆ ಬರುವಷ್ಟರಲ್ಲಿ ಕಿಟೆಲ್ ಆರೋಗ್ಯ ತೀರಾ ಹದಗೆಟ್ಟು ಅವರನ್ನು ಅಲ್ಲಿಯೇ ಆರೈಕೆ ಮಾಡಲು ಬಿಟ್ಟು ಉಳಿದವರು ಮಂಗಳೂರಿಗೆ ತೆರಳಿದ್ದರು. ಒಂದೂವರೆ ತಿಂಗಳ ನಂತರ ಆರೋಗ್ಯ ಸುಧಾರಿಸಿದ ಮೇಲೆ ಕಿಟೆಲ್ ಎತ್ತಿನಗಾಡಿಯ ಮೇಲೆ ಧಾರವಾಡಕ್ಕೆ ಹೋಗಿದ್ದರು. ನೀಲಗಿರಿಗೆ ಹೋಗಲೆಂದು ನಿಯೋಜಿಸಲಾಗಿದ್ದ ಕಿಟೆಲ್ ಕೊನೆಯ ಕ್ಷಣದ ಬದಲಾವಣೆಯಿಂದ ಧಾರವಾಡಕ್ಕೆ ಬರುವಂತಾಗಿತ್ತು. ಧಾರವಾಡದಲ್ಲಿ ವೈಗ್ಲೆಯವರ ಬಳಿ ಕನ್ನಡ ಮತ್ತು ಇಂಗ್ಲಿಷ್ ನುಡಿಯ ಕಲಿಕೆ ಶುರುಮಾಡಿದ್ದರು. ಅಲ್ಲಿಯವರೆಗೆ ತಾಯ್ನುಡಿ ಜರ್ಮನ್ ಬಿಟ್ಟರೆ ಬಾಸೆಲ್‌ನಲ್ಲಿ ಓದುವಾಗ ಲ್ಯಾಟಿನ್ ಮತ್ತು ಹೀಬ್ರೂ ಮಾತ್ರ ಕಲಿತಿದ್ದ ಕಿಟೆಲ್ ಕನ್ನಡ, ಇಂಗ್ಲಿಷ್, ಸಂಸ್ಕೃತ, ಸ್ವಲ್ಪ ಮಟ್ಟಿಗೆ ಬಡಗ ಮತ್ತು ತಮಿಳನ್ನು ಇಲ್ಲಿಯೇ ಕಲಿತರು.

ಎಲ್ಲ ಮಿಷನರಿಗಳೂ ತಮ್ಮ ಪಾಲಿಗೆ ಬಂದ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ, ದೇವರ ಕೆಲಸ ಎಂಬಂತೆ (ಶ್ರೀನಿವಾಸ ಹಾವನೂರರು ಹೇಳುವ ಹಾಗೆ missionary zealನಿಂದ) ಮಾಡಿದರಲ್ಲದೆ ಕಿಟೆಲ್‌ಗೆ ಕನ್ನಡವೇ ಉಸಿರಾಗಿತ್ತು, ಜರ್ಮನಿಗೆ ಹಿಂತಿರುಗಿ ಹೋದಮೇಲೂ ಕನ್ನಡದಲ್ಲೇ ವ್ಯವಹರಿಸುತ್ತಿದ್ದರು ಎಂಬಂಥ ಕತೆಗಳಿಗೆ ಯಾವ ಆಧಾರವೂ ಇಲ್ಲ. ಅವರು ನೀಲಗಿರಿಗೇ ಹೋಗಿ ಅಲ್ಲಿಯೇ ನೆಲೆಸಿದ್ದರೆ ತಮಿಳು, ಬಡಗ ನುಡಿಗಳಿಗೆ ನಿಘಂಟು ತಯಾರಿಸುತ್ತಿದ್ದರೋ ಏನೋ! ಅವರ ಒಡಹುಟ್ಟಿದ ತಮ್ಮ ಕೂಡ ಮಿಷನರಿಯಾಗಿದ್ದು ಭಾರತದಲ್ಲಿ ಇರುವಷ್ಟು ಕಾಲವೂ ತಲ್ಲಿಚೇರಿಯಲ್ಲಿ ಇದ್ದರು. ಕನ್ನಡದ ಮೊದಲ ಪತ್ರಿಕೆ ಶುರುಮಾಡಿದ ಮೋಗ್ಲಿಂಗ್, ಮಲಯಾಳಂ ನಿಘಂಟು ತಯಾರಿಸಿದ ಗುಂಡರ್ಟ್ ಮುಂತಾದವರ ಜೊತೆಗೆ ಕಿಟೆಲ್ ನಿಕಟ ಸಂಪರ್ಕದಲ್ಲಿದ್ದು, ಅವರೊಂದಿಗೆ ಚರ್ಚಿಸುತ್ತಿದ್ದರು. ಕಿಟೆಲ್‌ಗೂ ಮೊದಲು ತ್ಸಿಗ್ಲರ್ ಕನ್ನಡಕ್ಕೊಂದು ಪುಟ್ಟ ನಿಘಂಟು ತಯಾರಿಸಿದ್ದರು. ಇಂಡಿಯನ್ ಆಂಟಿಕ್ವೆರಿ ಎಂಬ ವಿದ್ವತ್ ಪತ್ರಿಕೆಗೆ ಕಿಟೆಲ್ ಆಗಾಗ ಬರೆಯುತ್ತಿದ್ದುದಲ್ಲದೆ ಆ ಕಾಲದ ಹಲವಾರು ವಿದ್ವಾಂಸರೊಂದಿಗೆ ಚರ್ಚಿಸುತ್ತಿದ್ದರು. ಸಣ್ಣ ಶಾಲೆಯ ಮೇಷ್ಟ್ರಾಗಿದ್ದುಕೊಂಡೇ ಪಠ್ಯ ಪುಸ್ತಕಗಳ ರಚನೆ, ಪದ್ಯಗಳ ಅನುವಾದ, ಹಳೆಗನ್ನಡದ ಅಮೂಲ್ಯ ಕೃತಿಗಳ ಸಂಪಾದನೆ ಮುಂತಾದ ಇಂದಿನ ಯುನಿವರ್ಸಿಟಿಗಳ ಪ್ರೊಫೆಸರುಗಳೂ ಮಾಡಲಾಗದಂತಹ ಕೆಲಸಗಳನ್ನು ಅವರು ಮಾಡಿರುವುದು ಗಮನಾರ್ಹ. ಇಲ್ಲಿಗೆ ಬಂದ ಮೊದಲ ಕೆಲ ವರ್ಷಗಳು ಮತಪ್ರಚಾರಕರಾಗಿ ಕೆಲಸ ಮಾಡಿದ ಕಿಟೆಲ್‌ರ ವಿದ್ವತ್ತು ಮತ್ತು ಶ್ರದ್ಧೆಯನ್ನು ಗಮನಿಸಿದ ಬಾಸೆಲ್ ಸಂಸ್ಥೆ ಅವರನ್ನು ಮತಪ್ರಚಾರದ ಕೆಲಸದಿಂದ ಬಿಡುಗಡೆಗೊಳಿಸಿತು. ಮಂಗಳೂರಿನ ಪ್ರೆಸ್‌ನ ತಮ್ಮ ಕೆಲಸದ ವ್ಯಾಪ್ತಿಯಲ್ಲಿ ಕನ್ನಡವನ್ನು ಆಳವಾಗಿ ಅಭ್ಯಸಿಸಿ ಪುಸ್ತಕಗಳ ಪ್ರಕಟಣೆ ಮತ್ತು ನಿಘಂಟು ರಚನೆ ಮಾಡಿದರಲ್ಲದೆ, ಉಳಿದಂತೆ ಜರ್ಮನ್ ಮತ್ತು ಇಂಗ್ಲಿಷ್ ಅವರ ನಿತ್ಯದ ವ್ಯವಹಾರದ ನುಡಿಯಾಗಿತ್ತು. ಇವರಂತೆ ಕನ್ನಡನಾಡಿಗೆ ತಮ್ಮ ಅನುಪಮ ಕೊಡುಗೆಯನ್ನು ಕೊಟ್ಟ ಮೋಗ್ಲಿಂಗ್, ವೈಗ್ಲೆ, ಪ್ಲೆಬ್ಸ್, ರಿಕ್ಟರ್ ಮುಂತಾದ ಮಿಷನರಿಗಳ ಬಗ್ಗೆ ಇಲ್ಲಿ ತಿಳಿದಿರುವುದು ಕಡಿಮೆ. ನಾವಿಂದು ಮಂಗಳೂರು ಹೆಂಚು ಎಂದು ಕರೆಯುವ ಟೆರಾಕೋಟಾ ಟೈಲ್ ತಂತ್ರಜ್ಞಾನವನ್ನು ಯುರೋಪಿನಿಂದ ತಂದು ಇಲ್ಲಿ ಪ್ರಚಲಿತಗೊಳಿಸಿದ್ದು ಬಾಸೆಲ್ ಮಿಷನ್. ಹಾಗೆಯೇ ಗುಣಮಟ್ಟದ ಪುಸ್ತಕ ಪ್ರಕಟಣೆಗೆ ಹೆಸರಾಗಿದ್ದ ಪ್ರೆಸ್, ಖಾಕಿ ಬಟ್ಟೆಯ ತಯಾರಿಕೆ, ಎಲ್ಲ ಧರ್ಮ, ಜಾತಿಯ ಹಿನ್ನೆಲೆಯವರಿಗೆ ಕನ್ನಡದಲ್ಲಿ ಸಮಾನ ಶಿಕ್ಷಣ ಕೊಡುವ ಶಾಲೆಗಳು ಮತ್ತು ಎಲ್ಲರಿಗೂ ಮುಕ್ತ ಪ್ರವೇಶವಿದ್ದ ಆಸ್ಪತ್ರೆಗಳ ಮೂಲಕ ನಿಜವಾಗಿ ಕನ್ನಡ ಜನರ, ನಾಡಿನ ಸೇವೆ ಮಾಡಿದ ಬಾಸೆಲ್ ಸಂಸ್ಥೆಯ ಕೆಲಸಗಳು ವಿವರವಾಗಿ ದಾಖಲಾಗಬೇಕಾಗಿದೆ. ಕಿಟೆಲ್ ಬರೆದ, ಅಂದಿನ ಪ್ರಾಥಮಿಕ ಶಾಲೆಗಳಲ್ಲಿ ಬೋಧಿಸುತ್ತಿದ್ದ ಕನ್ನಡದ ಪಠ್ಯ ಪುಸ್ತಕಗಳನ್ನು ಇಂದಿಗೂ ಹೆಚ್ಚಿನ ಬದಲಾವಣೆಯಿಲ್ಲದೆ ಉಪಯೋಗಿಸಬಹುದಾಗಿದೆ.

ಈ ಚಿತ್ರ ತಯಾರಿಕೆಯ ಮೂರು ವರ್ಷಗಳ ಪ್ರಯಾಣದಲ್ಲಿ ಕಿಟೆಲ್‌ರಂತಹ ವಿದ್ವಾಂಸರ ಕುರಿತಾಗಿ ನಮ್ಮಲ್ಲಿ ಅತಿಭಾವುಕತೆಯ ಕತೆಗಳೇ ಹೆಚ್ಚು ಪ್ರಚಲಿತದಲ್ಲಿರುವುದು ತಿಳಿದು ಬೇಸರವಾಯಿತು. ಇಂದಿನ ಸತ್ಯೋತ್ತರ ಕಾಲದಲ್ಲಿ ಇತಿಹಾಸ ಯಾವುದು, ಕಲ್ಪನೆ ಯಾವುದು ಎಂದೇ ತಿಳಿಯದ ಹಾಗೆ ಎಲ್ಲವನ್ನೂ ತಮ್ಮ ಮೂಗಿನ ನೇರದ ಸಿದ್ಧಾಂತಕ್ಕೆ ತಕ್ಕಂತೆ ತಿರುಚಲಾಗುತ್ತಿರುವಾಗ ಇಲ್ಲದ ಅಂತೆ-ಕಂತೆಗಳನ್ನು ಆಧರಿಸಿ ಕಾಲ್ಪನಿಕ ಚಿತ್ರ ಮಾಡುವುದು ಅಂತಹ ಘನ ವಿದ್ವಾಂಸರಿಗೆ ಮತ್ತು ಅವರ ಜೀವಮಾನದ ಸಾಧನೆಗೆ ಮಾಡುವ ಅಪಚಾರ ಎಂದೇ ನಂಬಿ, ದಾಖಲೆಗಳಲ್ಲಿ ದೊರೆತ ವಿವರಗಳನ್ನಷ್ಟೇ ಇಟ್ಟುಕೊಂಡು ಪ್ರಾಮಾಣಿಕವಾದ ಚಿತ್ರ ಮಾಡಿದ್ದೇವೆ. ಭೌಗೋಳಿಕ, ಧಾರ್ಮಿಕ ಮತ್ತು ಭಾಷಿಕ ಗಡಿಗಳನ್ನು ದಾಟಿ ಹೊಸ ಅರಿವಿನ ಹುಟ್ಟಿಗೆ ಕಾರಣರಾದ ಕಿಟೆಲ್‌ರ ಬದುಕು ಮತ್ತು ಕೆಲಸಗಳನ್ನು ಹಿಂತಿರುಗಿ ನೋಡಿ ನಾವಿಂದು ಇಂಥ ಗಡಿಗಳನ್ನು ಮೀರುವ, ದ್ವೇಷ ಅಳಿಸುವ ಅರಿವಿನ ಹಾದಿ ಕಂಡುಕೊಳ್ಳಬೇಕಿದೆ.

ಪೀರಿಯಡ್ ಸಿನಿಮಾ

'ಅರಿವು ಮತ್ತು ಗುರುವು' ಜರ್ಮನಿಯಿಂದ ಕನ್ನಡನಾಡಿಗೆ ಬಂದು ಕನ್ನಡಕ್ಕೆ ಮಹತ್ವದ ಕೊಡುಗೆಗಳನ್ನು ಕೊಟ್ಟ ಫರ್ಡಿನಾಂಡ್ ಕಿಟೆಲ್‌ರ ಬದುಕು ಮತ್ತು ಕೆಲಸಗಳನ್ನು ಕುರಿತ 80 ನಿಮಿಷಗಳ ಸಾಕ್ಷ್ಯಚಿತ್ರ ಸಿದ್ಧವಾಗಿದೆ. ಕನ್ನಡನಾಡಿನ ಬೇರೆ ಬೇರೆ ಕಡೆಗಳಲ್ಲಿ ಸುಮಾರು ಮೂವತ್ತು ವರ್ಷಗಳನ್ನು ಕಳೆದು, ಜರ್ಮನಿಗೆ ಹಿಂದಿರುಗಿದ ಮೇಲೂ ಕನ್ನಡದ ಕೆಲಸವನ್ನು ಮುಂದುವರಿಸಿದ ಅವರ ಜೀವನಯಾನವನ್ನು ಅವರದೇ ಮಾತುಗಳಲ್ಲಿ, ಅವರ ಕಣ್ಣೋಟದಲ್ಲಿ ಪ್ರಜ್ಞಾಪ್ರವಾಹದ ಪ್ರಕಾರದಲ್ಲಿ ಕಟ್ಟಿಕೊಡುವ ಪ್ರಯೋಗವನ್ನು ಚಿತ್ರದಲ್ಲಿ ಮಾಡಲಾಗಿದೆ. ಹಾಗೆಯೇ ಇದೊಂದು ಪೀರಿಯಡ್ ಚಿತ್ರವಾಗಿದ್ದು, ಹತ್ತೊಂಬತ್ತನೆಯ ಶತಮಾನದ ಆ ಕಾಲ ಮತ್ತು ದೇಶವನ್ನು ಆಗ ಇದ್ದಿರಬಹುದಾದಂತೆ ಕಟ್ಟುವ ಪ್ರಯತ್ನ ಮಾಡಲಾಗಿದೆ. ಕನ್ನಡ, ಜರ್ಮನ್ ಮತ್ತು ಇಂಗ್ಲಿಷ್ ನುಡಿಗಳಲ್ಲಿರುವ ಈ ಚಿತ್ರ ಈವರೆಗೆ ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಹಾಗೂ ದೆಹಲಿಯ ಹ್ಯಾಬಿಟ್ಯಾಟ್ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದೆ. ಚಿತ್ರದ ಟ್ರೇಲರ್ ವೀಕ್ಷಿಸಲು : https://youtu.be/rCDLPcGqno8

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಶ್ರೇಷ್ಠ ಕಥೆಯ ಬಾಣಲೆಯಿಂದ ಬೆಂಕಿಗೆ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



1. ಗುಂಡ ಹೆಲಿಕಾಪ್ಟರ್‌ನಲ್ಲಿ ಪ್ರವಾಸಕ್ಕೆಂದು ಹೊರಟಿದ್ದ. ಹೆಲಿಕಾಪ್ಟರ್ ಟೇಕ್‌ಆಫ್ ಆದ ಕೆಲವೇ ಕ್ಷಣಗಳಲ್ಲಿ ಅದರಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿತು. ಇನ್ನೇನು ಮಾಡುವುದು, ಜಿಗಿಯುವುದೊಂದೇ ದಾರಿ ಎಂದುಕೊಂಡ ಗುಂಡ.
2. ಜಿಗಿಯುವ ಮುನ್ನ ತಾನು ಪ್ಯಾರಚೂಟ್ ಧರಿಸಿರುವುದನ್ನು ಗುಂಡ ಖಚಿತಪಡಿಸಿಕೊಂಡಿದ್ದ. ಜಿಗಿದ ಕೂಡಲೇ ಪ್ಯಾರಚೂಟ್ ತೆರೆದ ಗುಂಡ, ಎಲ್ಲಿ ಇಳಿಯುವುದು ಎಂದು ಕಣ್ಣಾಡಿಸಿದ.
3. ಗುಂಡನ ಸುತ್ತ ಮೋಡ ಸುತ್ತುವರಿದಿದ್ದ ಕಾರಣ ಅವನಿಗೇನೂ ಕಾಣಿಸಲೇ ಇಲ್ಲ. ಕ್ಷಣಕ್ಷಣಕ್ಕೂ ಗುಂಡ ಸಾವಿರಾರು ಅಡಿ ಕೆಳಗೆ ಬೀಳುತ್ತಲೇ ಇದ್ದ. ನೆಲ ಕಾಣಿಸಿದೆ ಗುಂಡ ಮತ್ತಷ್ಟು ಗಾಬರಿಗೊಂಡ.
4. ಇಳಿಯುತ್ತಿರುವ ಜಾಗದಲ್ಲೇ ದೊಡ್ಡ ಕೆರೆ ಇದ್ದಿರುವುದನ್ನು ಗುಂಡ ಗಮನಿಸಿರಲಿಲ್ಲ. ಅದರಲ್ಲಿದ್ದ ಒಂದು ಮೊಸಳೆ ಗುಂಡ ಬೀಳುವುದನ್ನೇ ಕಾಯುತ್ತಿತ್ತು. ಬಾಣಲೆಯಿಂದ ಬೆಂಕಿಗೆ ಎನ್ನುವ ಸ್ಥಿತಿ ಗುಂಡನದ್ದಾಯಿತು.

ಗಣಿತದಲ್ಲಿ ಗರ್ದಿ ಗಮ್ಮತ್ತು

ಭಾಗಾಕಾರದಲ್ಲಿ ಬೆರಗು

ಮೂರಂಕಿಯ ಒಂದು ಸಂಖ್ಯೆಯನ್ನು ಒಂದರ ಪಕ್ಕದಲ್ಲಿ ಒಂದರಂತೆ ಎರಡು ಬಾರಿ ಬರೆದು ಅದನ್ನು 7ರಿಂದ ಭಾಗಿಸು. ಬಂದ ಭಾಗಲಬ್ಧವನ್ನು ಮತ್ತೆ 11ರಿಂದ ಭಾಗಿಸು. ಮತ್ತೆ ಬಂದ ಭಾಗಲಬ್ಧವನ್ನು 13ರಿಂದ ಭಾಗಿಸಿದರೆ ಈ ಸಾರಿ ಭಾಗಲಬ್ಧವು ಮೊದಲು ಬರೆದ ಸಂಖ್ಯೆಯೇ ಬಂದಿರುತ್ತದೆ. ಆಡಿ ನೋಡು

ಉದಾಹರಣೆ: 7) 145 145 (20735
14
0051
49
024
21
35
35
00

11) 20735 (1885
11
097
88
093
88
055
55
00

ಮತ್ತೆ
13) 1885 (145
13
58
52
065
65
00
ಮತ್ತೆ ಮರಳಿ ಮೂಲ ಸಂಖ್ಯೆ 145

ಪದ ಪರೀಕ್ಷೆ

ಇಲ್ಲಿ ಕೊಟ್ಟಿರುವ ಮಾವಿನ ಪದಕ್ಕೆ ಸರಿಹೊಂದುವ ಒಂದು ಜೋಡಿ ಪದ ಹೊಂದಿಸಿ ಹತ್ತು ಪದರಚಿಸಿ

1. ಮಾವಿನ __ __
2. ಮಾವಿನ __ __
3. ಮಾವಿನ __ __
4. ಮಾವಿನ __ __
5. ಮಾವಿನ __ __
6. ಮಾವಿನ __ __
7. ಮಾವಿನ __ __
8. ಮಾವಿನ __ __
9. ಮಾವಿನ __ __
10. ಮಾವಿನ __ __

ಮಂಗಗಳ ಉಪವಾಸ

61 ವರ್ಷಗಳ ಹಿಂದೆ ಎರಡನೇ ತರಗತಿ ಪಠ್ಯದಲ್ಲಿ ಪ್ರಕಟವಾದ ಈ ಹಾಡು ಇಂದಿಗೂ ಜನಪ್ರಿಯವಾಗಿದೆ

ಬಾಳೆಯ ತೋಟದ
ಪಕ್ಕದ ಕಾಡೊಳು
ವಾಸಿಸುತಿದ್ದವು ಮಂಗಗಳು;
ಮಂಗಗಳೆಲ್ಲವು
ಒಟ್ಟಿಗೆ ಸೇರುತ
ಒಂದುಪವಾಸವ ಮಾಡಿದವು
ಏನೂ ತಿನ್ನದೆ
ಮಟಮಟ ನೋಡುತ
ಇದ್ದವು ಮರದಲಿ ಕುಳಿತಲ್ಲೆ
ನಾಳೆಗೆ ತಿಂಡಿಯ
ಈಗಲೆ ಹುಡುಕುವೆ
ಬನ್ನಿರಿ ಎಂದಿತು ಕಪಿಯೊಂದು

'ಹೌದಣ್ಣಾ' ಎಂದೆನ್ನುತ ಎಲ್ಲವು
ಬಾಳೆಯ ತೋಟಕೆ ಹಾರಿದವು
ತೋಟದಿ ಬಾಳೆಯ
ಹಣ್ಣನು ನೋಡಲು
ಆಸೆಯು ಹೆಚ್ಚಿತು ನೀರೂರಿ

'ಸುಲಿದೇ ಇಡುವ, ಆಗದೆ?' ಎಂದಿತು
ಆಸೆಯ ಮರಿಕಪಿಯೊಂದಾಗ
'ಹೌದೆ'ನ್ನುತ
ಹಣ್ಣನು ಸುಲಿದವು
ಕೈಯೊಳೆ ಹಿಡಿದೂ ಕುಳಿತಿರಲು
'ಕೈಯೊಳಗೇತಕೆ?
ಬಾಯೊಳಗಿಟ್ಟರೆ
ಆಗದೆ?' ಎಂದಿತು ಇನ್ನೊಂದು
ಹಣ್ಣನು ಬಾಯಲಿ
ಇಟ್ಟವು. 'ಜಗಿದೇ
ಇಡುವೆವು' ಎಂದಿತು ಮತ್ತೊಂದು

ಜಗಿದೂ ಜಗಿದೂ
ನುಂಗಿದುವೆಲ್ಲಾ!
ಆಗಲೆ ಮುಗಿಯಿತು ಉಪವಾಸ

–ಮ.ಶಂ.ರಾವ್



ಪುಟಾಣಿ ಪದಬಂಧ



ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ನೀಡಲಾದ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಅರ್ಥಬದ್ಧ ಪದ ರಚಿಸಿ

1.			ಮಾ	ರಿ	ಮಾರಿ ಹೊಟ್ಟೆ ತುಂಬಿಸಿಕೊಳ್ಳುವ ಸಂಚಾರಿ ಜನಾಂಗ
2.			ಕ್ರ	ಮ	ಕ್ರಮವಾಗಿ ತೋರುವ ಕಾರ್ಯ
3.			ಜ	ನ	ಜನ ನಿಲ್ಲುವ ಕಟಕಟೆ
4.			ಬ	ರಿ	ಬರಿ ವಾಸನೆಯಲ್ಲ. ಔಷಧಿಯ ಗುಣವುಳ್ಳ ಸೊಪ್ಪು
5.			ವಾ	ರ	ವಾರಕ್ಕೊಮ್ಮೆ ತೋರುವ ಆಡಂಬರ

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ಕರಸಹಿತ = ____________
2. ಕೊಡುವವರ = ____________
3. ದಡಾನಬಿಡಿ = ____________
4. ಪಾನಕಾ ಮಾಡು = ____________

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ದಿಶಾ ಆರ್.ಜೆ.
ಸಿದ್ದಾಪುರ, ಉತ್ತರ ಕನ್ನಡ



ಗೋವರ್ಧನ
ದಾವಣಗೆರೆ



ಸಂಸ್ಕೃತಿ ಎಂ.ಎಸ್.
ಮೈಸೂರು

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ಹರಕತ್ತು 2. ಕಿತಾಪತಿ 3. ಸರೋವರ 4. ಸೋಗಲಾಡಿ 5. ದಿನಕರ

ಅದಲು ಬದಲು ಕಂಚಿ ಕದಲು
1. ಮೊಲದ ಬೇಟೆ 2. ಕೊಡುವಕಡೆ 3. ಹೊರಗೆ ಹಿತ 4. ಬಗೆಹರಿ

ಒತ್ತಕ್ಷರ ಆಟ
1. ಬಲ್ಲಾಳ 2. ಕಲ್ಲಾವಿ 3. ಕೊಲ್ಲಾರಿ 4. ಉಲ್ಲಾಸ 5. ಸಲ್ಲಾಪ 6. ಹುಲ್ಲಾಗು 7. ಕಲ್ಲಾಗು 8. ದಲ್ಲಾಳಿ 9. ಅಲ್ಲಾಡು 10. ಚೆಲ್ಲಾಡು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಕೊಕೊ ಗಾಫ್, ರೂನ್‌ಗೆ ಗೆಲುವು

ಪ್ರಿ ಕ್ವಾರ್ಟರ್‌ಗೆ ಅಲ್ಕರಾಜ್, ಇಗಾ

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್): ಸೊಗಸಾದ ಆಟದ ಮೂಲಕ ಎದುರಾಳಿಯನ್ನು ನಿಬ್ಬೆರಗಾಗಿಸಿದ ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಫಿಲಿಪ್ ಶಾಟ್ರಿಯೆರ್ ಕೋರ್ಟ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಅವರು 6-1, 6-4, 6-2 ರಿಂದ ಕೆನಡಾದ ಡೆನಿಸ್ ಶಪೊವೊಲೊವ್ ವಿರುದ್ಧ ಗೆದ್ದರು.

ಚೊಚ್ಚಲ ಫ್ರೆಂಚ್ ಓಪನ್ ಕಿರೀಟದ ನಿರೀಕ್ಷೆಯಲ್ಲಿರುವ ಅಲ್ಕರಾಜ್, ಎದುರಾಳಿಗೆ ಮರುಹೋರಾಟ ನಡೆಸಲು ಅಲ್ಪವೂ ಅವಕಾಶ ನೀಡದೆ 2 ಗಂಟೆ 10 ನಿಮಿಷಗಳಲ್ಲಿ ಗೆಲುವು ಸಾಧಿಸಿದರು.

16ರ ಘಟ್ಟದ ಪಂದ್ಯದಲ್ಲಿ ಅವರು ಇಟಲಿಯ ಲೊರೆನ್ಜೊ ಮುಸೆಟ್ಟಿ ವಿರುದ್ಧ ಪೈಪೋಟಿ ನಡೆಸುವರು. ಮುಸೆಟ್ಟಿ 6-1, 6-2, 6-4 ರಿಂದ ಬ್ರಿಟನ್‌ನ ಕ್ಯಾಮರಾನ್ ನೋರಿ ಅವರನ್ನು ಮಣಿಸಿದರು.

ಮೂರನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಡೆನ್ಮಾರ್ಕ್‌ನ ಉದಯೋನ್ಮುಖ ಪ್ರತಿಭೆ ಹೋಲ್ಗರ್ ರೂನ್ 6-4, 6-1, 6-3 ರಿಂದ ಅರ್ಜೆಂಟೀನಾದ ಗೆನಾರೊ ಅಲ್ಬರ್ಟೊ ಒಲಿವಿಯೆರಿ ಅವರನ್ನು ಸೋಲಿಸಿದರು. ನಾರ್ವೆಯ ಕ್ಯಾಸ್ಪರ್ ರೂಡ್ 4-6, 6-4, 6-1, 6-4 ರಲ್ಲಿ ಚೀನಾದ ಜಾಂಗ್ ಜಿಜೆನ್ ವಿರುದ್ಧ ಗೆದ್ದರು.



ಪಾಯಿಂಟ್ ಗೆದ್ದ ಸಂಭ್ರಮದಲ್ಲಿ ಕಾರ್ಲೊಸ್ ಅಲ್ಕರಾಜ್ –ಎಎಫ್‌ಪಿ ಚಿತ್ರ

ಬ್ರೆಜಿಲ್ ಆಟಗಾರ ಥಿಯಾಗೊ ಸಿಬೋತ್ ವೈಲ್ಡ್ ಅವರ ಕನಸಿನ ಓಟಕ್ಕೆ ಮೂರನೇ ಸುತ್ತಿನಲ್ಲಿ ತೆರೆಬಿತ್ತು. ಐದು ಸೆಟ್‌ಗಳ ದೀರ್ಘ ಹೋರಾಟದಲ್ಲಿ ಜಪಾನ್‌ನ ಯೊಶಿಹಿಟೊ ನಿಶಿಯೊಕ 3-6, 7-6, 2-6, 6-4, 6-0 ರಿಂದ ವೈಲ್ಡ್ ಅವರನ್ನು ಮಣಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 172ನೇ ಸ್ಥಾನದಲ್ಲಿರುವ ವೈಲ್ಡ್, ಮೊದಲ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಡೇನಿಯಲ್ ಮೆಡ್ವೆಡೆವ್‌ಗೆ ಆಘಾತ ನೀಡಿದ್ದರು.

ಶ್ವಾಂಟೆಕ್ ಮುನ್ನಡೆ: ಅಗ್ರಶ್ರೇಯಾಂಕದ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಮತ್ತು ಆರನೇ ಶ್ರೇಯಾಂಕದ ಆಟಗಾರ್ತಿ ಅಮೆರಿಕದ ಕೊಕೊ ಗಾಫ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ 16ರ ಘಟ್ಟ ಪ್ರವೇಶಿಸಿದರು.

ಕಳೆದ ಬಾರಿಯ ಚಾಂಪಿಯನ್ ಇಗಾ 6-0, 6-0 ರಲ್ಲಿ ಚೀನಾದ ವಾಂಗ್ ಕ್ಸಿನ್‌ಯು ವಿರುದ್ಧ ಸುಲಭವಾಗಿ ಗೆದ್ದರು. 51 ನಿಮಿಷಗಳ ಹಣಾಹಣಿಯಲ್ಲಿ ಇಗಾ ಪೂರ್ಣ ಪ್ರಭುತ್ವ ಮೆರೆದರು.

ಅರಂಭದಲ್ಲಿ ಹಿನ್ನಡೆ ಅನುಭವಿಸಿದರೂ ಲಯ ಕಂಡುಕೊಂಡ ಗಾಫ್ ಅವರು 6-7, 6-1, 6-1 ರಲ್ಲಿ ಮಿರಾ ಆ್ಯಂಡ್ರೀವಾ ಅವರನ್ನು ಮಣಿಸಿದರು.

ಹಿಂದೆ ಸರಿದ ಎಲೆನಾ ರಿಬಾಕಿನಾ

ಪ್ಯಾರಿಸ್ (ಎಪಿ): ವಿಂಬಲ್ಡನ್ ಚಾಂಪಿಯನ್ ಕಜಕಸ್ತಾನದ ಎಲೆನಾ ರಿಬಾಕಿನಾ ಅನಾರೋಗ್ಯದಿಂದಾಗಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಮೊದಲ ಎರಡು ಸುತ್ತಿನಲ್ಲಿ ಗೆಲುವು ಸಾಧಿಸಿದ್ದ ನಾಲ್ಕನೇ ಶ್ರೇಯಾಂಕದ ಎಲೆನಾ ಶನಿವಾರ ಮೂರನೇ ಸುತ್ತಿನಲ್ಲಿ ಸ್ಪೇನ್‌ನ ಸಾರಾ ಸೊರಿಬ್ಸ್ ಟಾರ್ಮೊ ಅವರನ್ನು ಎದುರಿಸಬೇಕಿತ್ತು.

ಕಳೆದ ತಿಂಗಳು ನಡೆದ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿರುವ 23 ವರ್ಷದ ಎಲೆನಾ ಈ ಟೂರ್ನಿಯ ಪ್ರಬಲ ಸ್ಪರ್ಧಿಯಾಗಿದ್ದರು.

‘ನಾನು ಜ್ವರದಿಂದ ಬಳಲುತ್ತಿದ್ದೇನೆ. ಎರಡು ದಿನಗಳಿಂದ ಸರಿಯಾಗಿ ನಿದ್ದೆ ಮಾಡಿಲ್ಲ. ಅಭ್ಯಾಸದ ವೇಳೆ ಉಸಿರಾಡಲು ಕಷ್ಟವಾಯಿತು. ಹೀಗಾಗಿ, ಸ್ಪರ್ಧೆಯಿಂದ ಹಿಂದೆ ಸರಿಯುವುದು ಅನಿವಾರ್ಯವಾಗಿದೆ’ ಎಂದು ಎಲೆನಾ ತಿಳಿಸಿದ್ದಾರೆ.

ಮಹಿಳಾ ಏಷ್ಯಾ ಕಪ್: ಭಾರತ ತಂಡದಿಂದ ಗೋಲಿನ ಮಳೆ!

ಕಾಕಮಿಗಾರಾ (ಜಪಾನ್): ಅನು ಅವರ ‘ಡಬಲ್ ಹ್ಯಾಟ್ರಿಕ್’ ಸಾಧನೆಯ ನೆರವಿನಿಂದ ಭಾರತ ತಂಡ ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಶನಿವಾರ 22–0 ಗೋಲಿನಿಂದ ಉಜ್ಬೇಕಿಸ್ತಾನ ತಂಡವನ್ನು ಸದೆಬಡಿದು ಭರ್ಜರಿಯಾಗಿ ಅಭಿಯಾನ ಆರಂಭಿಸಿತು.

ಭಾರತ ತಂಡ ಮನಬಂದಂತೆ ಗೋಲುಗಳನ್ನು ಗಳಿಸಿತು. ಅನು ಪಂದ್ಯದ 13, 29, 30, 38, 43 ಮತ್ತು 51ನೇ ನಿಮಿಷ ಗೋಲುಗಳನ್ನು ಗಳಿಸಿ ಭಾರತ ತಂಡದ ಗೆಲುವಿನಲ್ಲಿ ಗಮನ ಸೆಳೆದರು. ವೈಷ್ಣವಿ ವಿಠ್ಠಲ್ ಫಾಲ್ಕೆ (3 ಮತ್ತು 56ನೇ), ಮುಮ್ತಾಜ್ ಖಾನ್ (6, 44, 47 ಮತ್ತು 60ನೇ ನಿಮಿಷ), ಸುನೆಲಿಟಾ ಟೊಪ್ಪೊ (17, 27ನೇ ನಿಮಿಷ), ಮಂಜಾ ಚೋರ್ಸಿವಾ (26), ದೀಪಿಕಾ ಸೊರೆಂಗ್ (18 ಮತ್ತು 25ನೇ), ದೀಪಿಕಾ (32, 44, 46 ಮತ್ತು 57ನೇ) ಮತ್ತು ನೀಲಂ (47ನೇ ನಿಮಿಷ) ಗೋಲುಗಳನ್ನು ಚೆಂಡನ್ನು ಗುರಿಮುಟ್ಟಿಸಿದರು.

ಮೂರನೇ ನಿಮಿಷವೇ ವೈಷ್ಣವಿ ಪೆನಾಲ್ಟಿ ಕಾರ್ನರ್ ಮೂಲಕ ಭಾರತಕ್ಕೆ ಮುನ್ನಡೆ ದೊರಕಿಸಿಕೊಟ್ಟರು. ವಿರಾಮದ ವೇಳೆಗೇ ಭಾರತ 10–0 ಗೋಲುಗಳಿಂದ ಮುಂದಿತ್ತು. ಉತ್ತರಾರ್ಧದಲ್ಲೂ ಪರಿಸ್ಥಿತಿ ಬದಲಾಗಲಿಲ್ಲ.

ಭಾರತ ಜೂನ್ 5ರಂದು ಮಲೇಷಿಯಾ ವಿರುದ್ಧ ತನ್ನ ಎರಡನೇ ಪಂದ್ಯ ಆಡಲಿದೆ.

ಭಾರತಕ್ಕೆ ರೋಚಕ ಜಯ

ಪ್ರೊ ಲೀಗ್ ಹಾಕಿ: ಶೂಟೌಟ್‌ನಲ್ಲಿ ಬ್ರಿಟನ್‌ಗೆ ಸೋಲು

ಲಂಡನ್ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಜಯಗಳಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 4–2ರಿಂದ ಪೆನಾಲ್ಟಿ ಶೂಟೌಟ್‌ನಲ್ಲಿ ಗ್ರೇಟ್ ಬ್ರಿಟನ್ ಎದುರು ಜಯಭೇರಿ ಬಾರಿಸಿತು.

ನಿಗದಿತ ವೇಳೆಯಲ್ಲಿ ಉಭಯ ತಂಡಗಳು 4–4ರ ಸಮಬಲ ಸಾಧಿಸಿದವು. ಭಾರತದ ಹರ್ಮನ್‌ಪ್ರೀತ್ ಸಿಂಗ್ (7ನೇ ನಿ), ಮನದೀಪ್ ಸಿಂಗ್ (19ನೇ ನಿ), ಸುಖಜೀತ್ ಸಿಂಗ್ (28ನಿ) ಮತ್ತು ಅಭಿಷೇಕ್ (50ನಿ) ಗೋಲು ಗಳಿಸಿದರು.

ಆದರೆ ಅತಿಥೇಯ ತಂಡದ ಸ್ಯಾಮ್ ವಾರ್ಡ್ (8, 40, 47 ಹಾಗೂ 53ನೇ ನಿಮಿಷ) ಒಬ್ಬರೇ ನಾಲ್ಕು ಗೋಲು ಬಾರಿಸಿದರು. ಭಾರತ ತಂಡದ ಸುಲಭ ಗೆಲುವಿನ ಆಸೆಗೆ ಅಡ್ಡಗಾಲು ಹಾಕಿದರು. ಇದರಿಂದಾಗಿ ಪಂದ್ಯವು ಪೆನಾಲ್ಟಿ ಶೂಟೌಟ್ ಹಂತಕ್ಕೆ ತಲುಪಿತು.

ಭಾರತದ ಆಟಗಾರರು ಹಲವು ಬಾರಿ ಲಭಿಸಿದ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸುವಲ್ಲಿ ಎಡವಿದರು. ಬ್ರಿಟನ್ ತಂಡವು ಆರಂಭದಲ್ಲಿಯೇ ಗೋಲು ಗಳಿಸುವ ಕೆಲವು ಪ್ರಯತ್ನಗಳಿಗೆ ಭಾರತದ ಗೋಲ್‌ಕೀಪರ್ ಕ್ರಿಷನ್ ಬಹಾದ್ದೂರ್ ಪಾಠಕ್ ಅಡ್ಡಿಯಾದರು.



ಭಾರತ ತಂಡದ ಹರ್ಮನ್‌ಪ್ರೀತ್ ಸಿಂಗ್

ಶೂಟೌಟ್ ಹಂತದಲ್ಲಿ ಮನಪ್ರೀತ್ ಸಿಂಗ್, ಹರ್ಮನ್‌ಪ್ರೀತ್, ಲಲಿತ್ ಕುಮಾರ್ ಉಪಾಧ್ಯಾಯ ಮತ್ತು ಅಭಿಷೇಕ್ ತಲಾ ಒಂದು ಗೋಲು ಹೊಡೆದರು. ಬ್ರಿಟನ್ ತಂಡಕ್ಕೆ ಐದು ಅವಕಾಶಗಳಲ್ಲಿ ಎರಡು ಗೋಲು ಗಳಿಸಲಷ್ಟೇ ಸಾಧ್ಯವಾಯಿತು. ವಿಲ್ ಕೆಲ್ನಾನ್ ಗೋಲು ಹೊಡೆಯುವಲ್ಲಿ ಯಶಸ್ವಿಯಾದರು.

ಭಾರತಕ್ಕೆ ಬೋನಸ್ ಪಾಯಿಂಟ್ ಲಭಿಸಿತು. 12 ಪಂದ್ಯಗಳಿಂದ 24 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಬ್ರಿಟನ್ (11 ಪಂದ್ಯ, 26 ಅಂಕ) ಇದೆ. ಭಾರತ ತಂಡ 7ರಂದು ನೆದರ್ಲೆಂಡ್ಸ್ ಎದುರು ಆಡಲಿದೆ.

ಬಹುವರ್ಣ ಚೆಂಡುಗಳಲ್ಲಿ ಫೀಲ್ಡಿಂಗ್ ಅಭ್ಯಾಸ

ಪೋರ್ಟ್ಸ್‌ಮೌತ್ (ಪಿಟಿಐ): ಅರುಂಡೆಲ್ ಮೈದಾನದಲ್ಲಿ ಶನಿವಾರ ಬೇರೆ ಬೇರೆ ಬಣ್ಣಗಳ ರಬ್ಬರ್ ಚೆಂಡುಗಳು ಗಮನ ಸೆಳೆದವು. ಇಲ್ಲಿ ನಡೆದ ಭಾರತ ತಂಡದ ಫೀಲ್ಡಿಂಗ್ ತಾಲೀಮಿನಲ್ಲಿ ಆಟಗಾರರು ಕ್ಯಾಚ್ ಅಭ್ಯಾಸಕ್ಕಾಗಿ ಬೇರೆಬೇರೆ ಬಣ್ಣಗಳ ಚೆಂಡುಗಳನ್ನು ಬಳಸಿದರು.

ಸುಮಾರು ಎರಡು ತಿಂಗಳುಗಳ ಕಾಲ ಐಪಿಎಲ್ ಟೂರ್ನಿಯಲ್ಲಿ ಬಿಳಿಚೆಂಡಿನಲ್ಲಿ ಆಡಿರುವ ಆಟಗಾರರನ್ನು ಕೆಂಪು ಚೆಂಡಿನ ಬಳಕೆಗೆ ಒಗ್ಗಿಸುವ ಹಾದಿಯಲ್ಲಿ ಇದೊಂದು ತಂತ್ರವಾಗಿದೆ.

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಸೇರಿದಂತೆ ಆಟಗಾರರು ಹಸಿರುಬಣ್ಣದ ಚೆಂಡಿನಲ್ಲಿ ಕ್ಯಾಚ್ ಪಡೆಯುವ ಅಭ್ಯಾಸವನ್ನು ಹೆಚ್ಚು ಹೊತ್ತು ಮಾಡಿದರು. ವಿಕೆಟ್ ಕೀಪರ್ ಹಾಗೂ ಕ್ಲೋಸ್ ಇನ್ ಫೀಲ್ಡಿಂಗ್ ಅಭ್ಯಾಸಕ್ಕೆ ಹೆಚ್ಚಿನ ಆದ್ಯತೆ ಕೊಟ್ಟರು.



ಫೀಲ್ಡಿಂಗ್ ಅಭ್ಯಾಸನಿರತ ಭಾರತ ತಂಡದ ಆಟಗಾರರಾದ ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್ ಮತ್ತು ಚೇತೇಶ್ವರ್ ಪೂಜಾರ –ಪಿಟಿಐ ಚಿತ್ರ

‘ವಿಶೇಷವಾಗಿ ತಯಾರು ಮಾಡಿದ ರಬ್ಬರ್ ಚೆಂಡುಗಳಿವು. ಗಲ್ಲಿ ಕ್ರಿಕೆಟ್‌ನಲ್ಲಿ ಬಳಸುವ ಚೆಂಡುಗಳು ಇವುಗಳಲ್ಲ. ಫೀಲ್ಡಿಂಗ್ ಅಭ್ಯಾಸಕ್ಕಾಗಿಯೇ ಸಿದ್ಧಗೊಂಡ ಚೆಂಡುಗಳಿವು. ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ ಈ ಚೆಂಡುಗಳನ್ನು ಹೆಚ್ಚು ಬಳಸುತ್ತಾರೆ. ಈ ದೇಶಗಳಲ್ಲಿ ತಂಪು ವಾತಾವರಣ ಮತ್ತು ಕುಳಿರ್ಗಾಳಿಯ ಹೆಚ್ಚು. ಅದಕ್ಕಾಗಿ ಹೊಂದಿಕೊಳ್ಳಲು ಈ ಚೆಂಡು ಸಹಕಾರಿ’ ಎಂದು ಫೀಲ್ಡಿಂಗ್ ಕೋಚ್ ಹೇಳಿದರು.

’ಹಸಿರುಬಣ್ಣದ ಬಳಕೆಯ ಬಗ್ಗೆ ಯಾವುದೇ ವೈಜ್ಞಾನಿಕ ಅಥವಾ ಕ್ರಿಕೆಟ್ ಕಾರಣವಿಲ್ಲ. ಸ್ಲಿಪ್ ಫೀಲ್ಡಿಂಗ್ ಅಭ್ಯಾಸ ಮಾಡಲು ಸೂಕ್ತವಾಗಿವೆ‘ ಎಂದು ಶುಭಮನ್ ಗಿಲ್ ಹೇಳಿದರು.

ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸಿರೀಸ್ ಕುಸ್ತಿ: ರಿತಿಕಾಗೆ ಬೆಳ್ಳಿ

ಮನೀಷಾಗೆ ಚಿನ್ನದ ಪದಕ

ಬಿಷ್ಕೆಕ್ (ಪಿಟಿಐ): ಭಾರತದ ಮನೀಷಾ ಇಲ್ಲಿ ನಡೆಯುತ್ತಿರುವ ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸಿರೀಸ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡರು. ರಿತಿಕಾ ಹಾಗೂ ಸರಿತಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಶನಿವಾರ ನಡೆದ 65 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಮನೀಷಾ 6–2 ರಲ್ಲಿ ಉಕ್ರೇನ್‌ನ ಯೂಲಿಯಾ ಲೆಸ್ಕೊವೆಟ್ಸ್ ಅವರನ್ನು ಮಣಿಸಿದರು. ಇದಕ್ಕೂ ಮುನ್ನ ನಡೆದ ಮೂರೂ ಬೌಟ್‌ಗಳನ್ನು ಅವರು ತಾಂತ್ರಿಕ ಕೌಶಲ ಶ್ರೇಷ್ಠತೆಯ ಆಧಾರದಲ್ಲಿ ಗೆದ್ದು ಫೈನಲ್‌ಗೆ ಲಗ್ಗೆಯಿಟ್ಟಿದ್ದರು.

ಮೊದಲ ಬೌಟ್‌ನಲ್ಲಿ ಕಜಕಸ್ತಾನದ ಐರಿನಾ ಕಜಿಯುಲಿನಾ ವಿರುದ್ಧ ಗೆದ್ದರೆ, ಎರಡನೇ ಸುತ್ತಿನಲ್ಲಿ ಕಜಕಸ್ತಾನದವರೇ ಆದ ಗೌಖರ್ ಮುಕತಾಯ್ ಅವರನ್ನು ಮಣಿಸಿದರು. ಆ ಬಳಿಕ ಮಂಗೋಲಿಯದ ಪುರೆವ್‌ಸುರೆನ್ ಯುಲ್ಜಿಸೈಖಾನ್ ವಿರುದ್ಧ ಜಯಿಸಿದರು. ಈ ಮೂರೂ ಬೌಟ್‌ಗಳಲ್ಲಿ ಅವರು ಎದುರಾಳಿಗೆ ಯಾವುದೇ ಪಾಯಿಂಟ್ಸ್ ಬಿಟ್ಟುಕೊಡಲಿಲ್ಲ.



ಮನೀಷಾ

ರಿತಿಕಾ ಅವರು ಕಣಕ್ಕಿಳಿದ 72 ಕೆ.ಜಿ. ವಿಭಾಗದಲ್ಲಿ ಮೂವರು ಕುಸ್ತಿಪಟುಗಳು ಮಾತ್ರ ಪೈಪೋಟಿಯಲ್ಲಿದ್ದರು. ಮೊದಲ ಬೌಟ್‌ನಲ್ಲಿ 7–0 ರಲ್ಲಿ ಇಟಲಿಯ ಡಲ್ಮಾ ಕನೇವಾ ಅವರನ್ನು ಸೋಲಿಸಿದರು. ಆದರೆ ಎರಡನೇ ಬೌಟ್‌ನಲ್ಲಿ ಕಜಕಸ್ತಾನದ ಜಮಿಲಾ ಬಕ್ಬೆರ್‌ಗೆನೊವಾ ಎದುರು 0–4 ರಲ್ಲಿ ಪರಾಭವಗೊಂಡು ಬೆಳ್ಳಿಗೆ ತೃಪ್ತಿಪಟ್ಟುಕೊಂಡರು.

ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ಮೊದಲ ಪದಕವನ್ನು ಸರಿತಾ ತಂದುಕೊಟ್ಟರು. ಅವರು 59 ಕೆ.ಜಿ ವಿಭಾಗದಲ್ಲಿ ಕಂಚು ಜಯಿಸಿದರು.

ಮೊದಲ ಎರಡು ಬೌಟ್‌ಗಳಲ್ಲಿ ಟರ್ಕಿಯ ಎಬ್ರು ದಾಗ್ಬಸಿ ಮತ್ತು ಕಜಕಸ್ತಾನದ ಡಯಾನ ಕಯುಮೊವಾ ಅವರನ್ನು ಕ್ರಮವಾಗಿ 4–0 ಹಾಗೂ 7–0 ರಲ್ಲಿ ಮಣಿಸಿದ ಸರಿತಾ ಸೆಮಿಫೈನಲ್ ಪ್ರವೇಶಿಸಿದರು. ಆದರೆ ನಾಲ್ಕರಘಟ್ಟದ ಹಣಾಹಣಿಯಲ್ಲಿ 4–5 ರಲ್ಲಿ ಉಕ್ರೇನ್‌ನ ಸೊಲೊಮಿಯಾ ವ್ಯಾನಿಕ್ ಎದುರು ಸೋತರು. ಕಂಚಿನ ಪದಕಕ್ಕಾಗಿ ಪಡೆದ ಪ್ಲೇ ಆಫ್‌ನಲ್ಲಿ ತಾಂತ್ರಿಕ ಕೌಶಲದ ಶ್ರೇಷ್ಠತೆಯ ಆಧಾರದಲ್ಲಿ ಕಯುಮೊವಾ ಅವರನ್ನು ಮಣಿಸಿದರು.

50 ಕೆ.ಜಿ. ವಿಭಾಗದಲ್ಲಿ ನೀಲಂ ಅವರು ಚೀನಾದ ಜಿಗಿ ಫೆಂಗ್ ಎದುರು ಸೋತು ಸೆಮಿಫೈನಲ್ ಪ್ರವೇಶಿಸದೆ ಹೊರಬಿದ್ದರು. 53 ಕೆ.ಜಿ. ವಿಭಾಗದಲ್ಲಿ ಪೂಜಾ ಅರ್ಹತಾ ಹಂತದಲ್ಲಿ 0–4 ರಲ್ಲಿ ಚೀನಾದ ಮೆಯಿಂಗ್ ಜಿಯಾಂಗ್ ಎದುರು ಸೋತರು. ವಿನೇಶಾ ಫೋಗಟ್ ಅವರು ಪಾಲ್ಗೊಳ್ಳದ ಕಾರಣ, ಪೂಜಾ ಅವರಿಗೆ ಸ್ಪರ್ಧಿಸಲು ಅವಕಾಶ ಲಭಿಸಿತ್ತು.

ಸರ್ಫಿಂಗ್: ಕಿಶೋರ್, ಕಮಲಿಗೆ ‘ಡಬಲ್’ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನ ‘ಬಾಲ ಪ್ರತಿಭೆ’ಗಳಾದ ಕಿಶೋರ್ ಕುಮಾರ್ ಮತ್ತು ಕಮಲಿ ಮೂರ್ತಿ ಅವರುರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ‘ಡಬಲ್’ ಸಾಧನೆ ಮಾಡಿದರು. ಮೂಲ್ಕಿಯ ಮಂತ್ರ ಸರ್ಫಿಂಗ್ ಕ್ಲಬ್ ಸಹಯೋಗದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿದ್ದ ನಾಲ್ಕನೇ ಆವೃತ್ತಿಯ ಚಾಂಪಿಯನ್‌ಷಿಪ್‌ನ ಪುರುಷ ಮತ್ತು ಬಾಲಕರ ವಿಭಾಗದ ಪ್ರಶಸ್ತಿ ಕಿಶೋರ್ ಕುಮಾರ್ ಪಾಲಾದರೆ ಮಹಿಳೆಯರ ಮತ್ತು ಬಾಲಕಿಯರ ವಿಭಾಗದಲ್ಲಿ ಕಮಲಿ ಚಾಂಪಿಯನ್ ಆದರು.

ಸಸಿಹಿತ್ಲು ಕಡಲಿನಲ್ಲಿ ಶನಿವಾರ ಬೆಳಿಗ್ಗೆ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಅನುಭವಿ ಸರ್ಫರ್‌ಗಳನ್ನು ಹಿಂದಿಕ್ಕಿದ ಕಿಶೋರ್ ಕುಮಾರ್ 15.67 ಸ್ಕೋರ್ ಕಲೆ ಹಾಕಿ ಟ್ರೋಫಿಯೊಂದಿಗೆ ₹ 50 ಸಾವಿರ ಮೊತ್ತ ತಮ್ಮದಾಗಿಸಿಕೊಂಡರು. 12.90 ಸ್ಕೋರ್ ಗಳಿಸಿ ರನ್ನರ್ ಅಪ್ ಆದ ಶ್ರೀಕಾಂತ್ ಡಿ ಅವರು ಟ್ರೋಫಿ ಮತ್ತು ₹ 30 ಸಾವಿರ ಮೊತ್ತ ಗಳಿಸಿದರು. ಸೂರ್ಯ ಪಿ 9.14 ಸ್ಕೋರ್‌ಗಳೊಂದಿಗೆ ₹ 20 ಸಾವಿರ ಗಳಿಸಿದರು.



ಕಮಲಿ ಮತ್ತು ಕಿಶೋರ್ ಕುಮಾರ್

ಮಹಿಳಾ ವಿಭಾಗದ ಚಾಂಪಿಯನ್ ಕಮಲಿ 12.07 ಸ್ಕೋರ್ ಗಳಿಸಿ ಟ್ರೋಫಿ ಮತ್ತು ₹ 30 ಸಾವಿರ ತಮ್ಮದಾಗಿಸಿಕೊಂಡರು. ಕಳೆದ ಬಾರಿಯ ಚಾಂಪಿಯನ್ ಸುಗರ್ ಶಾಂತಿ (10.40 ಸ್ಕೋರ್) ರನ್ನರ್ ಅಪ್ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಅವರು ₹ 20 ಸಾವಿರ ಗಳಿಸಿದರೆ ಮೂರನೇ ಸ್ಥಾನ ಗಳಿಸಿದ ಮಂಗಳೂರು ಸರ್ಫ್ ಕ್ಲಬ್‌ನ ಸಿಂಚನಾ ಗೌಡ (5.93) ಅವರಿಗೆ ₹ 10 ಸಾವಿರ ಲಭಿಸಿತು.

ವಾಲಿಬಾಲ್ ತಂಡಕ್ಕೆ ಸಚಿವ ಲಾಡ್ ನೆರವು

ಬೆಂಗಳೂರು: ಒಡಿಶಾದಲ್ಲಿ ಸಂಭವಿಸಿರುವ ಅಪಘಾತದಿಂದ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿ, ಪಶ್ಚಿಮ ಬಂಗಾಳದ ಹೌರಾದಲ್ಲಿ ಸಿಲುಕಿರುವ ರಾಜ್ಯದ 32 ಮಂದಿ ವಾಲಿಬಾಲ್ ಪಟುಗಳು ಮತ್ತು ತರಬೇತುದಾರರು ರಾಜ್ಯಕ್ಕೆ ಮರಳಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸ್ವಂತ ವೆಚ್ಚದಲ್ಲಿ ವಿಮಾನ ಪ್ರಯಾಣದ ವ್ಯವಸ್ಥೆ ಮಾಡಿದ್ದಾರೆ.

ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಭಾಗವಹಿಸಲು ಪುರುಷರ ಹಾಗೂ ಮಹಿಳೆಯರ ತಂಡಗಳು ಕೋಲ್ಕತ್ತಕ್ಕೆ ತೆರಳಿದ್ದವು. ತರಬೇತುದಾರರೂ ಇದ್ದರು. ಪಂದ್ಯಾವಳಿ ಮುಗಿದ ನಂತರ ರೈಲಿನಲ್ಲಿ ಬೆಂಗಳೂರಿನತ್ತ ಹೊರಟಿದ್ದರು. ಅಪಘಾತದ ಕಾರಣ ಉತ್ತರ ಭಾರತದಿಂದ ಬೆಂಗಳೂರಿಗೆ ರೈಲುಗಳ ಸಂಚಾರ ಬಹುತೇಕ ಸ್ಥಗಿತಗೊಂಡಿದೆ. ಇದರಿಂದಾಗಿ ವಾಲಿಬಾಲ್ ಪಟುಗಳು ಮತ್ತು ತರಬೇತುದಾರರು ಹೌರಾ ರೈಲು ನಿಲ್ದಾಣದಲ್ಲಿ ಸಿಲುಕಿದ್ದಾರೆ.

ಅಪಘಾತದ ಸ್ಥಳದಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ತೆರಳಿರುವ ರಾಜ್ಯ ತಂಡದ ನೇತೃತ್ವ ವಹಿಸಿರುವ ಕಾರ್ಮಿಕ ಸಚಿವ ಸಂತೋಷ್ ಲಾಡ್, ವಿಷಯ ತಿಳಿಯುತ್ತಿದ್ದಂತೆಯೇ ಕ್ರೀಡಾಪಟುಗಳನ್ನು ಸಂಪರ್ಕಿಸಿ ಮಾಹಿತಿ ಪಡೆದರು. ಎಲ್ಲರನ್ನೂ ಬೆಂಗಳೂರಿಗೆ ಕರೆತರಲು ವಿಮಾನ ಪ್ರಯಾಣದ ಟಿಕೆಟ್‌ಗಳನ್ನು ಖರೀದಿಸಿದ್ದಾರೆ. ಇದಕ್ಕಾಗಿ ಕ್ರೀಡಾಪಟುಗಳು ಸಚಿವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಥಾಯ್ಲೆಂಡ್ ಓಪನ್: ಲಕ್ಷ್ಯಗೆ ನಿರಾಸೆ

ಬ್ಯಾಂಕಾಕ್ (ಪಿಟಿಐ/ ಎಎಫ್‌ಪಿ): ಮೊದಲ ಗೇಮ್ ಗೆದ್ದರೂ, ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟ ಭಾರತದ ಲಕ್ಷ್ಯ ಸೇನ್, ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತರು.

ಶನಿವಾರ ನಡೆದ ಪಂದ್ಯದಲ್ಲಿ ಆತಿಥೇಯ ದೇಶದ ಭರವಸೆ ಎನಿಸಿರುವ ಕುನ್ಲಾವುಟ್ ವಿಟಿಡ್‌ಸರ್ನ್ 13-21, 21-17, 21-13 ರಿಂದ ಲಕ್ಷ್ಯ ಅವರನ್ನು ಮಣಿಸಿ ಫೈನಲ್‌ಗೆ ಲಗ್ಗೆಯಿಟ್ಟರು.

ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಕುನ್ಲಾವುಟ್ ಅವರು ಹಾಂಗ್‌ಕಾಂಗ್‌ನ ಲೀ ಚುಕ್ ಯಿಯು ವಿರುದ್ಧ ಹಣಾಹಣಿ ನಡೆಸುವರು. ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಲೀ 21–14, 21–16 ರಲ್ಲಿ ಫ್ರಾನ್ಸ್‌ನ ಟೋಮ ಜೂನಿಯರ್ ಪೊಪೊವ್ ವಿರುದ್ಧ ಗೆದ್ದರು.

21 ವರ್ಷದ ಲಕ್ಷ್ಯ ಅವರು ಮೊದಲ ಗೇಮ್‌ನ ಆರಂಭದಲ್ಲಿ ಶಿಸ್ತಿನ ಆಟವಾಡಿ 11–6 ರಲ್ಲಿ ಮುನ್ನಡೆ ಸಾಧಿಸಿದರು. ಮರುಹೋರಾಟ ನಡೆಸಿದ ಕುನ್ಲಾವುಟ್ ಹಿನ್ನಡೆಯನ್ನು 10–11ಕ್ಕೆ ತಗ್ಗಿಸಿದರು. ಆದರೆ ಈ ಹಂತದಲ್ಲಿ ಭಾರತದ ಆಟಗಾರ ಆಕರ್ಷಕ ಹೊಡೆಗಳ ಮೂಲಕ ಲೀಡ್ ಹೆಚ್ಚಿಸಿ, ಎದುರಾಳಿಗೆ ಯಾವುದೇ ಅವಕಾಶ ನೀಡದ ಗೇಮ್ ಗೆದ್ದುಕೊಂಡರು.

ಆದರೆ ಎರಡನೇ ಗೇಮ್ ಗೆದ್ದು 1-1- ರಲ್ಲಿ ಸಮಬಲ ಸಾಧಿಸಿದ ಕುನ್ಲಾವುಟ್, ನಿರ್ಣಾಯಕ ಗೇಮ್‌ನಲ್ಲೂ ಪಾರಮ್ಯ ಮೆರೆದರು.

ಬೆಂಗಳೂರು ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಡಿ.ಟಿ.ರೇಸಿಂಗ್ ಅಂಡ್ ಬ್ರೀಡಿಂಗ್ ಎಲ್‌ಎಲ್‌ಪಿ ಜುವೆನೈಲ್ ಮಿಲಿಯನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಯಾಂಡ್‌ಕ್ಯಾಸ್ಲ್ಸ್ 8, ಡಾನ್‌ರೈಸಿಂಗ್ 2, ಬೈ ದಿ ಬುಕ್ 1
2ನೇ ರೇಸ್: ಸ್ಟೆಲ್ಲಾಂಟಿಸ್ 1, ಡಿಫೈನಿಂಗ್ ಪವರ್ 3, ಎಕ್ಸಲೆಂಟ್ ರೇ 4
3ನೇ ರೇಸ್: ಲಯೊನೆಲ್ 3, ಬಿಗ್ ರೆಡ್ 1, ಜೂಲಿಯೊ 2
4ನೇ ರೇಸ್: ರಿಕಾರ್ಡೊ 5, ಮಜಾಲ್ ಟೊವ್ 4, ಗೋಲ್ಡನ್ ಗ್ಲೋ 1
5ನೇ ರೇಸ್: ಲಜಾರಸ್ 6, ಶಬೆಲ್ 1, ಕಲಾಮಿಟ್ಸ 3
6ನೇ ರೇಸ್: ಜಮಾರಿ 12, ನಾಟಿ ಚಾರ್ಮರ್ 1, ಗಲಾಹಡ್ 8
7ನೇ ರೇಸ್: ಲಿಮಿಟೆಡ್ ಎಡಿಷನ್ 8, ಗೆಲಾಕ್ಟಿಕಸ್ 2, ಟ್ವಿಲೈಟ್ ಫೇಮ್ 4

ಉತ್ತಮ ಬೆಟ್: ಲಜಾರಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

1,500 ಮೀ ಓಟ: ಕಿಪ್ಯೆಗನ್ ವಿಶ್ವದಾಖಲೆ

ಫ್ಲಾರೆನ್ಸ್, ಇಟಲಿ (ಎಪಿ): ಕೆನ್ಯಾದ ಫೇಯ್ತ್ ಕಿಪ್ಯೆಗನ್ ಅವರು ಮಹಿಳೆಯರ 1,500 ಮೀ. ಓಟದಲ್ಲಿ ವಿಶ್ವದಾಖಲೆ ಸ್ಥಾಪಿಸಿದರು.



ಶುಕ್ರವಾರ ಇಲ್ಲಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಅವರು 3 ನಿ. 49.11 ಸೆ.ಗಳಲ್ಲಿ ಗುರಿ ತಲುಪಿದರು. ಇಥಿಯೋಪಿಯದ ಗೆನ್‌ಜೆಬೆ ದಿಬಾಬ 2015 ರಲ್ಲಿ ಸ್ಥಾಪಿಸಿದ್ದ ವಿಶ್ವದಾಖಲೆಯನ್ನು (3 ನಿ. 50.07 ಸೆ.) ಮುರಿದರು.

